11 June 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ವಿವೇಕ ಇದ್ದವನು ಬದುಕನ್ನು ಗೆಲ್ಲುತ್ತಾನೆ, ಗುಣ ಇದ್ದವನು ಮನಸ್ಸನ್ನು ಗೆಲ್ಲುತ್ತಾನೆ, ಆದರೆ ತಾಳ್ಮೆ ಇದ್ದವನು ಜಗತ್ತನ್ನೇ ಗೆಲ್ಲುತ್ತಾನೆ!
–ಸ್ನೇಹಾ ಆನಂದ್

info.varthaman@gmail.com



ಮಾದಕ ಜಾಲ ಮೂಲ ಭೇದಿಸಿ ಶಿಕ್ಷೆಗೊಳಪಡಿಸಿ: ಶ್ರೀನಿವಾಸ್ ಪುಟ ಸಂ. 2

ಪ್ರಧಾನಿಯಾಗಿ ಮೋದಿ 12 ವರ್ಷ ಪೂರ್ಣ: ವಿಶೇಷ ಪೂಜೆ ಪುಟ ಸಂ. 3

ರಾಜಿ ಮಾಡಿಕೊಳ್ಳದಿದ್ದರೆ ಯಶಸ್ಸು ಅಸಾಧ್ಯ : ಕೆ.ದೀಪಕ್ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 195 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3



## ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಲ್ಲ

### ಬಿಜೆಪಿ ಜೊತೆ ಯಾವುದೇ ಚರ್ಚೆ ಮಾಡಿರಲಿಲ್ಲ: ಎಚ್.ಡಿ.ಡಿ

**ಬೆಂಗಳೂರು:** ರಾಜ್ಯಸಭಾ ಸ್ಥಾನಕ್ಕೆ ನಾನು ಬೇಡಿಕೆ ಇಟ್ಟಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ದೆಹಲಿ ಬಿಜೆಪಿ ನಾಯಕರ ಜತೆ ಮಾತುಕತೆಯನ್ನೂ ನಡೆಸಿರಲಿಲ್ಲ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ರಾಜ್ಯಸಭಾ ಟಿಕೆಟ್ ಕೈತಪ್ಪಿದ್ದಕ್ಕೆ ದೇವೇಗೌಡರಿಗೆ ಅಪಮಾನ ಮಾಡಲಾಗಿದೆ ಎಂಬ ಅವರ ಹಿತೈಷಿಗಳ ಹಾಗೂ ಬೆಂಬಲಿಗರ ಮಾತಿಗೆ ಪ್ರತಿಕ್ರಿಯಿಸಿದ ಅವರು, ನನ್ನ ಸ್ನೇಹಿತರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನಾನು ಆ ಬಗ್ಗೆ ಎಲ್ಲಿಯೂ ಬೇಡಿಕೆ ಇಟ್ಟಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ದೇವೇಗೌಡರಿಗೆ ರಾಜ್ಯಸಭೆಗೆ ಆಯ್ಕೆ ಮಾಡದೆ ಬಿಜೆಪಿ ಮೋಸ ಮಾಡಿದೆ ಎಂಬ ಕಾಂಗ್ರೆಸ್ ಹೇಳಿಕೆ ಹಾಗೂ ಮಾಧ್ಯಮಗಳ ವರದಿ ಕಪೋಕಲ್ಪಿತವಾಗಿವೆ. ಅದಕ್ಕಾಗಿ ಎರಡು ದಿನಗಳಿಂದ ಟಿ.ವಿಯನ್ನೇ ಪುಟ 2ಕ್ಕೆ

### ರಾಜ್ಯಸಭಾ ಸ್ಥಾನಕ್ಕಾಗಿ ನಮ್ಮ ಸಂಬಂಧ ಹಾಳಾಗುತ್ತದೆಯೇ?

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ತಮ್ಮ ಸಂಬಂಧ ಕೇವಲ ರಾಜ್ಯಸಭೆ ಸ್ಥಾನಕ್ಕೆ ಸಂಬಂಧಪಟ್ಟದ್ದಲ್ಲ. ಕಳೆದ ಹತ್ತು ವರ್ಷಗಳಲ್ಲಿ ಬೆಳೆದ ವೈಯಕ್ತಿಕ ಬಾಂಧವ್ಯದ ಆಧಾರದ ಮೇಲಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಯಿಂದ ದೇಶದ ಪ್ರಧಾನಿ ಸ್ಥಾನದವರೆಗೆ ರಾಜಕೀಯವಾಗಿ ಬೆಳೆದಿದ್ದೇನೆ. ನರೇಂದ್ರ ಮೋದಿ ಅವರು ದೇಶಕ್ಕೆ ಉತ್ತಮ ಆಡಳಿತ ನೀಡುತ್ತಿದ್ದಾರೆ. ಪಕ್ಷಕ್ಕೆ ಬಹುಮತ ಬಂದಾಗಲೂ ಮಿತ್ರ ಪಕ್ಷಗಳನ್ನು ಕಡೆಗಣಿಸಿಲ್ಲ. ಅವರ ನನ್ನ ಸಂಬಂಧ ಚೆನ್ನಾಗಿದೆ. 10 ವರ್ಷಗಳಿಂದ ಪುಟ 2ಕ್ಕೆ

# ಖಾತೆ ಕ್ಯಾತೆ: ದೆಹಲಿಗೆ ಡಿಕೆಶಿ

### ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ಸಾಧ್ಯತೆ: ಸಿಎಂ, ಡಿಸಿಎಂ ದೌಡು

**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಭೇಟಿಗಾಗಿ ಎರಡು ದಿನಗಳ ದೆಹಲಿ ಪ್ರವಾಸ ಕೈಗೊಂಡಿದ್ದಾರೆ. ಸಿಎಂಗೆ ಡಿಸಿಎಂ ಡಾ.ಜಿ.ಪರಮೇಶ್ವರ್ ಸಾಥ್ ನೀಡಿದ್ದಾರೆ.

ಖಾತೆ ಹಂಚಿಕೆ ವಿಚಾರದಲ್ಲಿ ಕೆಲವು ಸಚಿವರ ಅಸಮಾಧಾನದ ನಡುವೆಯೂ ಸಂಪುಟ ವಿಸ್ತರಣೆ ಮತ್ತು ಇನ್ನುಳಿದ ಖಾತೆಗಳ ಹಂಚಿಕೆ ವಿಷಯಗಳ ಕುರಿತು ಹೈಕಮಾಂಡ್ ಜೊತೆ ಚರ್ಚಿಸುವ ಸಾಧ್ಯತೆ ಇದೆ.

ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಡಿ.ಕೆ.ಶಿವಕುಮಾರ್ ದೆಹಲಿಗೆ ಭೇಟಿ ನೀಡುತ್ತಿದ್ದಾರೆ. ಗುರುವಾರ ನೀತಿ ಆಯೋಗದ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕೆಲವು ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ.

ಎರಡು ದಿನಗಳ ದೆಹಲಿ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗೆ ಸಿಎಂ ಡಿಕೆ ಶಿವಕುಮಾರ್ ಸಮಯ ಕೇಳಿದ್ದಾರೆ. ನಾಳೆ ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆಯುವ ನೀತಿ ಆಯೋಗದ ಸಭೆಗೆ ಡಿಕೆಶಿ ಭಾಗಿಯಾಗಲಿದ್ದಾರೆ. ಈ ಸಭೆಯ ಹೊರತಾಗಿ ಪ್ರತ್ಯೇಕ ಭೇಟಿಗೆ ಡಿಕೆಶಿ ಸಮಯ ಕೇಳಿದ್ದಾರೆ.

2025ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೂರ್ವನಿಗದಿತ ಕಾರ್ಯಕ್ರಮದ ಕಾರಣ ನೀಡಿ ನೀತಿ ಆಯೋಗದ 10ನೇ ಆಡಳಿತ ಮಂಡಳಿ ಸಭೆಗೆ ಗೈರಾಗಿದ್ದರು. ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಆ ಸಭೆಗೆ ತಮ್ಮ ಸಂದೇಶವನ್ನು ಕಳುಹಿಸಿ ಮಂಡಿಸಲು ಸೂಚಿಸಿದ್ದರು. ಪುಟ 2ಕ್ಕೆ



### ಸೋನಿಯಾ, ರಾಗಾ ಭೇಟಿ

**ನವದೆಹಲಿ:** ದೆಹಲಿಗೆ ತೆರಳಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಜನಪತ್ ನಿವಾಸದಲ್ಲಿ ಬುಧವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಇದಕ್ಕೂ ಮೊದಲು ದೆಹಲಿಯಲ್ಲಿನ ರಾಷ್ಟ್ರೀಯ ಯುವ ಕಾಂಗ್ರೆಸ್ ಕಚೇರಿಗೆ ಬುಧವಾರ ಭೇಟಿ ನೀಡಿದ್ದರು. ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ್, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ, ಕಾಂಗ್ರೆಸ್ ಮುಖಂಡರಾದ ಎಂಎಲ್ಸಿ ಬಸನಗೌಡ ಬಾದರ್ಲಿ, ಇನಾಯತ್ ಅಲಿ, ನಾಗೇಶ್ ಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

## ರೇಣುಕಾಸ್ವಾಮಿ ಕೊಲೆ ಪ್ರಕರಣ: ಐವರಿಗೆ ಹೈಕೋರ್ಟ್ ರಿಲೀಫ್



**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದ ಐವರು ಆರೋಪಿಗಳಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. ಆರೋಪಿ ದರ್ಶನ್ ಸಹಚರರಾದ ವಿನಯ್, ನಂದೀಶ್, ಧನರಾಜು, ಪವನ್ ಮತ್ತು ರಾಘವೇಂದ್ರ ಸೇರಿದಂತೆ ಐವರು ಆರೋಪಿಗಳ ಜಾಮೀನು ರದ್ದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ.

ಈ ಹಿಂದೆ ನಟ ದರ್ಶನ್ ಸೇರಿದಂತೆ ಏಳು ಜನ ಆರೋಪಿಗಳ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. ಸುಪ್ರೀಂ ಕೋರ್ಟ್ನ ಈ ಆದೇಶದ ಬೆನ್ನಲ್ಲೇ, ಪ್ರಾಸಿಕ್ಯೂಷನ್ ಆಗಸ್ಟ್ನಲ್ಲಿ ಹೈಕೋರ್ಟ್ಗೆ ಅರ್ಜಿ ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ಆದೇಶದ ಅನ್ವಯವೇ ಇತರೆ ಐವರು ಆರೋಪಿಗಳ ಜಾಮೀನು ರದ್ದು ಮಾಡುವಂತೆ ಪ್ರಾಸಿಕ್ಯೂಷನ್ ಮನವಿ ಮಾಡಿತ್ತು.

ಹೈಕೋರ್ಟ್ ನ್ಯಾಯಮೂರ್ತಿ ಎಸ್. ರಾಚಯ್ಯ ಪೀಠವು, ಪ್ರಾಸಿಕ್ಯೂಷನ್ ಮತ್ತು ಆರೋಪಿಗಳ ವಾದ ಪ್ರತಿವಾದಗಳನ್ನು ಆಲಿಸಿ ಪ್ರಾಸಿಕ್ಯೂಷನ್ ಅರ್ಜಿಯನ್ನ ವಜಾ ಮಾಡಿದೆ.

### ಸಚಿವ ಸ್ಥಾನ ನಿರೀಕ್ಷೆಯಲ್ಲಿದ್ದ ಜಯಚಂದ್ರಗೆ ದೆಹಲಿ ಪ್ರತಿನಿಧಿ

**ಬೆಂಗಳೂರು:** ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದ ಹಿರಿಯ ಶಾಸಕ ಟಿ.ಬಿ. ಜಯಚಂದ್ರ ಅವರನ್ನು ಕರ್ನಾಟಕದ ದೆಹಲಿ ವಿಶೇಷ ಪ್ರತಿನಿಧಿಯನ್ನಾಗಿ ನೇಮಿಸಲಾಗಿದೆ. ಸಚಿವ ಸ್ಥಾನ ಸಿಗದೆ ಅವರು ನಿರಾಶರಾಗಿದ್ದಾರೆ.




ವಿಧಾನ ಪರಿಷತ್ ಸದಸ್ಯ ಪ್ರಕಾಶ್ ಹುಕ್ಕೇರಿ ಅವರನ್ನು ಕರ್ನಾಟಕ ರಾಜ್ಯದ ವಿಶೇಷ ಪ್ರತಿನಿಧಿ–2 ಆಗಿ ನೇಮಿಸಿದೆ. ಪ್ರಕಾಶ್ ಹುಕ್ಕೇರಿ ಮತ್ತು ಜಯಚಂದ್ರ ಅವರಿಗೆ ಸಂಪುಟ ಸ್ಥಾನಮಾನದೊಂದಿಗೆ ಸಂಪುಟ ದರ್ಜೆ ಸಚಿವರಿಗೆ ಅನ್ವಯವಾಗುವ ಎಲ್ಲ ಸೌಲಭ್ಯಗಳನ್ನು ನೀಡಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

## ನೆಹರು ದಾಖಲೆ ಮುರಿದ ಮೋದಿ

### 4,399 ದಿನಗಳ ನಿರಂತರ ಸೇವೆ ಮೈಲುಗಲ್ಲು ಸ್ಥಾಪನೆ

**ನವದೆಹಲಿ:** ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಆಡಳಿತ ಅವಧಿಯ ದಾಖಲೆಯನ್ನು ಮುರಿಯುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದ್ದಾರೆ. ಭಾರತದ ಅತಿ ಹೆಚ್ಚು ಕಾಲ ಚುನಾಯಿತ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಮೋದಿ ಅವರು ಜೂನ್ 10 ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ದೀರ್ಘಕಾಲ ನಿರಂತರ ಅಧಿಕಾರ ನಡೆಸಿದ ಪ್ರಧಾನಿ ಎಂಬ ಹೊಸ ದಾಖಲೆ ಬರೆದಿದ್ದಾರೆ. ಈ ಮೂಲಕ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ 4,398 ದಿನಗಳ ದಾಖಲೆ ಮುರಿದು 4,399 ದಿನಗಳ ನಿರಂತರ ಸೇವೆಯ ಮೈಲುಗಲ್ಲು ತಲುಪಿದ್ದಾರೆ. ಪುಟ 2ಕ್ಕೆ



### ಮೋದಿ ಸಾಧನೆ: ಬಿಜೆಪಿ ಸಂಭ್ರಮ

**ನವದೆಹಲಿ:** ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ 4,399 ದಿನಗಳು ಅಂದರೆ 12 ವರ್ಷ ಪೂರ್ಣಗೊಳಿಸಿದ್ದಾರೆ. ಈ ಮೂಲಕ ನೆಹರು ದಾಖಲೆ ಮುರಿದ ಸಂದರ್ಭವನ್ನು ಬಿಜೆಪಿ ಸಂಭ್ರಮದಿಂದ ದೇಶಾದ್ಯಂತ ಆಚರಿಸುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಸಾಧನೆಗಳನ್ನು ರಾಜ್ಯ ಬಿಜೆಪಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ. ಮೂಲಸೌಕರ್ಯ, ಸ್ಟಾರ್ಟ್‌ಅಪ್ ಸೇರಿದಂತೆ ಹೂಡಿಕೆಯವರೆಗೆ ಭಾರತವಿಂದು ಮಹತ್ವದ ದಾಖಲೆಗಳನ್ನು ನಿರ್ಮಿಸಿದೆ. ಸಮರ್ಥ ನಾಯಕತ್ವ, ದೂರದೃಷ್ಟಿ ಮತ್ತು ದೃಢ ಸಂಕಲ್ಪದೊಂದಿಗೆ ನವ ಪುಟ 2ಕ್ಕೆ

## ಪ್ರಜಾಪ್ರಭುತ್ವ ಹಾಳುಗೆಡವಿದ ಮೋದಿ

### ಮೋದಿ ದಾಖಲೆ ಸಂಭ್ರಮ ದೊಡ್ಡ ಅಣಕ: ಸಿದ್ದರಾಮಯ್ಯ ಕಿಡಿ

**ಬೆಂಗಳೂರು:** ಪ್ರಜಾಪ್ರಭುತ್ವವನ್ನು ಹಾಳುಗೆಡವುದರ ಮೂಲಕ ದೀರ್ಘಾವಧಿ ಪ್ರಧಾನಿಯಾಗಿ ಮುಂದುವರಿದಿರುವ ನರೇಂದ್ರ ಮೋದಿ ಸಾಧನೆ ಬಗ್ಗೆ ಬಿಜೆಪಿ ಸಂಭ್ರಮಿಸುತ್ತಿರುವುದು ಪ್ರಜಾಪ್ರಭುತ್ವದ ವಿರುದ್ಧದ ಅತಿದೊಡ್ಡ ಅಣಕವಾಗಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಮಧ್ಯಪ್ರದೇಶದಿಂದ ರಾಜ್ಯಸಭಾ ಅಭ್ಯರ್ಥಿಯಾಗಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ಮೀನಾಕ್ಷಿ ನಟರಾಜನ್ ನಾಮಪತ್ರವನ್ನು ಮೋದಿ ಕಪಿಮುಷ್ಠಿಯಲ್ಲಿರುವ ಚುನಾವಣಾ ಆಯೋಗ ತಿರಸ್ಕಾರ ಮಾಡಿರುವುದು ಇದಕ್ಕೆ ಜ್ವಲಂತ ಉದಾಹರಣೆ ಎಂದು ಟೀಕಿಸಿ ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಮೀನಾಕ್ಷಿ ನಟರಾಜನ್ ಅವರ ನಾಮಪತ್ರದಲ್ಲಿ ಕೆಲವು ಲೋಪದೋಷಗಳನ್ನು ಸೃಷ್ಟಿ ಮಾಡಿ ತಿರಸ್ಕಾರ ಮಾಡಲಾಗಿದೆ. ಇದು ಸ್ಪಷ್ಟ ಚುನಾವಣಾ ಅಕ್ರಮ ಹಾಗೂ ರಾಜಕೀಯ ಷಡ್ಯಂತ್ರ ಎಂದು ಕಿಡಿಕಾರಿದ್ದಾರೆ.

ಈ ಷಡ್ಯಂತ್ರದ ಭಾಗವಾಗಿ ಮಧ್ಯಪ್ರದೇಶದಿಂದ ರಾಜ್ಯಸಭೆಗೆ ಕೇವಲ ಇಬ್ಬರು ಅಭ್ಯರ್ಥಿಗಳನ್ನಷ್ಟೇ ಗೆಲ್ಲಿಸಿಕೊಳ್ಳಬಹುದಾದ ಸಂಖ್ಯಾಬಲ ಹೊಂದಿದ್ದ ಬಿಜೆಪಿ 3ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಕಾಂಗ್ರೆಸ್ ಶಾಸಕರು ಒಗ್ಗಟ್ಟಾದ ಕಾರಣ ಬಿಜೆಪಿಯ ಕುದುರೆ ವ್ಯಾಪಾರ ನಡೆಯಲಿಲ್ಲ. ಕೊನೆಯ ಅಸ್ತ್ರ ಎಂಬಂತೆ ಚುನಾವಣಾ ಆಯೋಗದ ಮೂಲಕ ಅಭ್ಯರ್ಥಿಯ ನಾಮಪತ್ರವೇ ತಿರಸ್ಕೃತಗೊಳ್ಳುವಂತೆ ಮಾಡಿದೆ ಎಂದು ಆರೋಪಿಸಿದ್ದಾರೆ.



ಚುನಾವಣಾ ಆಯೋಗದ ಈ ನಿರ್ಧಾರ ಪಕ್ಷಪಾತವಾಗಿದೆ. ಚುನಾವಣೆಯನ್ನು ಪುಟ 2ಕ್ಕೆ

### ನಾಳೆ ಕೊಲ್ಲೂರುಗೆ ಸಿಎಂ ವಿಜಯ್ ಭೇಟಿ




**ಉಡುಪಿ:** ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಶುಕ್ರವಾರ (ಜೂ.12) ಮೊದಲ ಬಾರಿಗೆ ಕೊಲ್ಲೂರು ಮೂಕಾಂಬಿಕೆ ಸನ್ನಿಧಿಗೆ ಭೇಟಿ ನೀಡಲಿದ್ದಾರೆ. ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಕೊಲ್ಲೂರಿಗೆ ಆಗಮಿಸಲಿದ್ದಾರೆ. ದೇವಿ ದರ್ಶನ ಪಡೆದ ನಂತರ ಸಂಜೆ ಮಂಗಳೂರು ವಿಮಾನ ನಿಲ್ದಾಣದಿಂದ ಚೆನ್ನೈಗೆ ತೆರಳಲಿದ್ದಾರೆ.

## ಮುಖ್ಯಶಿಕ್ಷಕನ ಕಿರುಕುಳ: ವಿದ್ಯಾರ್ಥಿ ಆತ್ಮಹತ್ಯೆ

**ಬೀದರ್:** ಮುಖ್ಯಶಿಕ್ಷಕನ ಕಿರುಕುಳಕ್ಕೆ ಬೇಸತ್ತು ಶಾಲೆಯ 4ನೇ ಮಹಡಿಯಿಂದ ಬಿದ್ದು ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೀದರ್‌ನಲ್ಲಿ ನಡೆದಿದೆ.



ಶಾಂತಿನಗರದ ನಿವಾಸಿ ಸಮೀರ್ (15) ಮೃತ ಬಾಲಕ. ಶಾಲೆಯಲ್ಲಿ ಈತ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದ. ಬುಧವಾರ ಬೆಳಗ್ಗೆ ಸ್ಕೂಲ್‌ಗೆ ಹೋಗಿ ನಾಲ್ಕನೇ ಮಹಡಿಯಿಂದ ಹಾರಿ ಸಾವನ್ನಪ್ಪಿದ್ದಾನೆ. ಆತ್ಮಹತ್ಯೆ ಮಾಡಿಕೊಂಡ ವಿಷಯವನ್ನು ಪೋಷಕರಿಗೆ ಹೇಳದೆ ವಿದ್ಯಾರ್ಥಿಯ ಮೃತದೇಹ ವನ್ನು ಶಾಲೆ ಆಡಳಿತ ಮಂಡಳಿ ಬ್ರಿಮ್ಸ್ ಆಸ್ಪತ್ರೆಗೆ ಸಾಗಿಸಿದೆ. ಇದು ಹಲವು ಅನುಮಾನಕ್ಕೆ ಕಾರಣವಾಗಿದೆ.

## ಗೃಹಲಕ್ಷ್ಮಿ ಯೋಜನೆ ಅಕ್ರಮ: 4.30 ಲಕ್ಷ ಮಹಿಳೆಯರು ಔಟ್

**ಬೆಂಗಳೂರು:** ರಾಜ್ಯದ 4.30 ಲಕ್ಷ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ಹೆಸರುಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಡಿಲಿಟ್ ಮಾಡಿದೆ.

ಸತ್ತವರ ಬ್ಯಾಂಕ್ ಅಕೌಂಟ್‌ಗೆ ಹಣ ಹೋಗುತ್ತಿರುವ ಬಗ್ಗೆ ಹಾಗೂ ಯೋಜನೆಯ ಹಣ ದುರ್ಬಳಕೆ ಆಗುತ್ತಿರುವ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪರಿಷ್ಕರಣೆ ಮಾಡಲು ನಿರ್ಧರಿಸಿತ್ತು. ಗ್ರಾಮ ಪಂಚಾಯಿತಿವಾರು ಆಶಾ ಕಾರ್ಯಕರ್ತೆಯರು ಮಾಹಿತಿ ಸಂಗ್ರಹಿಸಿದ್ದರು.

ರಾಜ್ಯದಲ್ಲಿ ಒಟ್ಟು 1.20 ಕೋಟಿಗೂ ಅಧಿಕ ಫಲಾನುಭವಿಗಳಿದ್ದಾರೆ. ಮೃತಪಟ್ಟವರನ್ನು ಕೈಬಿಡಲಾಗಿದೆ. ಸದ್ಯ 4.30 ಲಕ್ಷ ಫಲಾನುಭವಿಗಳ ಹೆಸರನ್ನು ಡಿಲೀಟ್ ಮಾಡಲಾಗಿದೆ. ಈ ಮೂಲಕ ನೂರಾರು ಕೋಟಿ ರೂ. ಉಳಿತಾಯ ಆಗಲಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಪುಟ 2ಕ್ಕೆ




## ಚಿನ್ನ, ಬೆಳ್ಳಿ ಬೆಲೆ ಕುಸಿತ

**ಬೆಂಗಳೂರು:** ಮಧ್ಯಪ್ರಾಚ್ಯ ಯುದ್ಧ ಭೀತಿ ನಡುವೆಯೇ ಚಿನ್ನದ ಬೆಲೆಯಲ್ಲಿ ಬುಧವಾರ ಭಾರಿ ಕುಸಿತವಾಗಿದೆ. 10 ಗ್ರಾಂ ಚಿನ್ನದ ದರ 4300 ರೂ. ಇಳಿಕೆ ಕಂಡಿದೆ.



ಬುಧವಾರ 24 ಕ್ಯಾರೆಟ್ 10 ಗ್ರಾಂ ಚಿನ್ನದ ಮೇಲೆ ಒಂದೇ ದಿನ ಬರೋಬ್ಬರಿ 4300 ರೂ. ಇಳಿಕೆ ಕಂಡಿದೆ. ಜೂನ್ ತಿಂಗಳಿನಲ್ಲೇ ಚಿನ್ನದ ಬೆಲೆಯಲ್ಲಿ ಅತಿದೊಡ್ಡ ಕುಸಿತ ಎನಿಸಿಕೊಂಡಿದೆ. 1 ಗ್ರಾಮ್ 24 ಕ್ಯಾರಟ್ ಚಿನ್ನದ ಬೆಲೆ 14,886 ರೂ. ಆಗಿದೆ. ಜೂನ್ 06ರಂದು 24 ಕ್ಯಾರಟ್ 10 ಗ್ರಾಮ್ ಚಿನ್ನದ ಬೆಲೆ 3000 ರೂ. ಇಳಿಕೆ ಕಂಡಿತ್ತು. 22 ಕ್ಯಾರಟ್ 10 ಗ್ರಾಮ್ ಚಿನ್ನದ ಮೇಲೆ ಬರೋಬ್ಬರಿ 3950 ರೂ. ಇಳಿಕೆ ಯಾಗಿದೆ. ಒಂದು ಗ್ರಾಮ್ 22 ಕ್ಯಾರಟ್ ಚಿನ್ನದ ಬೆಲೆ 13,645 ರೂ. ಆಗಿದೆ. ಚಿನ್ನದ ದರ ಮಾತ್ರವಲ್ಲದೇ ಬೆಳ್ಳಿ ಬೆಲೆಯಲ್ಲೂ ಭಾರಿ ಕುಸಿತವಾಗಿದೆ.ಬುಧವಾರ ಒಂದು ಕೆಜಿ ಬೆಳ್ಳಿ ಬೆಲೆ 2,50,000 ರೂ.ಗೆ ಇಳಿದಿದೆ. ಪುಟ 2ಕ್ಕೆ

## ಮಹಿಳೆಯರನ್ನು ಮತ್ತೆ ಸೌಧೆ ಒಲೆಗೆ ತಳ್ಳಿದ ಮೋದಿ: ರಾಗಾ

**ನವದೆಹಲಿ:** ಪ್ರಧಾನ ಮಂತ್ರಿ ಉಜ್ವಲ ಯೋಜನೆ ಅಡಿಯಲ್ಲಿ ಸಬ್ಸಿಡಿ ಹೊಂದಿರುವ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆಯನ್ನು 9ರಿಂದ ನಾಲ್ಕಕ್ಕೆ ಇಳಿಸುವ ನಿರ್ಧಾರವನ್ನು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ದೇಶದ ಲಕ್ಷಾಂತರ ಬಡ ಕುಟುಂಬಗಳು ಮತ್ತು ಮಹಿಳೆಯರನ್ನು ಮತ್ತೆ ಸೌಧೆ ಒಲೆಯತ್ತ ತಳ್ಳಿದ್ದಾರೆ ಎಂದು ಟೀಕಿಸಿ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹನ್ನೆರಡು ವರ್ಷಗಳ ಬಡವರ ವಿರೋಧಿ ಆರ್ಥಿಕ ನೀತಿಗಳು ಮತ್ತು ರಾಜಿ ಮಾಡಿಕೊಂಡ ವಿದೇಶಾಂಗ ನೀತಿ ದೇಶವನ್ನು ಲಕ್ಷಾಂತರ ಬಡ ಕುಟುಂಬಗಳು ಮತ್ತು ಮಹಿಳೆಯರನ್ನು ವಿಷಕಾರಿ ಸೌಧೆ ಒಲೆಯತ್ತ ತಳ್ಳಿದ್ದಾರೆ. ಮೊದಲು ಬೆಲೆಗಳನ್ನು ಹೆಚ್ಚಿಸಿ ನಂತರ ಸಬ್ಸಿಡಿಗಳನ್ನು ಕಡಿತಗೊಳಿಸಿ ಮತ್ತು ಬಡವರ ಒಲೆ ನಂದಿಸಿ ಎಂದು ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.



ವಲಸೆ ಕಾರ್ಮಿಕರು ಹೆಚ್ಚಾಗಿ ಬಳಸುವ 5 ಕೆಜಿ ಎಲ್‌ಪಿಜಿ ಸಿಲಿಂಡರ್‌ನ ಬೆಲೆ 323 ರೂ.ಗಳಷ್ಟು ಏರಿಕೆಯಾಗಿದೆ. ಇದರಿಂದ ಕಾರ್ಮಿಕರು ತಮ್ಮ ಖರ್ಚುಗಳನ್ನು ಹೇಗೆ ನಿಭಾಯಿಸುತ್ತಾರೆ ಎಂದು ಪ್ರಶ್ನಿಸಿದ್ದಾರೆ.

ಸರ್ಕಾರ ಶ್ರೀಮಂತ ಕೈಗಾರಿಕೋದ್ಯಮಿಗಳಿಗೆ ಬೆಂಬಲ ನೀಡುತ್ತಿದೆ. ಬಡವರ ಮೇಲೆ ಹೊರೆ ಹಾಕಿದೆ. ಕಾರ್ಮಿಕರು, ರೈತರು, ಮಹಿಳೆಯರು ಮತ್ತು ಮಧ್ಯಮ ವರ್ಗದವರು ಹೆಚ್ಚಾಗುತ್ತಿರುವ ಆರ್ಥಿಕ ವೆಚ್ಚವನ್ನು ಹೇಗೆ ನಿರ್ವಹಿಸುತ್ತಾರೆ ಎಂದು ಪ್ರಶ್ನಿಸಿದ್ದಾರೆ.

## ಕಸದಲ್ಲೂ 10 ಸಾವಿರ ಕೋಟಿ ಕಿಕ್‌ಬ್ಯಾಕ್

### ರಾಜ್ಯಪಾಲರಿಗೆ ಅಶೋಕ್ ನೇತೃತ್ವದ ಬಿಜೆಪಿ ನಿಯೋಗದಿಂದ ದೂರು

**ಬೆಂಗಳೂರು:** ಕಾಂಗ್ರೆಸ್ ಸರ್ಕಾರ ಬೆಂಗಳೂರಿನಲ್ಲಿ ಕಸ ಸಂಸ್ಕರಣೆ ಮಾಡುವ ನೆಪದಲ್ಲಿ 39,000 ಕೋಟಿ ಹಗರಣ ನಡೆಸಿದೆ. 35 ವರ್ಷಗಳ ಸುದೀರ್ಘ ಅವಧಿಗೆ ಎಂಎಸ್‌ಡಬ್ಲ್ಯು ಸೊಲ್ಯೂಶನ್ಸ್ ಲಿಮಿಟೆಡ್‌ಗೆ ನೀಡುತ್ತಿರುವ ಟೆಂಡರ್‌ನ ಒಟ್ಟು ಮೊತ್ತದಲ್ಲಿ 10,000 ಕೋಟಿ ಕಿಕ್‌ಬ್ಯಾಕ್ ಪಡೆಯಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಬೆಂಗಳೂರು ಜನರು ಬೆಚ್ಚಿಬೀಳುವಂತಹ ಹಗರಣವನ್ನು ಕಾಂಗ್ರೆಸ್ ಸರ್ಕಾರ ಕಸದ ಹೆಸರಲ್ಲಿ ಮಾಡಿದೆ. ಇದು ಹೈಕಮಾಂಡ್‌ನ ಕಪ್ಪ ಕಾಣಿಕೆ ಟೆಂಡರ್ ಆಗಿದೆ. ಪ್ರತಿ ವರ್ಷ ಬೆಂಗಳೂರಿನಲ್ಲಿ ಕಸ ಸಂಗ್ರಹ ಮತ್ತು ಸಾಗಣೆಗೆ 514 ಕೋಟಿ ಮತ್ತು ಸಂಸ್ಕರಣೆ ಮತ್ತು ವಿಲೇವಾರಿಗೆ 380 ಕೋಟಿ ಖರ್ಚು ಮಾಡಲಾಗುತ್ತಿದೆ. 11,000 ಪೌರಕಾರ್ಮಿಕರಿಗೆ ವರ್ಷಕ್ಕೆ 444 ಕೋಟಿ ರೂ. ಸಂಬಳ ನೀಡಲಾಗುತ್ತಿದೆ. ಎಲ್ಲ ಸೇರಿ ಸೇರಿ ವರ್ಷಕ್ಕೆ ಒಟ್ಟು 1,344 ಕೋಟಿ ಖರ್ಚಾಗುತ್ತದೆ ಎಂದು ತಿಳಿಸಿದರು. ಪುಟ 2ಕ್ಕೆ



### ಆರ್ಥಿಕ ಇಲಾಖೆ ಎಚ್ಚರಿಕೆ

ಎರಡೂ ಪ್ಯಾಕೇಜ್‌ಗಳನ್ನು ಒಂದೇ ಕಂಪನಿಗೆ ನೀಡಿರುವುದು, 30 ವರ್ಷಗಳ ದೀರ್ಘ ಅವಧಿ, ಶೇ 5 ಹೆಚ್ಚಳ ಮೊದಲಾದ ಅಂಶಗಳ ಬಗ್ಗೆ ಹಣಕಾಸು ಇಲಾಖೆ ತಕರಾರರು ಎತ್ತಿದೆ. ಅವಧಿಯನ್ನು 10 ವರ್ಷಕ್ಕೆ ಇಳಿಸಿ, ಹೆಚ್ಚಿನ ಮೊತ್ತವನ್ನು ಶೇ 2.5 ಇಳಿಸಬೇಕು. ಇಲ್ಲವಾದರೆ ಜಿಬಿಎಗೆ ಮುಂದೆ ಹೊರೆಯಾಗುತ್ತದೆ ಎಂದು ಸಲಹೆ ನೀಡಲಾಗಿದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಮುಖ್ಯಮಂತ್ರಿಗೆ ಪತ್ರ

ಮೊದಲ ಪುಟದಿಂದ

## ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಲ್ಲ

ಬಂದ್ ಮಾಡಿದ್ದೇನೆ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ರಾಜ್ಯಸಭೆಗೆ ಹೇಗೆ ಆಯ್ಕೆ ಮಾಡುತ್ತದೆ. ದೇವೇಗೌಡರನ್ನು ಆಯ್ಕೆ ಮಾಡಬೇಕು ಎನ್ನುವುದು ಸ್ನೇಹಿತರು, ಹಿತೈಷಿಗಳ ಆಶಯವಾಗಿತ್ತು ಅಷ್ಟೆ. ಆದರೆ, ನಾನಾಗಲಿ, ಕುಮಾರಸ್ವಾಮಿ ಅವರಾಗಲಿ ಈ ಕುರಿತು ಬಿಜೆಪಿ ಜೊತೆ ಯಾವುದೇ ಚರ್ಚೆ ನಡೆಸಿರಲಿಲ್ಲ ಎಂದು ತಿಳಿಸಿದರು.

## ನೆಹರು ದಾಖಲೆ ಮುರಿದ ಮೋದಿ

ಭಾರತದ ರಾಜಕೀಯ ಇತಿಹಾಸದಲ್ಲಿ ಇದು ಮಹತ್ವದ ಕ್ಷಣವಾಗಿದೆ. ಜವಾಹರಲಾಲ್ ನೆಹರು ಅವರ ದೀರ್ಘಾವಧಿ ಪ್ರಧಾನಿ ದಾಖಲೆಯನ್ನು ಮುರಿದ ಪ್ರಧಾನಿ ಮೋದಿಗೆ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅಭಿನಂದನಾ ನಿರ್ಣಯ ಅಂಗೀಕರಿಸಲಾಯಿತು. ಸಂಪುಟ ಸಹೋದ್ಯೋಗಿಗಳು ಎದ್ದು ನಿಂತು ಚಪ್ಪಾಳೆ ಹೊಡೆಯುವ ಮೂಲಕ ಅಭಿನಂದಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ದೀರ್ಘಕಾಲದವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಕ್ಕಾಗಿ ಅವರನ್ನು ಶ್ಲಾಘಿಸುವ ನಿರ್ಣಯವನ್ನು ಕೇಂದ್ರ ಸಚಿವ ಸಂಪುಟ ಬುಧವಾರ ಅಂಗೀಕರಿಸಿತು.

## ಆರ್ಥಿಕ ಇಲಾಖೆ ಎಚ್ಚರಿಕೆ

ಬರೆದು, ಇದರಲ್ಲಿನ ಲೋಪಗಳನ್ನು ಎತ್ತಿ ತೋರಿಸಿದ್ದಾರೆ ಎಂದು ಆರ್.ಅಶೋಕ್ ಆರೋಪಿಸಿದರು. ರಾಮ್‌ಕಿ ಕಂಪನಿ ವಂಚನೆ ಮಾಡಿದೆ, ನಿಯಮಗಳನ್ನು ಉಲ್ಲಂಘಿಸಿದೆ ಎಂದು ವಿಶ್ವಬ್ಯಾಂಕ್ ಹೇಳಿದೆ. ಇದನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಇಷ್ಟಿದ್ದರೂ ಇದೇ ಕಂಪನಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಸರ್ಕಾರ ಟೆಂಡರ್ ನೀಡಿದೆ ಟೀಕಿಸಿದರು.

## ಮುಖ್ಯಶಿಕ್ಷಕನ ಕಿರುಕುಳ: ವಿದ್ಯಾರ್ಥಿ ಆತ್ಮಹತ್ಯೆ

1ನೇ ತರಗತಿಯಿಂದಲೂ ಇದೇ ಶಾಲೆಯಲ್ಲಿ ಓದುತ್ತಿದ್ದ. ಶಾಲೆಯಲ್ಲಿ ಕಸ ಗುಡಿಸುವ ಕೆಲಸ ಮಾಡಬೇಕು ಎಂದು ಮುಖ್ಯ ಶಿಕ್ಷಕರು ಕಿರುಕುಳ ನೀಡಿದ್ದಾರೆ. ಹೀಗಾಗಿ ಕಿರುಕುಳದಿಂದ ಬೇಸತ್ತು ಸಾವನ್ನಪ್ಪಿದ್ದಾನೆಂದು ಮೃತ ವಿದ್ಯಾರ್ಥಿಯ ಪೋಷಕರು ಆರೋಪಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಕರ್ನಾಟಕ ಸರ್ಕಾರ
**ಆಡಳಿತ ವೈದ್ಯಾಧಿಕಾರಿಗಳ ಕಛೇರಿ ಸಾರ್ವಜನಿಕ ಆಸ್ಪತ್ರೆ**
**ನಂಜನಗೂಡು ಮೈಸೂರು ಜಿಲ್ಲೆ.–571301**
ದೂರವಾಣಿ ಸಂಖ್ಯೆ:– 08221–295156.
ಇಮೇಲ್ :ghngud@gmail.com
ಸಂಖ್ಯೆ: ಸಾ.ಆ.ನಂ/ಟೆಂಡರ್/01/2026–27 ದಿನಾಂಕ: 08.06.2026

**ಹೊರಗುತ್ತಿಗೆ ಗ್ರೂಪ್– ಡಿ ಹಾಗೂ ಅರೆವೈದ್ಯಕೀಯ ಹಾಗೂ ಸ್ವಚ್ಛತಾ ಕರ್ಮಚಾರಿ (ನಾನ್–ಕ್ಲಿನಕಲ್) ಸಿಬ್ಬಂದಿಗಳ ಸೇವಾ ಸಂಬಂಧ ಟೆಂಡರ್ ಅಧಿಸೂಚನೆ**

ಸಾರ್ವಜನಿಕ ಆಸ್ಪತ್ರೆ ನಂಜನಗೂಡು ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಂಜನಗೂಡು ಇಲ್ಲಿಗೆ 2026–27ನೇ ಸಾಲಿನ (31.03.2027 ರವರೆಗೆ) ಅವಧಿಗೆ ಹೊರಗುತ್ತಿಗೆ **ಗ್ರೂಪ್–ಡಿ ಹಾಗೂ ಅರೆವೈದ್ಯಕೀಯ ಹಾಗೂ ಸ್ವಚ್ಛತಾ ಕರ್ಮಚಾರಿ (ನಾನ್–ಕ್ಲಿನಿಕಲ್)** ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಇ–ಸಂಗ್ರಹಣೆ ವೇದಿಕೆ ಮೂಲಕ ದ್ವಿ–ಲಕೋಟೆ ಪದ್ಧತಿ ಮುಖಾಂತರ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ನಲ್ಲಿ ಸಂಪರ್ಕಿಸುವುದು.

1) ಟೆಂಡರ್ ಅಂದಾಜು ಮೌಲ್ಯ **45,58,831=74,**
2) ಟೆಂಡರ್ ಇ.ಎಂ.ಡಿ ಮೌಲ್ಯ **1,13,970=00, 3)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25.06.2026** ಸಾಯಂಕಾಲ **04:30 ಗಂಟೆ**
4) ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 29.06.2026** ಬೆಳಗ್ಗೆ **10.30** ಗಂಟೆ
5) ಹಣಕಾಸು ಬಿಡ್ ತೆರೆಯುವ **ದಿನಾಂಕ: 02.07.2026** ಅಥವಾ ನಂತರ
6) ಟೆಂಡರ್ ತೆರೆಯುವ ಸ್ಥಳ ಆಡಳಿತ ವೈದ್ಯಾಧಿಕಾರಿಗಳ ಕಛೇರಿ,ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ನಂಜನಗೂಡು, ಮೈಸೂರು ಜಿಲ್ಲೆ.
7) ಇ–ಮೇಲ್ ವಿಳಾಸ ghngud@gmail.com
8) ದೂರವಾಣಿ ಸಂಖ್ಯೆ. 08221–295156

**ಸಹಿ/–ಆಡಳಿತ ವೈದ್ಯಾಧಿಕಾರಿಗಳು,**
**ಸಾರ್ವಜನಿಕ ಆಸ್ಪತ್ರೆ, ನಂಜನಗೂಡು**
DIPR/DDMYS/286/KSMCA/197/2026-27

# ಕಾಂಪೋಸಿಟ್ ಸ್ಕಿಲ್ ಲ್ಯಾಬ್ ಉದ್ಘಾಟನೆ

ಮೈಸೂರು: ನಗರದ ವಿಜಯನಗರ ನಾಲ್ಕನೇ ಹಂತದ ಹುಣಸೂರು ರಸ್ತೆಯಲ್ಲಿರುವ ನೋಟ್ರೆ ಡೇಮ್ ಶಾಲೆಯಲ್ಲಿ ಬುಧವಾರ ಕಾಂಪೋಸಿಟ್ ಸ್ಕಿಲ್ ಲ್ಯಾಬ್ ಉದ್ಘಾಟಿಸಲಾಯಿತು.

ಹೊಸ ಶಿಕ್ಷಣ ನೀತಿ (ಎನ್‌ಇಪಿ)ಯು ಪ್ರಾಥಮಿಕ ಶಿಕ್ಷಣ ಹಂತದಿಂದಲೇ ತಂತ್ರಜ್ಞಾನ ಆಧಾರಿತ ಕಲಿಕೆಗೆ ಒತ್ತು ನೀಡುವಂತೆ ಸಲಹೆ ನೀಡಿರುವುದರಿಂದ ಶಾಲಾ ಆಡಳಿತ ಮಂಡಳಿ ಇದೀಗ ಕಾಂಪೋಸಿಟ್ ಸ್ಕಿಲ್ ಲ್ಯಾಬ್ ಆರಂಭಿಸಿದೆ. ಎಐ (ಕೃತಕ ಬುದ್ಧಿಮತ್ತೆ), ಡ್ರೋನ್ ತಂತ್ರಜ್ಞಾನ, ಬಾಹ್ಯಾಕಾಶ ಮತ್ತು ಖಗೋಳ ವಿಜ್ಞಾನ, ರೋಬಾಟಿಕ್ಸ್, ತ್ರಿಡಿ ಪ್ರಿಂಟಿಂಗ್ ಸೇರಿದಂತೆ ಹಲವು ಕೌಶಲಗಳನ್ನು ಕಲಿಯಲು ಮಕ್ಕಳಿಗೆ ನೆರವಾಗಲಿದೆ.

ಮೆಟಾಬುಕ್ ಎಕ್ಸ್‌ಆರ್ ಸಂಸ್ಥೆಯ ಸಹಯೋಗದಲ್ಲಿ ಶಾಲೆಯು ಲ್ಯಾಬ್ ನಿರ್ಮಿಸಿದೆ. ನುರಿತ ತಜ್ಞರು ಮಕ್ಕಳಿಗೆ ಬೋಧನೆ ಮಾಡಲಿದ್ದಾರೆ. ಯಾವೆಲ್ಲ ಕ್ಷೇತ್ರಗಳಲ್ಲಿ ಎಐ ಬಳಕೆ ಮಾಡಿಕೊಳ್ಳಬಹುದು, ಎಐನಲ್ಲಿ ಹೊಸ ಆವಿಷ್ಕಾರಗಳು, ಡ್ರೋನ್‌ಗಳನ್ನು ಸಿದ್ಧಪಡಿಸುವುದು, ತ್ರಿಡಿ ಪ್ರಿಂಟಿಂಗ್ ವಿನ್ಯಾಸ, ಬಾಹ್ಯಾಕಾಶದಲ್ಲಿನ ಕುತೂಹಲಗಳನ್ನು ಪ್ರಯೋಗಾಲಯದಲ್ಲಿ ಮಕ್ಕಳೇ ಖುದ್ದು ಕಲಿಯಲಿದ್ದಾರೆ.

ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭವಿಷ್ಯದ ದೃಷ್ಟಿಯಿಂದ ಎಐ, ಡ್ರೋನ್, ರೋಬಾಟಿಕ್ಸ್ ತಂತ್ರಜ್ಞಾನ ಕಲಿಕೆ ತುಂಬಾ ಅಗತ್ಯವಿದೆ ಎಂದು ಹೇಳಿದರು.

ಜಗತ್ತು ಆಧುನಿಕತೆಗೆ ತೆರೆದುಕೊಳ್ಳುತ್ತಿರುವಂತೆಯೇ ಶೈಕ್ಷಣಿಕ ವ್ಯವಸ್ಥೆಯೂ ಬದಲಾಗುತ್ತಿದೆ. ಈ ಬದಲಾವಣೆಗೆ ಹೊಂದಿಕೊಳ್ಳುವುದು ವಿದ್ಯಾರ್ಥಿಗಳಿಗೆ ಅಗತ್ಯ, ಅನಿವಾರ್ಯವೂ ಆಗಿದೆ. ಆಧುನಿಕ ತಂತ್ರಜ್ಞಾನಗಳು ಇಂದು ಬದುಕಿನ ಅವಿಭಾಜ್ಯ ಅಂಗವಾಗಿ ಬಿಟ್ಟಿವೆ. ವಿದ್ಯಾರ್ಥಿಗಳಾಗಲೀ, ಸಾರ್ವಜನಿಕರಾಗಲಿ



ಆಧುನಿಕ ತಂತ್ರಜ್ಞಾನಕ್ಕೆ ಹೊಂದಿಕೊಳ್ಳದಿದ್ದಲ್ಲಿ ಮುಂಬರುವ ದಿನಗಳು ತುಂಬಾ ಕಷ್ಟವಾಗಲಿದೆ ಎಂದು ಹೇಳಿದರು.

ಎಐ, ಡ್ರೋನ್, ರೋಬಾಟಿಕ್ಸ್ ತಂತ್ರಜ್ಞಾನ ಕಲಿಕೆಯಿಂದ ಮಕ್ಕಳಲ್ಲಿ ಕ್ರಿಯಾತ್ಮಕ ಜ್ಞಾನ, ಹೊಸ ಹೊಸ ಆಲೋಚನೆಗಳು, ಆವಿಷ್ಕಾರ ಮನೋಭಾವ ಬೆಳೆಯುತ್ತದೆ. ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ತಂತ್ರಜ್ಞಾನದೊಂದಿಗೆ ಇಂದಿನಿಂದಲೇ ಹೊಂದಿಕೊಳ್ಳುವ ಜ್ಞಾನ, ಕೌಶಲ ಬೆಳೆಸಿಕೊಳ್ಳಬೇಕು. ಇಂತಹ ಶೈಕ್ಷಣಿಕ ವ್ಯವಸ್ಥೆಗೆ ಶಿಕ್ಷಕರ ಜತೆಗೆ ಪಾಲಕರು ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಆರ್‌ಐಇ ಪ್ರಾಂಶುಪಾಲ ಡಾ.ಪ್ರದ್ಯುಮ್ನ ಕುಮಾರ್, ನೋಟ್ರೆ ಡೇಮ್ ಸ್ಕೂಲ್ ಮತ್ತು ಕಾಲೇಜಿನ ವ್ಯವಸ್ಥಾಪಕಿ ರೋಸ್ಲಿನ್, ಪ್ರಾಂಶುಪಾಲರಾದ ಅಂಜನಾ, ಸೌತ್ ಇಂಡಿಯನ್ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ಕೆ.ಹರೀಶ್, ಡಾ.ಅನಿಲ್ ಥಾಮಸ್, ಮೆಟಾಬುಕ್ ಎಕ್ಸ್‌ಆರ್‌ನ ನಿರ್ದೇಶಕ ರಾಕೇಶ್ ಪಾಂಡೆ, ಎವಿಪಿ ಮೊಹಮ್ಮದ್ ಕೈಸರ್, ಆರ್‌ಎಂ ಶರೋನ್ ನೆಲ್ಸನ್, ಕಿರುತೆರೆ ಕಲಾವಿದ ಸೂರಜ್ ಸಿಂಗ್, ಶಿಕ್ಷಕರು, ಸಿಬ್ಬಂದಿ ಭಾಗವಹಿಸಿದ್ದರು.

ಮೊದಲ ಪುಟದಿಂದ

## ಕಸದಲ್ಲೂ 10 ಸಾವಿರ ಕೋಟಿ ಕಿಕ್‌ಬ್ಯಾಕ್

ಜಿಬಿಎನಲ್ಲಿ ಈವರೆಗೆ ರಾಜ್ಯದ ಗುತ್ತಿಗೆದಾರರು ಕೆಲಸ ಮಾಡುತ್ತಿದ್ದರು. ಈಗ ಹೊಸ 39,000 ಕೋಟಿ ಮೊತ್ತದ ಟೆಂಡರ್ ಅನ್ನು ದೆಹಲಿಯ ಕಂಪನಿಗೆ ನೀಡಲಾಗಿದೆ. ಈ ಬಾರಿ 30 ವರ್ಷ ಹಾಗೂ ಇನ್ನೂ ವಿಸ್ತರಣೆ ಅವಕಾಶದ 5 ವರ್ಷ ಸೇರಿ ಒಟ್ಟು 35 ವರ್ಷಕ್ಕೆ ದೆಹಲಿಯ ಎಂಎಸ್‌ಡಬ್ಲ್ಯು ಸೊಲ್ಯೂಶನ್ಸ್ ಲಿಮಿಟೆಡ್ ಅಥವಾ ರಾಮ್‌ಕಿ ಕಂಪನಿಗೆ ಟೆಂಡರ್ ನೀಡಲಾಗಿದೆ. ಬೆಂಗಳೂರು ಉತ್ತರ ಹಾಗೂ ದಕ್ಷಿಣಕ್ಕೆ ಎರಡು ಪ್ಯಾಕೇಜ್ ಮಾಡಲಾಗಿದೆ. ಇದಕ್ಕೂ ಮುನ್ನ ಸರ್ಕಾರಿ ಸ್ವಾಮ್ಯದ ರೈಟ್ಸ್ ಕಂಪನಿಯಿಂದ ಸಲಹೆ ಪಡೆದು, ಆ ಸಲಹೆಯನ್ನು ಕಸದ ಬುಟ್ಟಿಗೆ ಹಾಕಲಾಗಿದೆ. ಇದರ ಬದಲು ಮಾನ್ಯತೆ ಇಲ್ಲದ ಕಂಪನಿಗೆ ಅವಕಾಶ ನೀಡಲಾಗಿದೆ. ಈಗ ಕಸದ ಟೆಂಡರ್ ಅನ್ನು ಎಂಎಸ್‌ಡಬ್ಲ್ಯು ಕಂಪನಿಗೆ ನೀಡಿ, 1,500 ಕೋಟಿ ಸಾಲ ಪಡೆಯಲು ಕೂಡ ಅವಕಾಶ ಕೊಡಲಾಗಿದೆ ಎಂದು ಆರೋಪಿಸಿದರು.

ಈಗ ಪ್ರತಿ ಟನ್‌ಗೆ ಟಿಪ್ಪಿಂಗ್ ಶುಲ್ಕವಾಗಿ 260 ನೀಡಲಾಗುತ್ತಿದೆ. ಹೊಸ ಟೆಂಡರ್‌ನಂತೆ 2,400 ನೀಡುತ್ತದೆ. ಶೇ 950 ಅಧಿಕವಾಗಿದೆ. ಹಳೆ ವೆಚ್ಚದಲ್ಲೇ ಮುಂದುವರಿಸಿದರೆ 30 ವರ್ಷಕ್ಕೆ 6,117 ಕೋಟಿ ಆಗುತ್ತದೆ. ಹೊಸ ಟೆಂಡರ್‌ನಿಂದ ಈ ಖರ್ಚು 39,437 ಕೋಟಿ ಆಗುತ್ತಿದೆ. ಹೆಚ್ಚುವರಿ 33,320 ಕೋಟಿ ವೆಚ್ಚವಾಗುತ್ತದೆ. ಟೆಂಡರ್ ಪ್ರಕಾರ, ದಕ್ಷಿಣದ ಪ್ಯಾಕೇಜ್‌ನಲ್ಲಿ ಶೇ19.43 ಹಾಗೂ ಉತ್ತರದ ಪ್ಯಾಕೇಜ್‌ನಲ್ಲಿ ಶೇ19.25 ಅಧಿಕ ಮೊತ್ತ ನಮೂದಾಗಿದೆ. ಎರಡೂ ಪ್ಯಾಕೇಜ್ ಸೇರಿ ಒಟ್ಟಾಗಿ ಶೇ19.33 ಹೆಚ್ಚಿದೆ ಎಂದು ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ರಾಜ್ಯಪಾಲರಿಗೆ ದೂರು: ಸುದ್ದಿಗೋಷ್ಠಿ ಬಳಿಕ ಆರ್.ಅಶೋಕ ನೇತೃತ್ವದಲ್ಲಿ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ದೂರು ನೀಡಿದರು. ಈ ಟೆಂಡರ್ ಪ್ರಕ್ರಿಯೆಯನ್ನು ತನಿಖೆಗೆ ಒಳಪಡಿಸಬೇಕು. ಟೆಂಡರ್ ಪಡೆದ, ಅರ್ಜಿ ಸಲ್ಲಿಸಿದ ಕಂಪನಿಗಳ ಅರ್ಹತೆ ಬಗ್ಗೆ ಪರಿಶೀಲನೆ ನಡೆಸಬೇಕು. ಡಿಪಿಆರ್ ಹಂತದಲ್ಲಾಗಿರುವ ಲೋಪವನ್ನು ತನಿಖೆ ಮಾಡಬೇಕು. ಟೆಂಡರ್ ಅನುಮೋದನೆಯಲ್ಲಾಗಿರುವ ಲೋಪಗಳನ್ನು ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದಾರೆ.

# ತೆರಿಗೆದಾರರ ಸ್ನೇಹಿ ಕಾಯ್ದೆ

## ನೂತನ ಆದಾಯ ತೆರಿಗೆ ಜಾರಿ : ಆರ್.ಚೇತನ್

ರಾಮನಗರ: 1961ರ ಆದಾಯ ತೆರಿಗೆ ಕಾಯ್ದೆಗೆ ಬದಲಿಯಾಗಿ ಜಾರಿಗೊಂಡಿರುವ 2025ರ ಹೊಸ ಆದಾಯ ತೆರಿಗೆ ಕಾಯ್ದೆಯು ದೇಶದ ತೆರಿಗೆ ನಿರ್ವಹಣೆಯಲ್ಲಿ ಮಹತ್ವದ ಪರಿವರ್ತನೆಗೆ ಕಾರಣವಾಗಲಿದೆ. ಸರಳ, ಸ್ಪಷ್ಟ, ಪಾರದರ್ಶಕ ಹಾಗೂ ತೆರಿಗೆದಾರರ ಸ್ನೇಹಿ ಮಾಡುವ ಗುರಿಯನ್ನು ಈ ಹೊಸ ಆದಾಯ ತೆರಿಗೆ ಕಾಯ್ದೆ ಒಳಗೊಂಡಿದೆ ಎಂದು ಆದಾಯ ತೆರಿಗೆ ಇಲಾಖೆಯ ಬೆಂಗಳೂರಿನ ಆದಾಯ ತೆರಿಗೆ ರೇಂಜ್–3ರ ಹೆಚ್ಚುವರಿ ಆಯುಕ್ತರಾದ ಆರ್. ಚೇತನ್ ಅವರು ಹೇಳಿದರು.

ನಗರದಲ್ಲಿರುವ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆದಾಯ ತೆರಿಗೆ ಇಲಾಖೆ, )ಕರ್ನಾಟಕ ಮತ್ತು ಗೋವಾ) ಆಯೋಜಿಸಿದ್ದ ಪ್ರಾರಂಭ್ 2026 (ಆದಾಯ ತೆರಿಗೆ ಕಾಯ್ದೆ 2025, ರಾಷ್ಟ್ರ ವ್ಯಾಪ್ತಿ ಜಾಗೃತಿ ಅಭಿಯಾನ) ಉದ್ಘಾಟಿಸಿ ಅವರು ಮಾತನಾಡಿದರು.

2026ರ ಏಪ್ರಿಲ್ 01 ರಿಂದ ಹೊಸ ಆದಾಯ ತೆರಿಗೆ ಸಂಪೂರ್ಣ ಕಾಯ್ದೆಯು ರಾಷ್ಟ್ರದಾದ್ಯಂತ ಸಂಪೂರ್ಣ ಜಾರಿಗೆ ಬಂದಿದ್ದು, ಈ ಕುರಿತು ಜಾಗೃತಿ ಮೂಡಿಸಲು ಪ್ರಾರಂಭ್–2026 ಕಾರ್ಯಕ್ರಮದಡಿ ಆದಾಯ ತೆರಿಗೆ ಇಲಾಖೆಯು ದೇಶದಾದ್ಯಂತ ಜಾಗೃತಿ ಅಭಿಯಾನ ನಡೆಸುತ್ತಿದೆ, ಇದೇ ಅಭಿಯಾನವನ್ನು ಈ ಜಿಲ್ಲೆಯಲ್ಲಿಯೂ ನಡೆಸಲಾಗುತ್ತಿದೆ ಎಂದರು.

1961ರ ಆದಾಯ ತೆರಿಗೆ ಕಾಯ್ದೆಗೆ




ಬದಲಿಯಾಗಿ ಜಾರಿಗೊಂಡಿರುವ 2025ರ ಹೊಸ ಆದಾಯ ತೆರಿಗೆ ಕಾಯ್ದೆಯು ದೇಶದ ತೆರಿಗೆ ನಿರ್ವಹಣೆಯಲ್ಲಿ ಮಹತ್ವದ ಪರಿವರ್ತನೆಗೆ ಕಾರಣವಾಗಲಿದೆ. ಸರಳ, ಸ್ಪಷ್ಟ, ಪಾರದರ್ಶಕ ಹಾಗೂ ತೆರಿಗೆ ಸ್ನೇಹಿ ಮಾಡುವ ಗುರಿಯನ್ನು ಈ ಹೊಸ ಆದಾಯ ತೆರಿಗೆ ಕಾಯ್ದೆ ಒಳಗೊಂಡಿದೆ ಎಂದು ಹೇಳಿದರು. ರಾಮನಗರ ಜಿಲ್ಲಾ ಆದಾಯ ತೆರಿಗೆ ಇಲಾಖೆಯ ಮುಖ್ಯಸ್ಥರಾದ ಶ್ರೀವಿದ್ಯಾ, ಜಿಲ್ಲೆಯ ಚಾರ್ಟಡ್ ಅಕೌಂಟಂಟ್‌ಗಳು, ತೆರಿಗೆ ವೃತ್ತಿ ಪರರ ಸಂಘಗಳ ಪ್ರತಿನಿಧಿಗಳು, ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳು, ತೆರಿಗೆ ವೃತ್ತಿ ಪರರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

### ಗೊಂದಲಗಳ ನಿವಾರಣೆ

**ಹಳೆಯ ತೆರಿಗೆ ಕಾಯ್ದೆ ಅನೇಕ ತಿದ್ದುಪಡಿಗಳು, ಗೊಂದಲಗಳು ಹಾಗೂ ವ್ಯಾಜ್ಯಗಳಿಗೆ ಕಾರಣವಾಗಿತ್ತು. ಆದರೆ ಹೊಸ ತೆರಿಗೆ ಕಾಯ್ದೆಯು ತೆರಿಗೆಯ ನಿಶ್ಚಿತತೆ ಹಾಗೂ ಡಿಜಿಟಲ್ ಸುಗಮತೆಗೆ ಆದ್ಯತೆ ನೀಡಿದೆ ಎಂದರು. ತೆರಿಗೆದಾರರ ತೊಡಗಿಸಿಕೊಳ್ಳುವಿಕೆ ಮತ್ತು ಅನುಕೂಲಕ್ಕಾಗಿ ಕರಸೇತು (ಕರ್‌ಸಾಥಿ) ಎಂಬ 247 ಕೃತಕ ಬುದ್ಧಿ ಮತ್ತೆ (ಎಐ) ಆಧಾರಿತ ಚಾಟ್‌ಬಾಟ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಇದರಿಂದ ಚಾರ್ಟರ್ಡ್ ಅಕೌಂಟಂಟ್‌ಗಳು, ತೆರಿಗೆ ವೃತ್ತಿಪರರು ಹಾಗೂ ಲೆಕ್ಕಪತ್ರ ವಿಭಾಗದ ಸಿಬ್ಬಂದಿ ಈ ಡಿಜಿಟಲ್ ಸಾಧನಗಳನ್ನು ಬಳಸಿಕೊಂಡು ಸಲ್ಲಿಕೆ ದೋಷಗಳನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು. ಹಳೆಯ ಕಾಯ್ದೆಯಲ್ಲಿದ್ದ ಅನಗತ್ಯ ನಿಬಂಧನೆಗಳು ಮತ್ತು ಸಂಕೀರ್ಣ ಭಾಷೆಯನ್ನು ಹೊಸ ತೆರಿಗೆ ಕಾಯ್ದೆಯಲ್ಲಿ ತೆಗೆದು ಹಾಕಲಾಗಿದೆ. 1961ರ ಆದಾಯ ತೆರಿಗೆ ಕಾಯ್ದೆಯಲ್ಲಿ 819 ಸೆಕ್ಷನ್‌ಗಳಿದ್ದವು. 2025ರ ಹೊಸ ತೆರಿಗೆ ಕಾಯ್ದೆಯಲ್ಲಿ 536 ಸೆಕ್ಷನ್‌ಗಳಿಗೆ ಇಳಿಸಲಾಗಿದೆ. ಅಧ್ಯಾಯಗಳು ಸಹ 47 ರಿಂದ 23ಕ್ಕೆ ಇಳಿದಿದೆ. ಹಳೆಯ ಕಾಯ್ದೆಯಲ್ಲಿ 5.12 ಲಕ್ಷ ಪದಗಳಿದ್ದವು. ಈಗಿನ ಕಾಯಿದೆಯಲ್ಲಿ 2.6 ಲಕ ಪದಗಳಿಗೆ ಕಡಿಮೆಯಾಗಿದೆ. ಕಾಯ್ದೆ ಬಗ್ಗೆ ಹೆಚ್ಚಿನ ಸ್ಪಷ್ಟತೆ ಮೂಡಿಸಲು 57 ಕೋಷ್ಟಕಗಳು, 16 ಶೆಡ್ಯೂಲ್ ಮತ್ತು 46 ಸೂತ್ರಗಳಿಗೆ ಇಳಿಸಲಾಗಿದೆ ಎಂದು ವಿವರಿಸಿದರು. ಹೊಸ ಆದಾಯ ತೆರಿಗೆ ಕಾಯ್ದೆ ಯಾವುದೇ ಹೊಸ ತೆರಿಗೆ ದರವನ್ನು ವಿಧಿಸುವುದಿಲ್ಲ ಸಂಕೀರ್ಣವಾಗಿರುವ ಹಳೆಯ ಆದಾಯ ತೆರಿಗೆ ಕಾಯ್ದೆಯ ಭಾಷೆಯು ತೆರಿಗೆದಾರರಿಗೆ ಸರಳವಾಗಿ ಅರ್ಥಮಾಡಿಕೊಳ್ಳುವಂತೆ ಭಾಷೆಯನ್ನು ಸರಳೀಕರಿಸಲಾಗಿದೆ ಎಂದರು.**

ಮೊದಲ ಪುಟದಿಂದ

## ಪ್ರಜಾಪ್ರಭುತ್ವ ಹಾಳುಗೆಡವಿದ ಮೋದಿ

ನ್ಯಾಯಯುತವಾಗಿ ಗೆಲ್ಲಲು ಸಾಧ್ಯವಿಲ್ಲದ ಬಿಜೆಪಿಗೆ ಪರೋಕ್ಷವಾಗಿ ಗೆಲ್ಲಲು ಚುನಾವಣಾ ಆಯೋಗವು ನೀಡುತ್ತಿರುವ ಸಹಕಾರವಾಗಿದೆ ಎಂದಿದ್ದಾರೆ.

ಬಿಜೆಪಿ ಮತಗಳ್ಳತನವನ್ನು ಅಧಿಕೃತ ದಂಧೆ ಮಾಡಿದೆ. ಎಸ್‌ಐಆರ್ ಸೇರಿದಂತೆ ಅನೇಕ ಕಳ್ಳಮಾರ್ಗದ ಮೂಲಕ ಚುನಾವಣೆಗಳನ್ನು ಗೆಲ್ಲುತ್ತಿದೆ. ರಾಜ್ಯಸಭೆ ಚುನಾವಣೆಯಲ್ಲೂ ಗುರುತರ ಅಕ್ರಮ ಎಸಗುವ ಮೂಲಕ ಸ್ಥಾನಗಳ್ಳತವನ್ನು ತನ್ನ ಮತಗಳ್ಳತನದ ದಂಧೆಗೆ ಸೇರ್ಪಡೆಗೊಳಿಸಿದೆ. ಲೋಕಸಭೆಯಲ್ಲಿ ಕೃತಕ ಸಂಖ್ಯೆಗಳನ್ನು ಸೃಷ್ಟಿಸುವ ಮೂಲಕ ತನ್ನ ಪ್ರಜಾಪ್ರಭುತ್ವ ವಿರೋಧಿ ಮತ್ತು ಸಂವಿಧಾನ ವಿರೋಧಿ ಮಸೂದೆಗಳನ್ನು ಯಾವುದೇ ಪ್ರತಿರೋಧವಿಲ್ಲದೆ ಸಾರಾಸಗಟಾಗಿ ಜಾರಿಗೊಳಿಸಲು ಅಗತ್ಯ ಬಲವನ್ನು ಹೆಚ್ಚಿಸಿಕೊಳ್ಳುವುದು ಬಿಜೆಪಿಯ ಸ್ಪಷ್ಟ ಗುರಿಯಾಗಿದೆ ಎಂದು ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲಿನ ದಾಳಿಯನ್ನು ನಮ್ಮ ಪಕ್ಷವು ಬಲವಾಗಿ ವಿರೋಧಿಸುತ್ತದೆ. ನಾವು ದೇಶದ ನಾಗರಿಕರ ಪರವಾಗಿ ನಿಂತು, ಪ್ರತಿಯೊಂದು ಅನ್ಯಾಯದ ವಿರುದ್ಧ ಹೋರಾಡುತ್ತೇವೆ ಎಂದು ಅವರು ತಿಳಿಸಿದ್ದಾರೆ.

## ಖಾತೆ ಕ್ಯಾತೆ: ದೆಹಲಿಗೆ ಡಿಕೆಶಿ

ಕರ್ನಾಟಕ ಭವನದ ಕಾರ್ಯವೈಖರಿಗೆ ಸಿಎಂ ಡಿಕೆ ಶಿವಕುಮಾರ್ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಡಿ.ಕೆ ಶಿವಕುಮಾರ್ ಸ್ವಾಗತಕ್ಕೆ ಕರ್ನಾಟಕ ಭವನ ಸಿಬ್ಬಂದಿ ಮುಂದಾಗಿದ್ದಾರೆ.

## ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿ ಸಭೆ

# ಮಾದಕ ಜಾಲ ಮೂಲ ಭೇಧಿಸಿ ಶಿಕ್ಷೆಗೊಳಪಡಿಸಿ: ಶ್ರೀನಿವಾಸ್

ಮೈಸೂರು: ಮಾದಕ ವಸ್ತುಗಳಾದ ಡ್ರಗ್ಸ್ ಇತ್ಯಾದಿಗಳ ಬಳಕೆ, ಮಾರಾಟ ಮಾಡುವವರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸುವ ಜತೆಗೆ ಅವುಗಳ ಮೂಲವನ್ನು ಬೇಧಿಸಿ ಕಠಿಣ ಶಿಕ್ಷೆಗೆ ಒಳಪಡಿಸುವ ಮೂಲಕ ಸಂಪೂರ್ಣವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ನಿಗಾ ವಹಿಸಬೇಕು. ಇದಕ್ಕೆ ಅಗತ್ಯವಾಗಿ ಬೇಕಾದ ಸಹಕಾರವಿದ್ದರೆ ಸಮಿತಿಗೆ ಕೇಳಿ ಎಂದು ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷ ಹಾಗೂ ಶಾಸಕ ಶ್ರೀನಿವಾಸ್ ತಾಕೀತು ಮಾಡಿದರು.

ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಶಾ ಮುಕ್ತ ಮೈಸೂರು ಮಾಡುವುದು ನಿಮ್ಮ ಆದ್ಯತೆ ಆಗಿರಬೇಕಿದೆ. ಪದೇ ಪದೇ ಡ್ರಗ್ಸ್ ಮಾರಾಟದಲ್ಲಿ ಸಿಲುಕಿಕೊಳ್ಳುವವರ ವಿರುದ್ಧ ಕಠಿಣ ಕಾನೂನು ಕ್ರಮ ಜಾರಿಗೆ ನೀತಿ ರೂಪಿಸುವ ಸಂಬಂಧ ಒಂದು ವರದಿ ಕೊಡಿ. ಏಕೆಂದರೆ ಬಹುತೇಕ ಡ್ರಗ್ಸ್ ಜಾಲದಲ್ಲಿ ಬಂಧಿಸಲ್ಪಡುವವರು ಮತ್ತೆ ಅದರಲ್ಲೇ ಮುಂದುವರೆಯುವುದು ಹೆಚ್ಚು ಹೀಗಾಗಿ ಇಂತಹವರ ವಿರುದ್ಧ ಕಠಿಣ ಕ್ರಮವಾದಾಗ ಮಾತ್ರವೇ ಮಾದ ಜಾಲ ತಡೆಯಲು ಸಾಧ್ಯವಾಗುತ್ತದೆ. ಈ ಸಂಬಂಧ ಪೊಲೀಸ್ ಇಲಾಖೆ ನಿರಂತರವಾಗಿ ಮಾದಕ ಜಾಲದಲ್ಲಿರುವವರಿಗೆ ಕೈಗೊಳ್ಳಬಹುದಾದ ಕಠಿಣ ಕಾನೂನು ಕ್ರಮದ ಬಗ್ಗೆ ವರದಿಯೊಂದನ್ನು ಸಮಿತಿಗೆ ನೀಡಿ ಎಂದು ಸೂಚಿಸಿದರು. ಇದೇ ವೇಳೆ ರಸ್ತೆ ಬದಿ ವ್ಯಾಪಾರಿಗಳನ್ನು ಗುರುತಿಸಿ ಅವರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಿಕೊಡುವುದು. ಹಾಸನ ಸೇರಿ ಅನೇಕ ಜಿಲ್ಲೆಗಳಲ್ಲಿ ಮಾಡಿರುವಂತೆ ಫುಡ್ ಸ್ಟ್ರೀಟ್ ಎಂದು ನೀವೆ ಜಾಗ ವ್ಯವಸ್ಥೆ ಮಾಡಿ ಕೊಡಿ. ಜತೆಗೆ ಆಹಾರ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಅವರ ಪಾತ್ರವನ್ನು ಎಚ್ಚರಿಸಬೇಕಿದೆ. ಅಲ್ಲದೆ, ಒಂದೆರಡು ಬಾರಿ ದಂಡ ಹಾಕಿಯೂ ಮತ್ತದೇ ತಪ್ಪು ಮಾಡುವವರಿಗೂ ಕಠಿಣ ಶಿಕ್ಷೆ ವಿಧಿಸುವ ಕೆಲಸ ಆಗಬೇಕು. ಆಹಾರ ಸುರಕ್ಷತಾ ಮಂಡಳಿ(ಎಫ್‌ಎಸ್‌ಎಲ್) ನಿರಂತರವಾಗಿ ಎಲ್ಲಾ ಕಡೆಗಳಲ್ಲಿಯೂ ಅನಿರೀಕ್ಷಿತ ತಪಾಸಣೆ ಹೆಚ್ಚಿಸಬೇಕಿದೆ. ಕನಿಷ್ಠ ಮೂರು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳ ತಂಡ ಆಹಾರ ಸುರಕ್ಷತಾ ಮಂಡಳಿಯ ಕಾರ್ಯವೈಖರಿ ಬಗ್ಗೆ ವರದಿ ಪಡೆಯುವುದು ಉತ್ತಮ ಎಂದರು.

ಸಮಿತಿಯ ಸದಸ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಶರವಣ ಮಾತನಾಡಿ, ಮಾದಕ ಜಾಲ ಪ್ರಕರಣದಲ್ಲಿ ಕೆಲವೊಂದು ಪೊಲೀಸರು ಸೇರಿಕೊಂಡು ಸಿಕ್ಕಿಕೊಂಡ ಆರೋಪಿ ತಪ್ಪಿಸಿಕೊಳ್ಳಲು ಕಡಿಮೆ ಕಾನೂನು ಅಡಿಯಲ್ಲಿ ಪ್ರಕರಣ ದಾಖಲಿಸುವ ಕೆಲಸ ಮಾಡುತ್ತಿದ್ದು, ಅಂತಹುದರ ಮೇಲೆ ಹಿರಿಯ ಅಧಿಕಾರಿಗಳು ನಿಗಾವಹಿಸಬೇಕು. ಕಾಲೇಜು, ಶಾಲೆಗಳ 100 ಮೀಟರ್ ವ್ಯಾಪ್ತಿಯಲ್ಲೂ ಧೂಮಪಾನ, ಮದ್ಯಪಾನ ನಡೆಯುತ್ತಿರುವ ಬಗ್ಗೆ ಕ್ರಮ ಜರುಗಿಸುವ ಕೆಲಸ ನಿರಂತರವಾಗಿ ನಡೆಯಬೇಕಿದೆ. ಫಾಸ್ಟ್ ಫುಡ್‌ಗಳಿಂದ ಕ್ಯಾನ್ಸರ್ ನಂತಹ ಮಾರಕ ಕಾಯಿಲೆಗಳು ಸೃಷ್ಠಿಯಾಗುತ್ತಿದ್ದು ಈ ಬಗ್ಗೆ ಬೀದಿ ಬದಿ ವ್ಯಾಪಾರಿಗಳಿಗೆ ಎಚ್ಚರಿಸುವ ಕೆಲಸ ಆಗಬೇಕಿದೆ ಎಂದರು. ಮೈಸೂರು ಮಾಡೆಲ್ ಆಗಲಿ: ಸಮಿತಿ ಸದಸ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಕೊನರೆಡ್ಡಿ ಮಾತನಾಡಿ, ಮೈಸೂರು ಸಾಂಸ್ಕೃತಿಕವಾಗಿ ಬೆಳೆದು ಸ್ವಚ್ಛ ನಗರಿ ಎಂಬ ಖ್ಯಾತಿ ಪಡೆದಿದೆ. ಅಂತಹ ನಗರದಲ್ಲಿ ಮಾಧಕ ವ್ಯಸನಕ್ಕೆ ಬಲಿಯಾಗುತ್ತಿರುವ ಸಮಸ್ಯೆಗೆ ಪೊಲೀಸ್ ಇಲಾಖೆ ಪರಿಹಾರ ಕಂಡು ಹಿಡಿಯಬೇಕು. ಪ್ರವಾಸಿ ತಾಣ ಆಗಿರುವುದರಿಂದ ಇಲ್ಲಿರುವ ವ್ಯವಸ್ಥೆ ರಾಜ್ಯದ ಇತರೆ ನಗರಗಳಿಗೆ ಮಾದರಿಯಾಗಿ ಕಾಣಿಸುವಂತಿರಬೇಕು. ಈ ದಿಸೆಯಲ್ಲಿ ಬೀದಿ ಬದಿ ವ್ಯಾಪಾರಿಗಳಲ್ಲಿಯೂ ಅಂತಹ ಭಾವನೆ ಮೂಡುವ ಕೆಲಸ ಆಗಲಿದೆ ಎಂದರು.



### ಮೈಸೂರು ಒಪನ್ ಬಾರ್ ಆಗಿದ್ಯಾ..?

ಮೈಸೂರು: ಮೈಸೂರು ನಗರ ಹಾಗೂ ರಿಂಗ್ ರಸ್ತೆಗಳಲ್ಲಿಯೇ ನಿಂತು, ಕಾರಿನೊಳಗೆ ಕುಡಿಯುವವರ ಸಂಖ್ಯೆ ಹೆಚ್ಚಾಗಿ ನಗರದಲ್ಲೆ ಒಪನ್ ಬಾರ್ ಆಗಿದ್ಯಾ? ಇದನ್ನು ತಡೆಯುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ಗಮನ ಹರಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಶಿವಕುಮಾರ್ ಕಿಡಿಕಾರಿದರು.

ಸಭೆಯಲ್ಲಿ ಮಾತನಾಡಿದ ಅವರು ಸಂಪೂರ್ಣ ರಿಂಗ್ ರಸ್ತೆ ಹಾಗೂ ನಗರದ ಪ್ರಮುಖ ಕಡೆಗಳಲ್ಲಿ ರಸ್ತೆ ಪಕ್ಕದಲ್ಲೇ ನಿಂತು ಕುಡಿಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಆರ್.ಟಿ.ನಗರ, ಪತ್ರಕರ್ತರ ಬಡಾವಣೆ ಸೇರಿ ಸಂಪೂರ್ಣ ರಸ್ತೆಯಲ್ಲಿ ಈ ಅವ್ಯವಸ್ಥೆ ಇದ್ದು ಇದನ್ನು ಸರಿಪಡಿಸುವಂತೆ ಹೇಳಿದರು. ಇದಕ್ಕೂ ಮುನ್ನ ಮಾತನಾಡಿದ ಶಾಸಕ ಹಾಗೂ ಸಮಿತಿ ಸದಸ್ಯ ದರ್ಶನ್ ದ್ರುವನಾರಾಯಣ್ ನಮ್ಮ ಮನೆ ಮುಂದೆಯೇ ಕೆಲವರು ಸಂಜೆ ವೇಳೆ ಕಾರ್ ನಿಲ್ಲಿಸಿಕೊಂಡು ಕುಡಿಯುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ನಗರಕ್ಕೆ ಕೆಟ್ಟ ಹೆಸರು ಬರುತ್ತದೆ. ಹೀಗಾಗಿ ಎಂಆರ್ ಪಿ ಬಾರ್ ಎದುರು ಸೇರಿ ರಸ್ತೆಗಳಲ್ಲಿ ಕುಡಿಯುವವರ ವಿರುದ್ಧ ಕ್ರಮ ಕೈಗೊಳ್ಳಿ ಎಂದರು.

### ಗನ್‌ಹೌಸ್ ವ್ಯಾಪಾರಸ್ಥರಿಗೆ ಮೂಲ ಸೌಕರ್ಯ ಕಲ್ಪಿಸಿಕೊಡಿ

ಮೈಸೂರು: ನಗರದ ಗನ್‌ಹೌಸ್ ಜಾಗದ ವಿಚಾರ ನ್ಯಾಯಾಲಯದಲ್ಲಿ ನಡೆಯುತ್ತಿರುವುದನ್ನೇ ಮಾನದಂಡವಾಗಿರಿಸಿ ಕೊಂಡು ಅಲ್ಲಿರುವವರಿಗೆ ಮೂಲಸೌಕರ್ಯ ನೀಡದಿರುವುದು ತಪ್ಪು. ಹೀಗಾಗಿ ಕೂಡಲೇ ಅವರಿಗೆ ಬೀದಿಬದಿ ವ್ಯಾಪಾರಿಗಳ ಕಾರ್ಡ್ ನೀಡಿ ಅವರಿಗೆ ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಮೊದಲಾದ ಮೂಲ ಸೌಕರ್ಯ ಕಲ್ಪಿಸಿ ಎಂದು ಕರ್ನಾಟಕ ವಿಧಾನ ಮಂಡಲ ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷ ಹಾಗೂ ಶಾಸಕ ಶ್ರೀನಿವಾಸ್ ಸೂಚಿಸಿದರು.

ಗನ್ ಹೌಸ್ ನಲ್ಲಿ ವ್ಯಾಪಾರಕ್ಕೆ ಬರುತ್ತಿರುವ ರೈತರು, ವ್ಯಾಪಾರಿ ಬಡ ಮಹಿಳೆಯರಿಗೆ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಮಳೆ ಬಂದರೆ ನೆನೆಯುವ ವ್ಯವಸ್ಥೆ ಹಾಗೂ ವಿದ್ಯುತ್ ಇಲ್ಲದೆ ಕತ್ತಲಲ್ಲಿ ವಾಸಿಸುತ್ತಿರುವ ಬಗ್ಗೆ ವಿಧಾನ ಪರಿಷತ್ ಸದಸ್ಯ ಶಿವಕುಮಾರ್ ನಗರಪಾಲಿಕೆ ಅಧಿಕಾರಿಗಳಿಗೆ ತರಾಟೆಗೆ ತೆಗೆದು ಕೊಂಡರು. ಇದಕ್ಕೆ ದನಿಗೂಡಿಸಿದ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಜಾಗದ ವಿಚಾರ ಕೋರ್ಟ್ ತೀರ್ಪಿನ ಪ್ರಕಾರ ನಡೆಯಲಿ. ಅಲ್ಲಿ ವ್ಯಾಪಾರಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು ನಿಮ್ಮ ಹಕ್ಕು ಶೀಘ್ರ ಅವರಿಗೆ ಕಾರ್ಡ್ ವಿತರಿಸಿ ಎಲ್ಲಾ ವಿಧವಾದ ಮೂಲಭೂತ ಸೌಕರ್ಯ ಕಲ್ಪಿಸಿ ಎಂದು ಹೇಳಿದರು.

### ಕೆಡಿ ರಸ್ತೆ ಸಂಚರಿಸಲು ಆಗುತ್ತಿಲ್ಲ

**ನಗರದ ಪ್ರಮುಖ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ಮೊಬೈಲ್ ಕ್ಯಾಂಟೀನ್, ರಸ್ತೆ ಬದಿ ವ್ಯಾಪಾರಿಗಳು ಹಾಕಿಕೊಳ್ಳುತ್ತಿರುವುದರಿಂದ ಸಂಚರಿಸಲು ಆಗುತ್ತಿಲ್ಲ. ಅದರಲ್ಲೂ ಕೆಡಿ ರಸ್ತೆಯಲ್ಲಿ ನಿತ್ಯ ಪ್ರಯಾಣಿಕರು ಸಮಸ್ಯೆ ಅನುಭವಿಸುತ್ತಿದ್ದಾರೆ. ನಂಜನಗೂಡು ತಾಲ್ಲೂಕಿನಲ್ಲಿ ಇಂತಹ ಸಮಸ್ಯೆ ಉದ್ಭವಿಸಿದ ಬಳಿಕ ಫುಡ್ ಸ್ಟ್ರೀಟ್ ನಿರ್ಮಿಸಿ ಒಂದೆಡೆ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಆ ಕೆಲಸ ನಗರದಲ್ಲಿಯೂ ಆಗಲಿ. ಹಾಸನದಲ್ಲಿ ಹೆಚ್ಚು ಹೃದಯಾಘಾತದ ಬಗ್ಗೆ ಸುದ್ದಿಯಾಗಿದ್ದಕ್ಕೆ ಜಂಕ್ ಫುಡ್ ಕಾರಣ ಎಂಬ ವರದಿ ಹಿನ್ನೆಲೆಯಲ್ಲಿ ಬಣ್ಣ ರಹಿತ ಹಾಗೂ ಗುಣಮಟ್ಟದ ಆಹಾರ ತಯಾರಿ ಬಗ್ಗೆ ಕಟ್ಟುನಿಟ್ಟಿನ ಕ್ರಮ ಜರುಗಿಸುವ ಕೆಲಸ ತಾಲ್ಲೂಕಿನಲ್ಲಿ ಮಾಡಿದ್ದು, ಅದನ್ನು ನಗರದಲ್ಲಿಯೂ ಮಾಡಲು ಕ್ರಮವಹಿಸಿ ಎಂದು ಶಾಸಕ ದರ್ಶನ್ ದ್ರುವನಾರಾಯನ್ ಹೇಳಿದರು.**

ಸಮಿತಿ ಸದಸ್ಯ ಹಾಗೂ ಶಾಸಕ ಶರಣ ಸಲಗಾರ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಯತ್ನದ ಫಲವಾಗಿ ಮೈಸೂರು ಸ್ವರ್ಗದಂತಿದೆ. ಇಂತಹ ಸ್ವರ್ಗದೊಳಗೆ ದೇಶದ ಮೂಲೆ ಮೂಲೆಯಿಂದ ಜನರು ಬರುತ್ತಾರೆ. ಇಲ್ಲಿನ ಅವ್ಯವಸ್ಥೆ ಗಮನಿಸಿದರೆ ಸ್ವರ್ಗಕ್ಕೆ ಬೆಂಕಿ ಹಚ್ಚುವ ಕೆಲಸ ಆಗುತ್ತಿದೆ ಎಂದೆನಿಸುತ್ತಿದೆ. ಪಂಜಾಬ್ ಮಾದಕ ವ್ಯಸನದಲ್ಲಿ ಎನಾಗಿದೆ ಎಂಬುದು ಗೊತ್ತಿದೆ. ದಕ್ಷಿಣ ಭಾರತದಲ್ಲೇ ಹೆಚ್ಚು ಮಾದಕ ವ್ಯವಸಿಗಳು ಬೆಂಗಳೂರು ಸ್ಥಾನ ಪಡೆದಿದೆ. ನಮ್ಮದೇ ಬೀದರ್ ನಲ್ಲಿ 6 ಕೋಟಿ ಮಾದಕ ಸಿಕ್ಕರೆ, ಮೈಸೂರಲ್ಲಿ 20 ಕೋಟಿ ಮೌಲ್ಯದ ಮಾದಕ ಸಿಕ್ಕಿದೆ. ಹೀಗೆ ಕೊಟ್ಯಾಂತರ ಮಾದಕ ಯುವಜನರ ದಿಕ್ಕು ತಪ್ಪಿಸುತ್ತಿದೆ. ಬಿಇ, ಎಂಟೆಕ್ ಆದವರೂ ಖಾಲಿ ಕುಳಿತಿದ್ದು, ಅವರನ್ನು ಡ್ರಗ್ಸ್ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಬಿಸಿ ಚಹವನ್ನು ಕವರ್ ನಲ್ಲಿ ಕೊಡುವ ಕೆಲಸ ಇಂದಿಗೂ ದುರಂತ. ಪಲಾವ್ ಅನ್ನು ಇಂದಿಗೂ ಪ್ಲಾಸ್ಟಿಕ್ ಪೇಪರ್ ನಲ್ಲಿ ಕೊಡುತ್ತಿರುವುದನ್ನು ಪಾಲಿಕೆ ಆಯುಕ್ತರೂ ಮನಸ್ಸು ಮಾಡಿದರೆ ಒಂದೇ ದಿನದಲ್ಲಿ ತಡೆಯಬಹುದು. ಗೋಬಿ, ಚಿಕನ್ ಕಲರ್ ಬಳಸಲಾಗುತ್ತಿದ್ದು, ಇದನ್ನು ತಡೆಯಿರಿ. ಮೈಸೂರನ್ನು ಸ್ವರ್ಗವಾಗಿಯೇ ಉಳಿಸಿ ಎಂದರು.

ಸಭೆಯಲ್ಲಿ ವಿಧಾನ ಸಭೆಯ ಸದಸ್ಯರು ಹಾಗೂ ಸಮಿತಿಯ ಸದಸ್ಯರಾದ ಭೀಮಗೌಡ, ಜಿಲ್ಲಾಧಿಕಾರಿಗಳಾದ ಜಿ ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಳಾದ ಎಸ್ ಯುಕೇಶ್ ಕುಮಾರ್, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶೇಕ್ ತನ್ವೀರ್ ಆಸಿಫ್ ಸೇರಿ ಇತರರು ಉಪಸ್ಥಿತರಿದ್ದರು.

# ಅಕ್ರಮ ಕೇರಳ ಲಾಟರಿ ಮಾರಾಟ: ಇಬ್ಬರ ಬಂಧನ

ಗುಂಡ್ಲುಪೇಟೆ: ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್ ಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂಧಿಸಿ, ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದ ಘಟನೆ ಪಟ್ಟಣದಲ್ಲಿ ನಡೆದಿದೆ.



ತಾಲೂಕಿನ ಹೊಸೂರು ಗ್ರಾಮದ ಸೊಪ್ಪಿನ ಕೇರಿ ಮಹೇಶ ಹಾಗೂ ಮೈಸೂರಿನ ನಾಯ್ಡು ನಗರದ ಅಮೃತ್ ಬಂಧಿತ ಆರೋಪಿಗಳು. ಮಡಹಳ್ಳಿ ಸರ್ಕಲ್ ಹಾಗೂ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಕೇರಳ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಟ್ಟಣ ಠಾಣೆಯ ಪೊಲೀಸರು ಆರೋಪಿಗಳನ್ನು ಬಂಧಿಸಿ ಮಹೇಶನ ಬಳಿಯಿದ್ದ ಸುಮಾರು 3500 ರೂ. ಮೌಲ್ಯದ 70 ಲಾಟರಿಗಳು ಹಾಗೂ ಅಮೃತ್ ಬಳಿಯಿದ್ದ ಸುಮಾರು 2,02,000 ರೂ. ಮೌಲ್ಯದ 3490 ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ಎನ್. ಜಯಕುಮಾರ್, ಸಬ್ ಇನ್ಸ್ ಪೆಕ್ಟರ್ ನರೇಶ್ ಕುಮಾರ್ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.





# ಅಂಗನವಾಡಿಗಳಿಗೆ ಸ್ವಂತ ಕಟ್ಟಡ

## ಅಗತ್ಯ ಕ್ರಮವಹಿಸಲು ಶಾಸಕರಿಂದ ಅಧಿಕಾರಿಗಳಿಗೆ ಸೂಚನೆ

ರಾಮನಗರ: ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳ ಬದಲಿಗೆ ಸ್ವಂತ ಕಟ್ಟಡದಲ್ಲಿ ಕಾರ್ಯನಿವ್ವಿಸುವುದು ಮಕ್ಕಳ ಸುರಕ್ಷತೆ ಮತ್ತು ಸಮಗ್ರ ವಿಕಾಸದ ದೃಷ್ಟಿಯಿಂದ ಅತ್ಯಂತ ಮಹತ್ವವಾಗಿದೆ, ಹೀಗಾಗಿ ಅಂಗನವಾಡಿಗಳನ್ನು ಬಾಡಿಗೆ ಕಟ್ಟಡದಿಂದ ಮುಕ್ತಗೊಳಿಸಬೇಕು ಎಂದು ಶಾಸಕ ಇಕ್ಬಾಲ್ ಹುಸೇನ್ ಅವರು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮತ್ತು ನಗರಸಭೆಯ ಅಧಿಕಾರಿಗಳಿಗೆ ಸೂಚನೆ ಕೊಟ್ಟರು.

ತಾಲೂಕು ಪಂಚಾಯಿತಿಯಲ್ಲಿ ಬುಧವಾರ ನಡೆದ ಅಂಗನವಾಡಿ ಸುಧಾರಣೆಗಳ ಸಭೆಯಲ್ಲಿ ಅವರು ಮಾತನಾಡಿದರು. ನಗರ ಪ್ರದೇಶ ವ್ಯಾಪ್ತಿಯಲ್ಲಿ 81 ಅಂಗನವಾಡಿಗಳು ಕರ್ತವ್ಯ ನಿರ್ವಹಿಸುತ್ತಿವೆ.ಸುಮಾರು 3 ಸಾವಿರ ಮಕ್ಕಳು ಅಂಗನವಾಡಿಗಳಲ್ಲಿ ದಾಖಲಾಗಿದ್ದಾರೆ. ಈ ಪೈಕಿ 50 ಅಂಗನವಾಡಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. 10 ಕಟ್ಟಡ ಹೊಸದಾಗಿ ನಿರ್ಮಾಣ ಹಂತದಲ್ಲಿವೆ ಎಂದರು.

ಅಂಗನವಾಡಿಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುವ ವ್ಯವಸ್ಥೆ ಆಗುವವರೆಗೆ ಸರ್ಕಾರಿ ಶಾಲೆಗಳ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸಲು ಪರ್ಯಾಯವಾಗಿ ಯೋಚಿಸಬೇಕಿದೆ. ಕೆಲವೆಡೆ ಸ್ಥಳದ ಸಮಸ್ಯೆಯಿದೆ. ಖಾಲಿ ಇರುವ ಸರ್ಕಾರಿ ಕಟ್ಟಡಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಿ ಸುಧಾರಣೆ ಮಾಡಲಾಗುವುದು ಎಂದು ತಿಳಿಸಿದರು.

ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲು ಹಲವು ಕ್ರಮಗಳನ್ನು ಕೈಗೊಂಡಿವೆ. ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯ ಮೂಲಕ ಪಟ್ಟಣ ವ್ಯಾಪ್ತಿಯಲ್ಲಿ 10 ಹೊಸ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಎಂದು ಹೇಳಿದರು.




ಪೂರ್ವ ಪ್ರಾಥಮಿಕ ಶಿಕ್ಷಣ ಮಕ್ಕಳು ಆಟವಾಡಲು ಮತ್ತು ಕಲಿಯಲು ಸಾಕಷ್ಟು ಗಾಳಿ, ಬೆಳಕು ಇರುವ ದೊಡ್ಡ ಕೊಠಡಿಗಳ ಅಗತ್ಯವಿರುತ್ತದೆ. ಚಿಕ್ಕ ಮಕ್ಕಳಿಗೆ ಬಳಸಲು ಸುಲಭವಾಗುವಂತಹ ಬೇಬಿ ಫ್ರೆಂಡ್ಲಿ ಶೌಚಾಲಯಗಳು ಮತ್ತು ನೀರಿನ ಸೌಲಭ್ಯ ಬೇಕಾಗುತ್ತದೆ. ಆಗಾಗಿ ನಗರಸಭೆ ಇಂಜಿನಿಯರ್ ಗಳನ್ನು ನೋಡಲ್ ಆಫೀಸರ್ ಗಳನ್ನಾಗಿ ನೇಮಿಸಿ, ಖಾಲಿ ಉಳಿದಿರುವ ಸರ್ಕಾರಿ ಶಾಲೆ ಕಟ್ಟಡ, ಸರ್ಕಾರಿ ಕಚೇರಿ ಕಟ್ಟಡಗಳನ್ನು ಗುರುತಿಸಿ ನನಗೆ ತ್ವರಿತವಾಗಿ ವರದಿ ಕೊಡುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳು ನಿರ್ಮಾಣವಾದರೆ ಮಕ್ಕಳ ಸುರಕ್ಷತೆ ಮತ್ತು ನೈರ್ಮಲ್ಯವನ್ನು ಕಾಪಾಡುವುದು ಸುಲಭ. ಪ್ರತಿ ತಿಂಗಳು ಸರ್ಕಾರ ಅಥವಾ ಇಲಾಖೆ ಪಾವತಿಸಬೇಕಾದ ಬಾಡಿಗೆ ಹಣ ಉಳಿತಾಯವಾಗುತ್ತದೆ. ಶಾಶ್ವತವಾದ ಸರ್ಕಾರಿ ಆಸ್ತಿ ಸೃಷ್ಟಿಯಾಗುತ್ತದೆ. ಗರ್ಭಿಣಿಯರು, ಬಾಣಂತಿಯರು ಮತ್ತು ಕಿಶೋರಿ ಹೆಣ್ಣುಮಕ್ಕಳಿಗೆ ಆರೋಗ್ಯ ತಪಾಸಣೆ, ಲಸಿಕಾ ಕಾರ್ಯಕ್ರಮಗಳನ್ನು ನಡೆಸಲು ಸ್ವಂತ ಕಟ್ಟಡಗಳು ಹೆಚ್ಚು ಅನುಕೂಲ ಕರವಾಗಿರುತ್ತವೆ ಎಂದು ಶಾಸಕರು ಅಭಿಪ್ರಾಯಪಟ್ಟರು.

ನಗರಸಭೆಯ ಚೌಲಿಪುರ, ಗೀತಾಮಂದಿರ ಬಡಾವಣೆ, ಗೆಜ್ಜಲಗುಡ್ಡೆ, ಯಾರಬ್ ನಗರ, ಬಳೇಪೇಟೆ,ಮದರ್ ಖಾನ್ ಮೊಹಲ್ಲಾ, ಟ್ರೂಪ್ ಲೇನ್, ತೋಪ್‌ಖಾನ್ ಮೊಹಲ್ಲಾ, ವಿನಾಯಕನಗರ, ಅಂಬೇಡ್ಕರ್ ನಗರ ಸೇರಿದಂತೆ 30 ಕ್ಕೂ ಹೆಚ್ಚು ವಾರ್ಡ್ ಗಳಲ್ಲಿ ಅಂಗನ ವಾಡಿ ಕಾರ್ಯಕರ್ತೆಯರು ಸ್ಥಳ ಸಂಭಂದ ಶಾಸಕ ರೊಂದಿಗೆ ಸಭೆಯಲ್ಲಿ ಮುಕ್ತ ಚರ್ಚೆ ನಡೆಸಿದರು.

ಸಭೆಯಲ್ಲಿ ತಹಸೀಲ್ದಾರ್ ತೇಜಸ್ವಿನಿ, ನಗರಸಭೆ ಪೌರಾಯುಕ್ತ ಡಾ.ಜಯಣ್ಣ, ಸಿಡಿಪಿಓ ಕಾಂತರಾಜು ಸೇರಿದಂತೆ ಅಧಿಕಾರಿಗಳು ಇದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ !

ಪುರಂದರ ದಾಸರಿಗೆ ಪ್ರಿಯನವನು,
ದಾಸವರೇಣ್ಯರಿಗೆ ಅನುರಾಗಿ ಅವನು,
ಕರಣಾಕರನು, ಆನಂದಮಯನು,
ದುರಿತಗಳೊಡಿಸುವ ದಯಾಮಯನು!

ರಾಘವೇಂದ್ರ ರಾಯರ ಹೃದಯದೊಳಗಿಹನು,
ಸೇವಿಪ ಭಕ್ತರ ಅಭೀಷ್ಟೆಯ ಪೂರೈಸುವನು,
ಭಕ್ತರ ಭಕುತಿಗೆ ಒಲಿದು ಬರುವನು,
ಕಂಟಕ ಕಳೆದ ಕರುಣೆಯ ಕಡಲವನು,

ಸುದಾಮನಿಗೆ ಪ್ರಿಯ ಸಖನವನು,
ಅವಲಕ್ಕಿಯ ಮುಕ್ಕಿ ಮನವ ತಣಿಸಿದವನು,
ಸಖನ ಮನದೊಳಗಿನ ಚಿಂತೆ ನಿವಾರಿಸದವನು,
ತನಗೊಲಿದು ಬಂದವರಿಗೆ ಬಾಂಧವನು!


ಕನಕದಾಸರ ಭಕ್ತಿಗೆ ಮೆಚ್ಚಿ ದರ್ಶನ ಕೊಟ್ಟವನು,
ಕನಕ ಕಿಂಡಿಯಲಿ ಬಂದು ತಾ ನಿಂತವನು,
ಹೇಮ ಗಿರೀಶನೆಂಬ ಮುದ್ದು ಹೆಸರಿನಿಂದ
ಭಕ್ತ ವತ್ಸಲನೆಂದು ಬಿರುದು ಪಡೆದಿರುವನು!

# ನಾನು ಜಿಪಂ ಚುನಾವಣೆ ಆಕಾಂಕ್ಷಿ

## ಜಿನ್ನಹಳ್ಳಿ ರಾಜನಾಯಕ ಸ್ಪಷ್ಟನೆ

ಎಚ್.ಡಿ.ಕೋಟೆ: ಕಳೆದ ಐದು ವರ್ಷಗಳ ಹಿಂದೆಯೇ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ತಂದಿದ್ದೆ. ಪಕ್ಷ ಸಂಘಟಿಸುವಂತೆ ಶಾಸಕರು ಸೂಚನೆ ನೀಡಿದ್ದರು. ಮುಂಬರುವ ಜಿ.ಪಂ. ಚುನಾವಣೆಯಲ್ಲಿ ನಾನು ಕೂಡ ಟಿಕೆಟ್ ಆಕಾಂಕ್ಷಿ ಎಂದು ದಿ.ಎಸ್ ಚಿಕ್ಕಮಾದು ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ಸ್ಪಷ್ಟಪಡಿಸಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಎಸ್ ಚಿಕ್ಕಮಾದು ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಹುಟ್ಟುಹಬ್ಬ ಆಚರಿಸಿಕೊಂಡು ಮಾತನಾಡಿದರು. ಜಿ.ಪಂ ಚುನಾವಣೆಯಲ್ಲಿ ಸ್ಪರ್ಧೆ ಸಂಬಂಧ ಶಾಸಕರ ಜೊತೆ ಮಾತನಾಡಿದ್ದೇನೆ. ಅನಿಲ್ ಚಿಕ್ಕಮಾದು ಅವರು ಕೂಡ ಎಸ್.ಟಿ ಮೀಸಲು ಕ್ಷೇತ್ರದಲ್ಲಿ ಪಕ್ಷ ಸಂಘಟಿಸುವತ್ತ ಹೆಚ್ಚು ಗಮನಹ ಹರಿಸಿ ಎಂದು ಹಿಂದೆಯೇ ಸೂಚನೆ ನೀಡಿದ್ದಾರೆ. ಹೀಗಾಗಿ ಸಮುದಾಯದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರ ಜೊತೆಗೆ ಪಕ್ಷ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದೇನೆ. ನನ್ನ ಗುರುಗಳಾದ ಎಸ್ ಚಿಕ್ಕಮಾದು ಅವರ ಹಾದಿಯಲ್ಲಿ ನಾನು ಕೂಡ ನಡೆಯುತ್ತೇನೆ ಎಂದು ಹೇಳಿದರು. ಸಮುದಾಯದ ಮುಖಂಡರಾದ ಮರಿತಿಮ್ಮ ನಾಯಕ, ಸಿದ್ದ ನಾಯ್ಕ, ಈರನಾಯಕ, ಕೋಟೆ ದಾಸ ನಾಯಕ, ಪುಟ್ಟ ಬಸವನಾಯಕ, ಜಯಶೀಲ, ಪ್ರಕಾಶ್, ಚಾಕಳ್ಳಿ ಕೃಷ್ಣ, ಜಿಯಾರ ನಾಗ ನಾಯಕ, ಕುಮಾರಸ್ವಾಮಿ ನಾಯಕ, ಪ್ರವೀಣ್, ಟಿಎಲ್ ಸ್ವಾಮಿ, ರವಿ ನಾಯಕ, ಉಮೇಶ್, ನಾಗರಾಜು, ಸಿದ್ದನಾಯಕ, ಕೆ ಟಿ ಚಿಕ್ಕ ನಾಯಕ, ಮಹೇಶ ನಾಯ್ಕ, ರಾಜೇಂದ್ರ, ಜವರನಾಯಕ, ನಾಗರಾಜು, ಗೋವಿಂದು, ತಿಮ್ಮನಾಯಕ, ಶಂಭು ಲಿಂಗನಾಯಕ, ಮಂಜು, ಕೃಷ್ಣ, ಶ್ರೀನಿವಾಸ್, ಗೋಪಾಲ್, ಬಿ.ಸಿ ರಾಜು, ಲೀಲಾವತಿ, ಮರ ಳೂರು ನಾಯಕ, ಶಿವು, ಚಿಕ್ಕನಾಯಕ ವಿಜಯ್, ಚೇತನ್, ಸ್ವಾಮಿ, ಚಾಮರಾಜ, ಮಹೇಶ, ನಾಗೇಂದ್ರ, ಸೋಮಣ್ಣ, ಜಯಪ್ಪ, ಮಹಾ ದೇವ ನಾಯಕ, ನಾಗರಾಜು, ಚಿಕ್ಕನಾಯಕ ಅನೇಕರು ಇದ್ದರು.



# ಪ್ರಧಾನಿಯಾಗಿ ಮೋದಿ 12 ವರ್ಷ ಪೂರ್ಣ: ವಿಶೇಷ ಪೂಜೆ

ಚಾಮರಾಜನಗರ: ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ರಾಜಕೀಯ ಇತಿಹಾಸದಲ್ಲಿ ಸುದೀರ್ಘ ಅವಧಿಗೆ ನಿರಂತರ ಅಧಿಕಾರ ನಡೆಸಿದ ಪ್ರಮುಖ ಪ್ರಧಾನಿಗಳಲ್ಲಿ ಒಬ್ಬರಾಗಿ 12 ವರ್ಷಗಳ (ಸುಮಾರು 4,399 ದಿನಗಳು) ಐತಿಹಾಸಿಕ ಮೈಲುಗಲ್ಲು ತಲುಪಿದ ಹಿನ್ನೆಲೆಯಲ್ಲಿ, ಚಾಮರಾಜ ನಗರ ಬಿಜೆಪಿ ಗ್ರಾಮಾಂತರ ಹಾಗೂ ನಗರ ಮಂಡಲದ ವತಿಯಿಂದ ನಗರದ ಪ್ರಸಿದ್ಧ ಶ್ರೀ ಮುದುಕು ಮಾರಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.



### ಬಿಜೆಪಿ ಕಾರ್ಯಕರ್ತರ ಜೈಕಾರ ಮತ್ತು ಸಂಭ್ರಮಾಚರಣೆ

ವಿಶೇಷ ಪೂಜಾ ಕಾರ್ಯಕ್ರಮದ ನಂತರ ದೇವಸ್ಥಾನದ ಮುಂಭಾಗದಲ್ಲಿ ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು, ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರವಿರುವ ಪ್ಲೇ ಕಾರ್ಡ್‌ಗಳನ್ನು ಕೈಯಲ್ಲಿ ಹಿಡಿದು ಸಂಭ್ರಮಿಸಿದರು. ದೇಶವನ್ನು ಪ್ರಗತಿಯತ್ತ ಮುನ್ನಡೆಸುತ್ತಿರುವ ನರೇಂದ್ರ ಮೋದಿ ಅವರಿಗೆ ಜಯವಾಗಲಿ ಎಂದು ಜೋರಾಗಿ ಜೈಕಾರ ಕೂಗುವ ಮೂಲಕ ತಮ್ಮ ಸಂತಸವನ್ನು ಹಂಚಿಕೊಂಡರು.

### ನಿರಂತರ ಆಡಳಿತದ ಸಾಧನೆ ಹಾಗೂ ಜನಕಲ್ಯಾಣ ಯೋಜನೆಗಳ ಸ್ಮರಣೆ

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಅವರು, 2014ರ ಮೇ 26ರಂದು ಮೊದಲ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನರೇಂದ್ರ ಮೋದಿ ಅವರು ಇಂದಿಗೆ 12 ವರ್ಷಗಳ ಭವ್ಯ ಹಾಗೂ ನಿರಂತರ ಆಡಳಿತಾವಧಿಯನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಈ ಮೂಲಕ ಅವರು ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅತ್ಯಂತ ದೀರ್ಘಕಾಲ ನಿರಂತರ ಸೇವೆ ಸಲ್ಲಿಸಿದ ಪ್ರಮುಖ ಕಾಂಗ್ರೆಸ್ಸೇತರ ನಾಯಕರಾಗಿ ಹೊರಹೊಮ್ಮಿದ್ದಾರೆ. ನವಭಾರತದ ಹರಿಕಾರರಾಗಿರುವ ಮೋದಿ ಅವರು ಕಳೆದ 12 ವರ್ಷಗಳಲ್ಲಿ ದೇಶದ ಪ್ರತಿಯೊಬ್ಬ ಸಾಮಾನ್ಯ ನಾಗರಿಕನ ಜೀವನಮಟ್ಟ ಸುಧಾರಿಸಲು ಶ್ರಮಿಸಿದ್ದಾರೆ. ಅವರ ಅವಧಿಯಲ್ಲಿ ಜಾರಿಗೆ ಬಂದ ಫಸಲ್ ಬಿಮಾ ಯೋಜನೆ, ಆಯುಷ್ಮಾನ್ ಭಾರತ್, ಉಜ್ವಲ ಯೋಜನೆ, ಜನ್‌ಧನ್ ಖಾತೆ, ಆವಾಸ್ ಯೋಜನೆ ಹಾಗೂ ಸ್ವಚ್ಛ ಭಾರತ್ ಅಭಿಯಾನದಂತಹ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳಿಂದ ದೇಶದ ಶೇಕಡಾ 80 ರಷ್ಟು ಜನರು ನೇರ ಫಲಾನುಭವಿಗಳಾಗಿದ್ದಾರೆ ಎಂದು ಅವರು ವಿವರಿಸಿದರು.

### ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು

ಈ ವಿಶೇಷ ಪೂಜೆ ಮತ್ತು ವಿಜಯೋತ್ಸವ ಕಾರ್ಯಕ್ರಮದಲ್ಲಿ ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್ ಪಾಲ್ಗೊಂಡಿದ್ದರು. ಹಾಗೆಯೇ ಎಸ್‌ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯ ಸುಂದರ್, ಜಿಲ್ಲಾಧ್ಯಕ್ಷ ಚಂದ್ರಶೇಖರ್, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ ಭಗೀರಥ, ಸಾಹಿತಿ ಕೋಡಿಉಗನೆ ಮಂಜು, ನಟರಾಜು, ನಗರ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಭಾಸ್ಕರ್, ಚಂದ್ರಶೇಖರ್, ರಾಜು, ಶಿವಣ್ಣ, ಉತ್ತುವಳ್ಳಿ ಮಹೇಶ್, ಮನೋಜ್ ಪಟೇಲ್, ವೆಂಕಟರಾವ್ ಸಾಠೆ, ಕಾರ್ಯಾಲಯ ಕಾರ್ಯದರ್ಶಿ ಪಿ. ರಂಗಸ್ವಾಮಿ ಮತ್ತು ವೀರೇಂದ್ರ ಸೇರಿದಂತೆ ಹಲವಾರು ಪ್ರಮುಖರು ಭಾಗವಹಿಸಿದ್ದರು.

### ಜಾಗತಿಕ ನಾಯಕತ್ವದ ಗುರಿ

ಪ್ರಧಾನಿ ಮೋದಿಯವರ ಪ್ರಮುಖ ಉದ್ದೇಶವೆಂದರೆ 2047ರ ವೇಳೆಗೆ ಭಾರತವನ್ನು 'ವಿಕಸಿತ ಭಾರತ'ವನ್ನಾಗಿ ನಿರ್ಮಿಸುವುದಾಗಿದೆ ಎಂದು ಪ್ರೊ. ಮಲ್ಲಿಕಾರ್ಜುನಪ್ಪ ತಿಳಿಸಿದರು. ಈ ಮಹತ್ತರ ಗುರಿಗೆ ಪೂರಕವಾಗಿ ಹಲವು ಸುಧಾರಣೆಗಳನ್ನು ತರಲಾಗಿದ್ದು, ಇವೆಲ್ಲದರ ಮೂಲ ಆಶಯ 'ಆತ್ಮನಿರ್ಭರ ಭಾರತ'ದ ನಿರ್ಮಾಣವಾಗಿದೆ. ಮೋದಿ ಅವರು ಕೇವಲ ಭಾರತದ ನಾಯಕರಾಗಿ ಉಳಿಯದೆ, ತಮ್ಮ ಅತ್ಯುತ್ತಮ ಆಡಳಿತ ವೈಖರಿಯಿಂದಾಗಿ ಇಂದು ಜಾಗತಿಕ ಮಟ್ಟದಲ್ಲಿ ವಿಶ್ವನಾಯಕರಾಗಿ ಬೆಳೆದಿದ್ದಾರೆ. ದೇಶದ ರಕ್ಷಣೆ ಮತ್ತು ನಾಗರಿಕರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಅವರಿಗೆ ಭಗವಂತನು ದೀರ್ಘ ಆಯುಷ್ಯ ಹಾಗೂ ಉತ್ತಮ ಆರೋಗ್ಯವನ್ನು ಕರುಣಿಸಲಿ ಎಂದು ಅವರು ಆಶಿಸಿದರು.

# ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ



ಮೈಸೂರು: ತಾಲ್ಲೂಕು ನಾಯಕರ ಸಂಘವು ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ ಎಂದು ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 2025– 26ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ. 80ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಜೂನ್ 18ರೊಳಗೆ ಇಲ್ಲಿನ ಸರಸ್ವತಿಪುರಂನ ನಾಯಕರ ವಿದ್ಯಾರ್ಥಿ ನಿಲಯದಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು ಎಂದರು. ಅರ್ಹ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ, ನಗದು ಬಹುಮಾನ ನೀಡಿ ಸನ್ಮಾನಿಸಲಾಗುವುದು. ಆಸಕ್ತರು ಅರ್ಜಿ ಹಾಗೂ ಮಾಹಿತಿಗೆ ಮೊ.ಸಂ.86604 31842, 99459 01912 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಉಪಾಧ್ಯಕ್ಷ ರಮ್ಮನಹಳ್ಳಿ ವೆಂಕಟಯ್ಯ, ಖಜಾಂಚಿ ಮರಿಸ್ವಾಮಿ ನಾಯಕ, ನಿರ್ದೇಶಕ ರಮ್ಮನಹಳ್ಳಿ ರಾಜಶೇಖರ್, ಮುಖಂಡ ಕ್ಯಾತಮಾರನಹಳ್ಳಿ ವೆಂಕಟೇಶ್ ಇದ್ದರು.

# ನಾಳೆ ಲಲಿತಾ ಜಿಟಿಡಿಗೆ ಅಭಿನಂದನೆ

ಮೈಸೂರು: ಲಲಿತಾ ಜಿ.ಟಿ.ದೇವೇಗೌಡ ಅಭಿನಂದನಾ ಸಮಿತಿಯಿಂದ ನಗರದಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ ಭವನದಲ್ಲಿ ಜೂನ್ 12ರಂದು ಬೆಳಿಗ್ಗೆ 10ಕ್ಕೆ ಲಲಿತಾಭಿನಂದನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಉಪಾಧ್ಯಕ್ಷ ಎಂ.ಎನ್.ನಟರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿನ ಸಾಧನೆಗಾಗಿ ಲಲಿತಾ ಜಿ.ಟಿ.ದೇವೇಗೌಡ ಅವರಿಗೆ ರಾಜ್ಯ ಸರ್ಕಾರವು ಈಚೆಗೆ ಸಹಕಾರ ರತ್ನ ಪ್ರಶಸ್ತಿ ನೀಡಿದೆ. ಈ ಸಂತಸದ ಕ್ಷಣದಲ್ಲಿ ಅವರನ್ನು ಅಭಿನಂದಿಸಲಾಗುವುದು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದ, ಪಾಂಡವಪುರ ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದು ತಿಳಿಸಿದರು. ಪ್ರೊ.ಎಂ.ಕೃಷ್ಣೇಗೌಡ ಅವರು ಅಭಿನಂದನಾ ಭಾಷಣ ಮಾಡುವರು. ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ ಕಿರುಹೊತ್ತಿಗೆ ಬಿಡುಗಡೆ ಮಾಡುವರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ಕೃಷಿ ಸಾಧಕಿ ಕವಿತಾ ಮಿಶ್ರಾ ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದರು. ಸಮಿತಿ ಸಂಚಾಲಕ ಆರತಿ ಸೋಮಶೇಖರ್, ಸಹ ಕಾರ್ಯದರ್ಶಿ ಎಚ್.ಟಿ.ನಟೇಶ್, ಸದಸ್ಯರಾದ ರವಿ ಕ'ು ವ'ುಾ ರ್', ಸಿದ್ದಪ್ಪ, ತಿಮ್ಮೇಗೌಡ ಇದ್ದರು.



# ನೂತನ ಪದಾಧಿಕಾರಿಗಳ ಆಯ್ಕೆ



ಚಾಮರಾಜನಗರ, ಜಿಲ್ಲಾ ಪದವಿಪೂರ್ವ ಉಪನ್ಯಾಸಕರ ಸಂಘಕ್ಕೆ 2026–31 ಸಾಲಿಗೆ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾದರು.

ನಗರದ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಚುನಾವಣೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಭೌತಶಾಸ್ತ್ರ ಉಪನ್ಯಾಸಕ ಟಿ.ಮಧು, ಕಾರ್ಯಾಧ್ಯಕ್ಷರಾಗಿ – ಹನೂರು ತಾಲ್ಲೂಕು ಜಿ ವಿ ಗೌಡ ಕಾಲೇಜಿನ ನಂಜುಂಡಯ್ಯ,ಮಹಿಳಾ ಮೀಸಲು ಉಪಧ್ಯಾಕ್ಷೆಯಾಗಿ ಕೊಳ್ಳೇಗಾಲ ಎಸ್ ವಿ ಕೆ ಕಾಲೇಜಿನ ಧನಲಕ್ಷ್ಮೀ ,ಪ್ರಧಾನ ಕಾರ್ಯದರ್ಶಿಯಾಗಿ ಆಲೂರಿನ ಸರ್ಕಾರಿ ಪದವಿಪೂರ್ವ ಕಾಲೇಜು, ಆರ್. ಕೃಷ್ಣ ಮೂರ್ತಿ, ಖಜಾಂಚಿಯಾಗಿ ಸಂತೆ ಮರಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಮಹದೇವಪ್ರಭು, ಕಾರ್ಯದರ್ಶಿಯಾಗಿ ಅಮಚವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಶಿವರಾಮು, ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಕುದೇರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಡಾ. ಎಚ್.ಎಂ. ಮಣಿಕಂಠ, ಜಂಟಿ ಕಾರ್ಯದರ್ಶಿಯಾಗಿ ಗುಂಡ್ಲುಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮಹೇಶ್, ಸಂಚಾಲಕರಾಗಿ – ಅಮಚವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನಬಸವಣ್ಣ ಅವರು ಅವಿರೋಧವಾಗಿ ಆಯ್ಕೆಯಾದರು.ಸಂತೇಮರಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರಿಯ ಶಂಕರ್ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು

ನಗರ ಕೇಂದ್ರ ಗ್ರಂಥಾಲಯ, ಬಾಲ್ಯ ಫೌಂಡೇಷನ್ ಸಹಯೋಗದಲ್ಲಿ ಕಾರ್ಯಕ್ರಮ

# ನಿರುಪಯುಕ್ತ ಹಾಳೆಗಳಿಂದ ತಯಾರಿಸಿದ ನೋಟ್ ಪುಸ್ತಕ ವಿತರಣೆ

ಮೈಸೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆ, ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯ, ಬಾಲ್ಯ ಫೌಂಡೇಷನ್ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೋಟ್ ಪುಸ್ತಕಗಳ ಬಳಕೆಯಾಗದ ಹಾಳೆಗಳನ್ನು ಮರುಬಳಕೆ ಮಾಡಿಕೊಂಡು ತಯಾರಿಸಿದ ನೋಟ್ ಪುಸ್ತಕಗಳನ್ನು ನಗರದ ನಾನಾ ಶಾಲೆಗಳ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.

ನೋಟ್ ಪುಸ್ತಕಗಳಲ್ಲಿ ಬಳಕೆಯಾಗದೇ ಉಳಿಯುವ ಖಾಲಿ ಪುಟಗಳು ಮತ್ತೊಬ್ಬರ ಶೈಕ್ಷಣಿಕ ಅಭ್ಯಾಸಕ್ಕೆ ದಾರಿ ದೀಪವಾಗಬಲ್ಲದು. ಹಾಗಾಗಿ ಅಂತಹ ಖಾಲಿ ಪುಟಗಳನ್ನು ಸಂಗ್ರಹಿಸಿ ಅದಕ್ಕೆ ಪುಸ್ತಕ ರೂಪ ನೀಡಿ ಬಡ ಮಕ್ಕಳಿಗೆ ನೀಡುವ ಅಭಿಯಾನಕ್ಕೆ ಕೆಲ ದಿನಗಳ ಹಿಂದೆ ಚಾಲನೆ ನೀಡಿತ್ತು. ಈ ಕಾರ್ಯಕ್ರಮದ ದ್ಯೇಯೋದ್ದೇಶದಂತೆ ಬುಧವಾರ ಹೀಗೆ ತಯಾರಾದ ಪುಸ್ತಕಗಳನ್ನು ನಗರದ ಸಿಎಸ್‌ಐ ವಿಕ್ಟೋರಿಯಾ ಶಾಲೆ, ಗಾಡಿಚೌಕ ಹಿರಿಯ ಪ್ರಾಥಮಿಕ ಶಾಲೆ, ಮಹಜನ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಪುನರ್ ಬಳಕೆಗೆ ನೀಡಲಾಯಿತು. ಅಲ್ಲದೇ ಅಭಿಯಾನಕ್ಕೆ ನೆರವಾಗುವ ಉದ್ದೇಶದಿಂದ ತಾವು ಬಳಕೆ ಮಾಡಿದ ನೋಟ್ ಪುಸ್ತಕದಲ್ಲಿ ಉಳಿದ ಖಾಲಿ ಹಾಳೆಗಳನ್ನು ಅಭಿಯಾನದ ಬಳಕೆಗೆ ಶಾಲೆ ಮಕ್ಕಳು ನೀಡಿದರು.



ಈ ಅಭಿಯಾನಕ್ಕೆ ಕೈ ಜೋಡಿಸುವವರು ಬಳಕೆಯಾಗದೇ ಉಳಿಯುವ ನೋಟ್ ಪುಸ್ತಕದ ಹಾಳೆಗಳನ್ನು ಸಾರ್ವಜನಿಕರು ನಗರದಲ್ಲಿರುವ ಸಾರ್ವಜನಿಕ ರಿಂದ ಗ್ರಂಥಾಲಯಗಳಿಗೆ ನೀಡಿದರೆ. ಅದನ್ನು ಬಾಲ್ಯ ಫೌಂಡೇಷನ್ ಸೇರಿದಂತೆ ಇನ್ನಿತರ ಕೆಲ ಸಂಘ ಸಂಸ್ಥೆಗಳು ಅದನ್ನು ಸ್ವೀಕರಿಸಿ ವ್ಯವಸ್ಥಿತವಾಗಿ ಬೈಂಡಿಂಗ್ ಮಾಡಿಸಲಿವೆ. ನಂತರ ಅದನ್ನು ಅಗತ್ಯವಿರುವವರಿಗೆ ನೀಡುವ ಮೂಲಕ ಹಾಳೆ ತಯಾರಿಸಲು ಮರ ಕಡಿಯುವ ಪ್ರಮಾಣವನ್ನು ತಗ್ಗಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ. ನಗರ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷ ನಿತೀಶ್ ಪಾಟೀಲ್ ಅವರು ಮರು ಬಳಕೆಗೆ ಸಿದ್ದವಾಗಿರುವ ನೋಟ್ ಪುಸ್ತಕವನ್ನು ಶಾಲೆ ಮಕ್ಕಳಿಗೆ ವಿತರಿಸಿ ಮಾತನಾಡಿ, ನೋಟ್ ಪುಸ್ತಕಗಳ ಖಾಲಿ ಹಾಳೆ ಬಳಕೆಯಿಂದ ಮರಗಳ ಕಡಿಯುವ ಪ್ರಮಾಣ ತಗ್ಗುತ್ತದೆ. ಹಾಗಾಗಿ ಇದೊಂದು ಪರಿಸರ ಸ್ನೇಹಿ ಅಭಿಯಾನವಾಗಿದೆ. ಮಕ್ಕಳು ಬಳಕೆಯಾಗದ ಹಾಳೆಗಳನ್ನು ನೀಡುವ ಮೂಲಕ ಬೇರೆಯವರ ಶಿಕ್ಷಣ ಮುಂದುವ ರಿಕೆಗೆ ಕೊಡುಗೆ ನೀಡಬೇಕೆಂದು ಮನವಿ ಮಾಡಿದರು. ಪತ್ರಕರ್ತ ರಮೇಶ್ ಉತ್ತಪ್ಪ ನೋಟ್ ಪುಸ್ತಕಗಳ ಮರುಬಳಕೆ ಅಭಿಯಾನದಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿದ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಿದರು. ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕ ಬಿ.ಮಂಜುನಾಥ್, ಬಿಇಒಗಳಾದ ಕೃಷ್ಣ, ರೇವಣ್ಣ, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಉಪ ಆಯುಕ್ತ ರಮೇಶ್ ನರಸಯ್ಯ, ಮಹಾರಾಜ ಕಾಲೇಜು ಪ್ರಾಂಶುಪಾಲ ಡಾ.ವಿ.ಷಣ್ಮುಗಂ, ಬಾಲ್ಯ ಫೌಂಡೇಷನ್ ಸಂಸ್ಥಾಪಕ ಕೆ.ಎಸ್.ಅನೀಲ್ ಇತರರು ಇದ್ದರು.

# ಚಾಮರಾಜನಗರ: ಚಿರತೆ ದಾಳಿ ಹಸು ಸಾವು

ಚಾಮರಾಜನಗರ, ತಾಲೂಕಿನ ಪುಣ್ಯದ ಹುಂಡಿ ಗ್ರಾಮದಲ್ಲಿ ಚಿರತೆ ದಾಳಿಯಿಂದ ಹಸುವೊಂದು ಮೃತಪಟ್ಟಿದೆ.

ಪುಣ್ಯದಹುಂಡಿ ಗ್ರಾಮದ ನಿವಾಸಿ ಚರಣ್ ಎಂಬುವವರಿಗೆ ಸೇರಿದ್ದ ಹಸುವನ್ನು ತೋಟದಲ್ಲಿ ಕಟ್ಟಿ ಹಾಕಲಾಗಿತ್ತು. ಮಂಗಳವಾರ ಬೆಳಗ್ಗೆ ಚಿರತೆ ದಾಳಿ ನಡೆಸಿದ ಪರಿಣಾಮ ಹಸು ಮೃತಪಟ್ಟಿದೆ. ಹಸುವಿನ ಮೇಲೆ ದಾಳಿ ನಡೆಸುವುದನ್ನು ಸಮೀಪದಲ್ಲಿ ಇದ್ದವರು ನೋಡಿದ್ದು, ಕಿರುಚಿಕೊಂಡದ್ದರಿಂದ ಹಸುವನ್ನು ಬಿಟ್ಟು ಹೋಗಿದೆ.ಈ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಇದು ಖಚಿತವಾಗಿಯೂ ಚಿರತೆ ದಾಳಿ ಎಂದು ತಿಳಿಸಿದ್ದಾರೆ. ಈ ಭಾಗದಲ್ಲಿ ವರ್ಷದ ಹಿಂದೆ ಇದೇ ರೀತೀ ಚಿರತೆ ದಾಳಿ ನಡೆಸಿ ಹಸುವನ್ನು ಬಲಿ ಪಡೆದಿತ್ತು. ಈಗ ಮತ್ತೆ ಇದು ಮರುಕಳಿಸಿದೆ. ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಅದಲ್ಲದೇ ಬೋನ್ ಇರಿಸಿ ಚಿರತೆಯನ್ನು ಶೀಘ್ರವಾಗಿ ಸೆರೆ ಹಿಡಿಯಬೇಕು. ಇಲ್ಲವಾದರೇ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ರಾಜಿ ಮಾಡಿಕೊಳ್ಳದಿದ್ದರೆ ಯಶಸ್ಸು ಅಸಾಧ್ಯ : ಮೈಜಿಪಸಂ ಅಧ್ಯಕ್ಷ ಕೆ.ದೀಪಕ್

ಮೈಸೂರು: ದಲಿತ ರಾಜಕಾರಣದ ಬಗ್ಗೆ ಅಪಾರ ಕನಸ್ಸನ್ನು ಹೊಂದಿದ್ದ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಸಂಚಾಲಕ ಬಿ.ಕೃಷ್ಣಪ್ಪ ಅವರು ?ರಾಜಿ ಮಾಡಿಕೊಳ್ಳುವವರು ಮಾತ್ರ ಒಳ್ಳೆಯ ರಾಜಕಾರಣಿ ಆಗಲು ಸಾಧ್ಯ ಎಂಬ ಅಭಿಪ್ರಾಯಕ್ಕೆ ಬಂದಿದ್ದರು ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ತಿಳಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಬಿ.ಕೃಷ್ಣಪ್ಪ ಅವರ 88ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡಿದ ಅವರು, ರಾಜಿ ರಹಿತ ರಾಜಕಾರಣ ಈ ನೆಲಕ್ಕೆ ಒಗ್ಗದೆ ಇರುವುದರಿಂದ ಜನಪರ ಹೋರಾಟಗಾರರು ರಾಜಕೀಯ ಯಶಸ್ಸು ಕಾಣಲು ಕಷ್ಟ ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಹಿಂದೆ ಕೃಷ್ಣಪ್ಪ ಅವರು ?ರಾಜಕಾರಣ ಎಂದರೆ ರಾಜಿ ಮಾಡಿಕೊಳ್ಳುವುದು, ಯಾರು ರಾಜಿ ಮಾಡಿಕೊಳ್ಳುವ ಮನೋಭಾವ ಹೊಂದಿರುತ್ತಾರೆ



ಅವರು ಒಳ್ಳೆಯ ರಾಜಕಾರಣಿ ಆಗುತ್ತಾರೆ. ದೇವರು, ದೇವಸ್ಥಾನ, ಮಠ, ಮಠಾಧೀಶರನ್ನು ವಿರೋಧಿಸುವ ವೈಚಾರಿಕ ನೆಲೆಯ ಹೋರಾಟಗಾರರು ಒಂದು ವೇಳೆ ಚುನಾವಣೆಗೆ ನಿಂತರೆ ಅವರನ್ನು ಮತದಾರರು ದೇವಸ್ಥಾನದ ಮುಂದೆ ನಿಲ್ಲಿಸಿ ಪ್ರಸಾದ ಕೊಡುತ್ತಾರೆ. ಪ್ರಸಾದ ಸ್ವೀಕರಿಸದಿದ್ದರೆ ಅವರನ್ನೇ ತಿರಸ್ಕರಿಸುತ್ತಾರೆ? ಎಂದು ಹೇಳಿದ್ದರು. ಅವರ ಚಿಂತನೆ ಇಂದಿಗೂ ಪ್ರಸ್ತುತ ಎನಿಸಿದೆ ಎಂದರು.

ಅಂದು ದಲಿತ ಸಂಘರ್ಷ ಸಮಿತಿ ಸ್ಥಾಪನೆಯಿಂದ ಸಾವಿರಾರು ಮಂದಿ ದಲಿತರು ಭೂ ಒಡೆಯರಾದರು. ಸಾವಿರಾರು ಮಂದಿಗೆ ಸರಕಾರಿ ಉದ್ಯೋಗ ದೊರಕಿತು. ಶಾಲಾ-ಕಾಲೇಜುಗಳು ತೆರೆದವು. ಸಾವಿರಾರು ಹಾಸ್ಟೆಲ್‌ಗಳ ಉಗಮಕ್ಕೆ ದಸಂಸ ಚಳವಳಿ ಸಾಕ್ಷಿಯಾಯಿತು. ಇದೆಲ್ಲದಕ್ಕಿಂತ ಮಿಗಿಲಾಗಿ ಜಾತಿಯ ಕಾರಣಕ್ಕೆ ಅಮಾಯಕರ ಮೇಲೆ ನಡೆಯುತ್ತಿದ್ದ ದೌರ್ಜನ್ಯ ಶೋಷಣೆ ನಿಯಂತ್ರಣಕ್ಕೆ ಬಂತು. ಡಿಎಸ್‌ಎಸ್ ಎಂದರೆ ಸರಕಾರ ಮತ್ತು ಮೇಲ್ವರ್ಗಗಳು ಹೆದರು ಸ್ಥಿತಿ ನಿರ್ಮಾಣವಾಗಿತ್ತು ಎಂದು ಹೇಳಿದರು.

ಆದರೆ, ಇಂದು ರಾಜಿ ರಹಿತ ಚಳವಳಿ ನಡೆಸುವುದು ದಲಿತ ಸಂಘಟನೆಗಳಿಗೆ ದೊಡ್ಡ ಸವಾಲಾಗಿದೆ. ಸರಕಾರ ಮತ್ತು ರಾಜಕಾರಣಿಗಳ ನಿಯಂತ್ರಣಕ್ಕೆ ಸಂಘಟನೆಗಳು ಸಿಲುಕಿದ್ದಾವಾ ಎಂಬ ಆತಂಕ ಹುಟ್ಟು ಹಾಕಿದೆ. ಅಂದು ?ಚಳವಳಿಗಾರರು ಸತ್ತರೂ, ಚಳವಳಿಗೆ ಸಾವಿಲ್ಲ? ಎನ್ನುತ್ತಿದ್ದೆವು. ಇಂದು ಚಳವಳಿ ಸಾಯುತ್ತಿದೆ, ಚಳವಳಿಗಾರರು ಹುಟ್ಟುತ್ತಲೇ ಇದ್ದಾರೆ. 25 ವರ್ಷಗಳ ಹಿಂದೆಯೇ ಬಿ.ಕೃಷ್ಣಪ್ಪ ಅವರು ದಲಿತ ಚಳವಳಿ ದಿಕ್ಕು ತಪ್ಪಿದೆ ಎಂದು ಹೇಳಿದ್ದರು ಎಂದು ನುಡಿದರು.

ಇದಕ್ಕು ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ದಲಿತ ಪರ ಚಳವಳಿಗಾರ ಹರಿಹರ ಆನಂದಸ್ವಾಮಿ, ತಮ್ಮ ವಿದ್ಯಾರ್ಥಿ ದಿಸೆಯಲ್ಲಿ ದಸಂಸ ಸ್ಥಾಪನೆಯಾದ ಮೂಲ ಕಾರಣ ಮತ್ತು ನಡೆದುಬಂದ ಹಾದಿ ಕುರಿತು ಮಾತನಾಡಿದರು. ಬಸವಲಿಂಗಪ್ಪ ಅವರ ಬೂಸಾ ಚಳವಳಿಯಲ್ಲಿ ಪ್ರಧಾನ ಪಾತ್ರ ವಹಿಸಿದ ಡಿಎಸ್‌ಎಸ್, ಶೋಷಿತರ ಧ್ವನಿಯಾಗಿತ್ತು. ಈಗ ಹಲವು ಕಾರಣಗಳಿಗೆ ನಮ್ಮ ನಮ್ಮಲ್ಲೇ ಭಿನ್ನತೆಗಳು ಮೂಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದಸಂಸ ಜಿಲ್ಲಾ ಸಂಚಾಲ ಮೆಲ್ಲಹಳ್ಳಿ ನಾರಾಯಣ್, ದಸಂಸ ಸಂಘಟನೆಯು ಇಂದಿಗೂ ರಾಜಿ ರಹಿತ ಚಳವಳಿಗೆ ಬದ್ಧವಿದೆ. ಎಲ್ಲರೂ ಒಂದೇ ವೇದಿಕೆ ಮೇಲೆ ಕುಳಿತುಕೊಳ್ಳಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಬೇರೆ ಬೇರೆ ಸಂಘಟನೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಆದರೆ, ನಮ್ಮೆಲ್ಲರ ಧ್ಯೇಯೋದ್ದೇಶ ಒಂದೆ. ಅದು ಶೋಷಿತರ ಪರವಾದ ಹೋರಾಟ. ಈ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ತಿಳಿಸಿದರು.

ವೇದಿಕೆಯಲ್ಲಿ ದಸಂಸ ಮುಖಂಡರಾದ ಬನ್ನಳ್ಳಿ ಸೋಮಣ್ಣ, ದೊಡ್ಡ ಸಿದ್ದು, ಅನುಷಾ ಪುಟ್ಟಸಿದ್ದು, ರಾಮು ಸಿದ್ದರಾಜು ಮೊದಲಾದವರು ಹಾಜರಿದ್ದರು.

### ಬಂಡೀಪುರ ಕಾಡಿನಲ್ಲಿ ಮದ್ಯ ಸೇವಿಸಿ ಕರ್ತವ್ಯಲೋಪ ಎಸಗಿದ ಆರೋಪ

## ವಲಯ ಅರಣ್ಯಾಧಿಕಾರಿ ಅಮಾನತು

ಚಾಮರಾಜನಗರ, ಬಂಡೀಪುರ ಹುಲಿ ರಕ್ಷಿತಾರಣ್ಯದ ಕೋರ್ ವಲಯದಲ್ಲಿ ಮೂವರು ಮದ್ಯ ಸೇವನೆ ಮಾಡಿದ್ದ ಫೋಟೋ ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಘಟನೆ ಸಂಬಂಧ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ವಲಯ ಅರಣ್ಯಾಧಿಕಾರಿಯನ್ನು ಸರ್ಕಾರ ಅಮಾನತು ಮಾಡಿದೆ.

ಮದ್ದೂರು ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಡಿ.ಪುನೀತ್ ಕುಮಾರ್ ಅಮಾನತಾದವರು.

ಮದ್ದೂರು ವಲಯದ ಕಳ್ಳ ಬೇಟೆ ಶಿಬಿರದ ಬಳಿಯ ಹುಲಿ ಕಟ್ಟೆಯಲ್ಲಿ ಮೂವರು ಮದ್ಯ ಸೇವನೆ ಮಾಡಿದ್ದರ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಪ್ರಕರಣಕ್ಕೆ ಸಂಬಂದಿಸಿದಂತೆ ಅರಣ್ಯ ಇಲಾಖೆ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದ ಮಹದೇವಪ್ರಸಾದ್ ಬಿನ್ ನಾಗಪ್ಪ(38), ಗುಂಡ್ಲುಪೇಟೆ ಪಟ್ಟಣದ ಗಂಗಾಧರ್ ಬಿನ್ ನಾಗೇಗೌಡ(50) ಹಾಗೂ ಕಗ್ಗಳ ಗ್ರಾಮದ ಚೇತನ್ ಬಿನ್ ನಂಜಪ್ಪ(33) ಎಂಬ ಮೂವರ ವಿರುದ್ಧ ಕೇಸ್ ದಾಖಲಾಗಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದು ಬಂಧನಕ್ಕೆ ಕ್ರಮ ವಹಿಸಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಕಂಡುಬಂದ ಫೋಟೋ ಮಾಹಿತಿ ಮೇರೆಗೆ, ಅರಣ್ಯ ಅತಿಕ್ರಮ ಪ್ರವೇಶ ಅಪರಾಧಕ್ಕೆ ಸಂಬಂಧಿಸಿದಂತೆ ಮದ್ದೂರು ವನ್ಯ ವಲಯದ ಕಾಕನಕೋಟೆ ಬೆಟ್ಟ ಗಸ್ತಿನ ಹುಲಿ ಕಟ್ಟೆ ಕಳ್ಳಬೇಟೆ ಶಿಬಿರದಲ್ಲಿ ನಡೆಸಲಾದ ಮದ್ಯ ಪಾರ್ಟಿಗೆ ಸಂಬಂದಿಸಿದಂತೆ ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಸೆಕ್ಷನ್ 27(1), (4)ರಡಿ ಪ್ರಕರಣ ದಾಖಲಾಗಿದೆ. ನಿಷೇಧಿತ ಅಭಯಾರಣ್ಯದಲ್ಲಿ ಮದ್ಯ ಸೇವನೆ ಮಾಡಿ ಫೋಟೋ ಕ್ಲಿಕ್ಕಿಸಿದ್ದ ಪ್ರಕರಣ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು.

## ಪಿಂಚಣಿದಾರರ ಬೇಡಿಕೆ ಈಡೇರಿಸಿ



ಚಾಮರಾಜನಗರ, ಪಿಂಚಣಿದಾರರ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಅದಷ್ಟುಬೇಗ ಈಡೇರಿಸುತ್ತದೆ ಎಂದು ರಾಷ್ಟ್ರೀಯ ಸಂಘರ್ಷ ಸಮಿತಿಯ ಮೈಸೂರು ಪ್ರಾಂತೀಯ ಸಂಯೋಜಕ ಹುಚ್ಚಪ್ಪ ಹೇಳಿದರು.

ನಗರದ ದೊಡ್ಡರಸನ ಕೊಳದ ಗಣಪತಿ ದೇವಸ್ಥಾನದ ಮುಂಭಾಗದ ಆವರಣದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿ, ರಾಷ್ಟ್ರೀಯ ಸಂಘರ್ಷ ಸಮಿತಿ ಭಾರತ ಸರ್ಕಾರ ಈ ಒಂದು ಸಂಘ 2017ರಲ್ಲಿ ಸ್ಥಾಪನೆಯಾಗಿದ್ದು, ನಮಗೆ ಬರುವ ತಕ್ಕಂತಹ ಪಿಂಚಣಿ 600, 700, 1200, 2000, 3000 ವರೆಗೂ ಬರುತ್ತಿತ್ತು ಇದರಿಂದ ಜೀವನ ನಿರ್ವಹಣೆ ಕಷ್ಟ ಎಂದು ಹೇಳಿ ನಮ್ಮದೆ ಒಂದು ಭಾಗದ ಹಣವನ್ನು ಕೇಂದ್ರ ಸರ್ಕಾರದ ಪಿಎಫ್ ಸಮಿತಿಗೆ ಕಟ್ಟಿದ್ದೇವೆ. ಅದೊಂದು ಹಣದಲ್ಲಿ ನಮಗೆ ಬೇಕಾದಂತಹ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕಳೆದ 9 ವರ್ಷಗಳಿಂದ 7500 ಪಿಂಚಣಿ, ವೈದ್ಯಕೀಯ ವೆಚ್ಚ, ತುಟ್ಟಿಭತ್ಯೆ ಕೊಡಿಸಿ ಕೊಡಿ ಎಂದು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಅದೊಂದು ಹೋರಾಟ ಮುಕ್ತಾಯದ ಹಂತದಲ್ಲಿದ್ದು, ಕೇಂದ್ರ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಲಿದೆ ಯಾರು ಧೃತಿಗೇಡಬಾರದು ಎಂದರು.

ಸಮಿತಿ ರಾಜ್ಯ.ಅಧ್ಯಕ್ಷರ ಆದೇಶ ಮೇರೆಗೆ ಸಂಘದ ವತಿಯಿಂದ ವೈಯೋವೃದ್ಧರಿಗೆ ಉತ್ತೇಜನವಾಗಲಿ, ಅವರಿಗೆ ಒಂದು ಶಕ್ತಿ ಬರಲಿ ಎಂದು ವೃದ್ಧಾಶ್ರಮಗಳಿಗೆ ಅನ್ನದಾನ ಮಾಡುವುದು, ಅವರಿಗೆ ಸನ್ಮಾನ ಮಾಡುವುದು. ಅನಾಥ ಮಕ್ಕಳಿಗೆ ಬಟ್ಟೆ ವಿತರಣೆ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದರು.

### ಸನ್ಮಾನ

ಹಿರಿಯ ನಿವೃತ್ತರಾದ ಸದಾಶಿವಪ್ಪ, ನಂಜೇಗೌಡ, ಪಿ.ರಾಚಯ್ಯ, ಎಂ.ಮಹದೇವಪ್ಪ, ನಂಜುಂಡಸ್ವಾಮಿ, ರಾಜಣ್ಣ, ರಂಗಸ್ವಾಮಿ ನಾಯಕ, ನಂಜುಂಡಶೆಟ್ಟಿ, ಅವರನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ಚಾಮರಾಜನಗರ ಜಿಲ್ಲಾಧ್ಯಕ್ಷ ಮಹದೇವು,ಗೌರವಾಧ್ಯಕ್ಷ ಸುರೇಶ್ ಗೌಡ, ಪ್ರಧಾನಕಾರ್ಯದರ್ಶಿ ಸೋಮಣ್ಣ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಂಚಾಲಕ ಸೈಯದ್ ಮಹಮ್ಮದ್,ನಂಜುಂಡಸ್ವಾಮಿ, ಸಿದ್ದಪ್ಪಾಜಿ, ಪದಾಧಿಕಾರಿಗಳು ಸದಸ್ಯರು ಇತರರು ಭಾಗವಹಿಸಿದ್ದರು.

## ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹ

ಮೈಸೂರು: ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಮೈಸೂರು ಜಿಲ್ಲಾ ಸಮಿತಿಯು, ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಸಹಯೋಗದೊಂದಿಗೆ ಆಶಾ ಕಾರ್ಯಕರ್ತೆಯರ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಪಂ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿತು.




ಆಶಾ ಕಾರ್ಯಕರ್ತೆಯರಿಗೆ ಎರಡು ತಿಂಗಳು ಗೌರವಧನ ಬಾಕಿ ಇದೆ.ಅಲ್ಲದೆ, ಪ್ರತೀ ತಿಂಗಳು ವೇತನ ನಿಗದಿತವಾಗಿ ಬರುತ್ತಿಲ್ಲ. ಆಶಾ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಕೇಂದ್ರದ ಪ್ರೋತ್ಸಾಹಧನ ಬರುತ್ತಿಲ್ಲ. ಹಲವಾರು ವರ್ಷಗಳಿಂದ ಬಾಕಿ ಇರುವ ವಿವಿಧ ಕಾಂಪೋನೆಂಟ್ ಗಳ ಹಣ ಬಿಡುಗಡೆ ಆಗಿಲ್ಲ ಎಂದು ಕಿಡಿಕಾರಿದರು.

ಪ್ರೋತ್ಸಾಹ ಧನ, ಗೌರವಧನ ಬಿಡುಗಡೆಯಾಗದೆ ಕಾರ್ಯಕರ್ತಯರು ಸಂಕಷ್ಟದಲ್ಲಿದ್ದಾರೆ. ಸಮಸ್ಯೆಗಳನ್ನು ಬಗೆ ಹರಿಸುವುದಾಗಿ ಸರಕಾರ ಭರವಸೆ ನೀಡಿತ್ತುಫಿ.ಆದರೆ ,ಇದುವರೆಗೂ ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಸಲು ಮುಂದಾಗಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

**ಹಕ್ಕೊತ್ತಾಯಗಳು:** ಆಶಾ ಕಾರ್ಯಕರ್ತೆಯರಿಗೆ ಬಾಕಿ ಇರುವ 2 ತಿಂಗಳುಗಳ ಕೇಂದ್ರದ ಪ್ರೋತ್ಸಾಹ ಧನ. 2 ತಿಂಗಳ ಗೌರವಧನವನ್ನು ಕೂಡಲೇ ನೀಡಿರಿ. ಉಪ ನಿರ್ದೇಶಕರು 9 ವಿವಿಧ ಆಶಾ ಸೇವೆಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರಿಯಗೊಳಿಸುವುದಾಗಿ ಇದೆ. ಇದರಿಂದ ಪ್ರತೀ ಕಾರ್ಯಕರ್ತೆಗೆ 1000 ರೂ.,ದವರೆಗೆ ಪ್ರೋತ್ಸಾಹಧನ ಕಡಿತವಾಗಲಿದೆ. ಈ ಸೇವೆಗಳನ್ನು ಮುಂದುವರೆಸಲು ಸೂಕ್ತ ಕ್ರಮ ಕೈಗೊಳ್ಳಿ, ಆಶಾ ಕಾರ್ಯಕರ್ತೆಯರ ಮೂಲಕ ಸಮಸ್ತ ಆಪ್ ಆನ್‌ಲೈನ್ ದಾಖಲಾತಿ ಮಾಡಿಸುವುದನ್ನು ಕೈಬಿಡಿ. ರಾಜ್ಯಾದ್ಯಂತ ಕೇಂದ್ರದ ಪ್ರೋತ್ಸಾಹಧನ ಆಶಾ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಬರುತ್ತಿಲ್ಲ ಈ ಸಮಸ್ಯೆ ಬಗೆಹರಿಸಿ, ಆಶಾಗಳಿಗೆ ಕೂಡಲೇ ಬಾಕಿ ಇರುವ ಪ್ರೋತ್ಸಾಹಧನ ನೀಡಿ. ಹಲವಾರು ವರ್ಷಗಳಿಂದ ಬಾಕಿ ಇರುವ ವಿವಿಧ ಕಾಂಪೋನೆಂಟ್‌ಗಳ ಹಣ ಬಿಡುಗಡೆ ಆಗಿಲ್ಲ (ಟಿಬಿ, ಟಿಬಿಐ, ಎನ್ಸಿಡಿ ಇತ್ಯಾದಿ)ಹಲವಾರು ಆಶಾ ಕಾರ್ಯಕರ್ತೆಯರ ಗೌರವ ಧನ. ಪ್ರೋತ್ಸಾಹ ಧನ ಹಲವಾರು ತಿಂಗಳು ಕಡಿತ ಮಾಡಲಾಗಿದೆ. ಬಾಕಿ ಇರುವ ಕಾರ್ಯಕರ್ತೆಯರಿಗೆ ಹಣ ಬಿಡುಗಡೆ ಮಾಡಿ. ಪ್ರತಿಭಟನೆಯಲ್ಲಿ ಎಐಯುಟಿಯುಸಿ ಜಿಲ್ಲಾ ಗೌರವಾಧ್ಯಕ್ಷೆ ಪಿ.ಎಸ್.ಸಂಧ್ಯಾಫಿ, ಜಿಲ್ಲಾಧ್ಯಕ್ಷೆ ಭಾಗ್ಯ, ಸಲಹೆಗಾರರಾದ ಜಿ.ಎಸ್.ಸೀಮಾ, ಪ್ರೊಫಿ.ಎಚ್.ಎಂ.ಹೇಮಲತಾ, ಆಶಾ ಕಾರ್ಯಕರ್ತೆಯರಾದ ಹೇಮಾ, ಕೋಮಲ, ರೇಣುಕ, ಗಿರಿಜಮ್ಮ, ಕೋಮಲ, ಮಣಿಲಾ, ಇದ್ದರು.

## ಚಾಮರಾಜೇಶ್ವರಸ್ವಾಮಿಗೆ ವಿಶೇಷಪೂಜೆ, ಅನ್ನಸಂತರ್ಪಣೆ



ಚಾಮರಾಜನಗರ, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರಾದ ಟಿ.ಎ.ನಾರಾಯಣಗೌಡ ಅವರು 60ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಘಟಕದ ವತಿಯಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷಪೂಜೆ ಸಲ್ಲಿಸಲಾಯಿತು.ನಂತರ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಅನ್ನಸಂತರ್ಪಣೆ ನಡೆಯಿತು.

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಹೆಚ್.ಎನ್.ಮಂಜೇಶ್ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ಟಿ.ಎ.ನಾರಾಯಣಗೌಡರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ವೇದಿಕೆ ಜಿಲ್ಲಾಧ್ಯಕ್ಷ ಹೆಚ್.ಎನ್. ಮಂಜೇಶ್ ಮಾತನಾಡಿ, ನಮ್ಮ ನೆಚ್ಚಿನ ನಾಯಕರಾದ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರಾದ ಟಿ.ಎ.ನಾರಾಯಣಗೌಡರ 60ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ಅರ್ಚನೆ ಮಾಡಿ ವಿಶೇಷಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅವರು ನಾಡು, ನುಡಿ, ಜಲಕ್ಕಾಗಿ ಕಳೆದ 27 ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಭಗವಂತ ಹೆಚ್ಚಿನ ಆರೋಗ್ಯ, ಆಯಸು ಕರುಣಿಸಿ ಅವರ ಹೋರಾಟಕ್ಕೆ ಹೆಚ್ಚಿನ ಶಕ್ತಿ ತುಂಬಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೂಪೇಶ್, ಸಹ ಕಾರ್ಯದರ್ಶಿ ಅರ್ಜುನ್. ಸಂಘಟನಾ ಕಾರ್ಯದರ್ಶಿ ಹೇಮಂತ್, ಉಪಾಧ್ಯಕ್ಷ ರಾಜೇಂದ್ರನಾಯಕ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ರಮೇಶ್‌ನಾಯಕ, ಚಾಮರಾಜನಗರ ತಾಲೂಕು ಅಧ್ಯಕ್ಷ ಸಂತೋಷ್, ಉಪಾಧ್ಯಕ್ಷ ಸುಂದರ್, ಮಹಿಳಾ ಜಿಲ್ಲಾಧ್ಯಕ್ಷೆ ಭಾಗ್ಯಲಕ್ಷ್ಮಿ, ತಾಲೂಕು ಅಧ್ಯಕ್ಷ ಸುಮಾ, ಕೊಳ್ಳೇಗಾಲ ತಾಲೂಕು ಮೆಹಬೂಬುಪಾಷ, ಯಳಂದೂರು ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಇಸ್ಮಾಯಿಲ್,

# ಅಧಿಕಾರಿಗಳ ಗೈರಿಗೆ ಆಕ್ರೋಶ

## ಎಸ್‌ಸಿ/ಎಸ್‌ಟಿ ಹಿತರಕ್ಷಣಾ ಸಮಿತಿ ಸಭೆ ಬಹಿಷ್ಕರಿಸಿದ ದಲಿತ ಮುಖಂಡರು

ಗುಂಡ್ಲುಪೇಟೆ: ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ/ಎಸ್‌ಟಿ) ಹಿತರಕ್ಷಣಾ ಸಮಿತಿ ಸಭೆಗೆ ಪ್ರಮುಖ ಇಲಾಖೆಗಳ ಅಧಿಕಾರಿಗಳು ಗೈರಾದ ಹಿನ್ನೆಲೆಯಲ್ಲಿ ತೀವ್ರ ಆಕ್ರೋಶಗೊಂಡ ದಲಿತ ಮುಖಂಡರು ಸಭೆಯನ್ನು ಅರ್ಧಕ್ಕೇ ಬಹಿಷ್ಕರಿಸಿ ಹೊರನಡೆದ ಘಟನೆ ಪಟ್ಟಣದಲ್ಲಿ ನಡೆದಿದೆ.

### ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸಭೆ ಬಹಿಷ್ಕಾರ

ಪಟ್ಟಣದ ತಾಲೂಕು ಕಚೇರಿಯ ಸಭಾಭವನದಲ್ಲಿ ತಹಸೀಲ್ದಾರ್ ಎಂ.ಎಸ್. ತನ್ಮಯ್ ಅವರ ಅಧ್ಯಕ್ಷತೆಯಲ್ಲಿ ಎಸ್‌ಸಿ/ಎಸ್‌ಟಿ ಹಿತರಕ್ಷಣಾ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಆದರೆ, ಈ ಪ್ರಮುಖ ಸಭೆಗೆ ಪೊಲೀಸ್ ಇಲಾಖೆ, ಅರಣ್ಯ ಇಲಾಖೆ ಹಾಗೂ ಕೆಎಸ್‌ಆರ್‌ಟಿಸಿ ಇಲಾಖೆಯ ಉನ್ನತ ಅಧಿಕಾರಿಗಳು ನಿಗದಿತ ಸಮಯಕ್ಕೆ ಹಾಜರಾಗದೆ ಗೈರಾಗಿದ್ದರು. ಇದರ ಜೊತೆಗೆ, ಇನ್ನು ಕೆಲವು ಇಲಾಖೆಗಳಿಂದ ಕೇವಲ ಕೆಳಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಾತ್ರ ಪಾಲ್ಗೊಂಡಿದ್ದರು. ಜವಾಬ್ದಾರಿಯುತ ಅಧಿಕಾರಿಗಳ ಈ ನಿರ್ಲಕ್ಷ್ಯದ ನಡೆಯಿಂದ ತೀವ್ರ ಅಸಮಾಧಾನಗೊಂಡ ದಲಿತ ಮುಖಂಡರು, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾ ಸಭೆಯನ್ನು ಬಹಿಷ್ಕರಿಸಿದರು.

### ಆಡಳಿತ ಯಂತ್ರದ ವಿರುದ್ಧ ಮುಖಂಡರ ಅಸಮಾಧಾನ

ನಿಯಮಾನುಸಾರ ಮೂರು ತಿಂಗಳಿಗೊಮ್ಮೆ ನಡೆಯಬೇಕಿರುವ ಎಸ್‌ಸಿ/ಎಸ್‌ಟಿ ಹಿತರಕ್ಷಣಾ ಸಭೆಯನ್ನು ತಾಲೂಕು ಆಡಳಿತವು ಆರು ತಿಂಗಳಿಗೊಮ್ಮೆ ಆಯೋಜಿಸುತ್ತಿರುವುದು ಖಂಡನೀಯ ಎಂದು ಮುಖಂಡರು ಕಿಡಿಕಾರಿದರು. ಇದು ತಹಸೀಲ್ದಾರ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ದಲಿತ ವಿರೋಧಿ ಧೋರಣೆಯನ್ನು ಎತ್ತಿತೋರಿಸುತ್ತದೆ. ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಅನುಪಾಲನಾ ವರದಿಯನ್ನೂ ಸರಿಯಾಗಿ ಮಂಡಿಸಿಲ್ಲ ಹಾಗೂ ಕಳೆದ ಬಾರಿ ಗೈರಾದ ಅಧಿಕಾರಿಗಳ ವಿರುದ್ಧ ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ. ಹೀಗಿದ್ದರೂ ಕೇವಲ ಕಾಟಾಚಾರಕ್ಕಾಗಿ ತಾಲೂಕು ಆಡಳಿತ ಈ ಸಭೆ ನಡೆಸುತ್ತಿದೆ ಎಂದು ಅವರು ಬೇಸರ ಹೊರಹಾಕಿದರು.



### ಕಠಿಣ ಕ್ರಮಕ್ಕೆ ಆಗ್ರಹಿಸಿದ ವಕೀಲರು

ಸಭೆಯಲ್ಲಿ ಉಪಸ್ಥಿತರಿದ್ದ ವಕೀಲ ಕಾಂತರಾಜ್ ಅವರು ಮಾತನಾಡಿ, ಎಸ್‌ಸಿ/ಎಸ್‌ಟಿ ಸಭೆಯನ್ನು ಕಡೆಗಣಿಸಿ ಗೈರಾದ ಅಧಿಕಾರಿಗಳ ವಿರುದ್ಧ ಸರ್ಕಾರ ತಕ್ಷಣವೇ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು. ಆ ಮೂಲಕ ದಲಿತ ವಿರೋಧಿ ನೀತಿ ಅನುಸರಿಸುತ್ತಿರುವ ಅಧಿಕಾರಿಗಳಿಗೆ ಸ್ಪಷ್ಟ ಎಚ್ಚರಿಕೆ ರವಾನಿಸಬೇಕು ಎಂದು ಒತ್ತಾಯಿಸಿದರು. ಮತ್ತೊಬ್ಬ ವಕೀಲ ಬಂಗಾರ ನಾಯಕ ಮಾತನಾಡಿ, ತಾಲೂಕು ಮಟ್ಟದ ಸಭೆಗೆ ಹಾಜರಾಗದ ಅಧಿಕಾರಿಗಳ ಬೇಜವಾಬ್ದಾರಿತನದ ಬಗ್ಗೆ ತಹಸೀಲ್ದಾರ್ ಅವರು ಕಠಿಣ ಕ್ರಮ ವಹಿಸಬೇಕು. ಈ ನಿರ್ಲಕ್ಷ್ಯವನ್ನು ದಲಿತ ಮುಖಂಡರು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯುವ ಜಿಲ್ಲಾಮಟ್ಟದ ಸಭೆಯಲ್ಲಿ ಪ್ರಸ್ತಾಪಿಸಿದಾಗ ಮಾತ್ರ ದಲಿತರ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ದೊರೆಯಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

### ಗೈರಾದವರಿಗೆ ನೋಟಿಸ್: ತಹಸೀಲ್ದಾರ್ ಭರವಸೆ

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ತಹಸೀಲ್ದಾರ್ ಎಂ.ಎಸ್. ತನ್ಮಯ್ ಅವರು, ಮುಖಂಡರ ಅಸಮಾಧಾನವನ್ನು ಆಲಿಸಿದ ಬಳಿಕ, ಸಭೆಗೆ ಗೈರಾದ ಎಲ್ಲಾ ಅಧಿಕಾರಿಗಳಿಗೂ ತಕ್ಷಣವೇ ನೋಟಿಸ್ ಜಾರಿ ಮಾಡಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೆ, ಮುಂಬರುವ ಸಭೆಗಳಿಗೆ ಎಲ್ಲಾ ಇಲಾಖೆಗಳ ಮುಖ್ಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು ಎಂದು

### ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ಮುಖಂಡರು

ಈ ಸಭೆಯಲ್ಲಿ ತಾಲೂಕು ಪಂಚಾಯಿತಿ ಇಒ ಷಣ್ಮುಗಂ, ಪುರಸಭಾ ಮುಖ್ಯಾಧಿಕಾರಿ ಶರವಣ, ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ, ತಾಲೂಕು ವೈದ್ಯಾಧಿಕಾರಿ ಡಾ. ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೋಹನ್ ಕುಮಾರ್, ಕೃಷಿ ಇಲಾಖೆ ಅಧಿಕಾರಿ ಶಶಿಧರ್, ಲೀಡ್ ಬ್ಯಾಂಕ್ ಮ್ಯಾನೇಜರ್ ಸುರೇಖಾ ಹಾಗೂ ಎಪಿಎಂಸಿ ಕಾರ್ಯದರ್ಶಿ ಶ್ರೀಧರ್ ಉಪಸ್ಥಿತರಿದ್ದರು. ದಲಿತ ಮುಖಂಡರು ಹಾಗೂ ಪ್ರಮುಖರಾದ ಆರ್. ಸೋಮಣ್ಣ, ಮುತ್ತಣ್ಣ, ಎನ್. ಕುಮಾರ್, ಗೋವಿಂದ ನಾಯಕ, ಪುರಸಭೆ ಮಾಜಿ ಉಪಾಧ್ಯಕ್ಷ ಶ್ರೀನಿವಾಸ್ ಕಣ್ಣಪ್ಪ, ಸುರೇಶ ನಾಯಕ, ಶ್ರೀನಿವಾಸ್ ನಾಯಕ, ಹಸಗೂಲಿ ಸಿದ್ದಯ್ಯ, ಆರ್.ಡಿ. ಉಲ್ಲಾಸ್, ಸುಭಾಷ್ ಮಾಡ್ರಹಳ್ಳಿ, ರಂಗಸ್ವಾಮಿ, ರತ್ನಮ್ಮ, ಬೇರಂಬಾಡಿ ರಂಗಪ್ಪ ನಾಯಕ, ಪುಟ್ಟಮ್ಮ, ಕಿಲಗೆರೆ ಬಸವಣ್ಣ, ಶಂಕರ್ ಗುಂಡ್ಲುಪೇಟೆ, ವಕೀಲರಾದ ರಾಜೇಶ್ ಹಂಗಳ, ನಾಗಮಲ್ಲು, ರಾಜ್ ಗೋಪಾಲ, ಚಿಕ್ಕಣ್ಣ, ಮೋಹನ್ ಗುಂಡ್ಲುಪೇಟೆ ಹಾಗೂ ಬೇರಂಬಾಡಿ ಮಲ್ಲಿಕಾರ್ಜುನ ಸೇರಿದಂತೆ ಹಲವರು ಹಾಜರಿದ್ದರು.

### ಜಿಲ್ಲಾಧಿಕಾರಿ ಶ್ರೀರೂಪ ಪ್ರಶಂಸೆ

# ವಿಶೇಷಚೇತನರಿಗೆ ಹೊಸ ಚೈತನ್ಯ ನೀಡಿದ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರ

ಚಾಮರಾಜನಗರ: ರೋಟರಿ ಸಂಸ್ಥೆ ಹಾಗೂ ಬೆಂಗಳೂರಿನ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸಹಯೋಗದಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರವು ವಿಶೇಷಚೇತನರಲ್ಲಿ ಹೊಸ ಚೈತನ್ಯ ಮೂಡಿಸುತ್ತದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ಶ್ಲಾಘಿಸಿದರು. ಶಿಬಿರವನ್ನು ಅಧಿಕೃತವಾಗಿ ಉದ್ಘಾಟಿಸಿ, ವಿಶೇಷಚೇತನರಿಗೆ ಕೃತಕ ಕೈ-ಕಾಲುಗಳನ್ನು ಜೋಡಿಸುವ ಮೂಲಕ ಅವರು ಚಾಲನೆ ನೀಡಿದರು.

### ಸಮಾಜದ ದುರ್ಬಲ ವರ್ಗದವರಿಗೆ ನೆರವು ನೀಡುವುದೇ ನಿಜವಾದ ಅಭಿವೃದ್ಧಿ

ಕಾರ್ಯಕ್ರಮದಲ್ಲಿ ನೆರೆದಿದ್ದವರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಇಂತಹ ಮಾನವೀಯ ಕಾರ್ಯಕ್ರಮದ ಭಾಗವಾಗಿರುವುದು ನನಗೆ ಅತ್ಯಂತ ಸಂತೋಷ ತಂದಿದೆ ಎಂದರು. ಒಂದು ದೇಶ ಪ್ರಗತಿ ಹೊಂದಬೇಕಾದರೆ ಕೇವಲ ಉತ್ತಮ ರಸ್ತೆ ಅಥವಾ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿದರೆ



ಸಾಲದು, ಸಮಾಜದಲ್ಲಿರುವ ದುರ್ಬಲ ಹಾಗೂ ಅಗತ್ಯವಿರುವ ವರ್ಗದ ಜನರಿಗೆ ನಾವು ಯಾವ ರೀತಿ ಸಹಾಯ ಹಸ್ತ ಚಾಚುತ್ತೇವೆ ಎಂಬುದು ಮುಖ್ಯವಾಗುತ್ತದೆ. ದುರ್ಬಲ ವರ್ಗದವರನ್ನು ಗುರುತಿಸಿ ಅವರಿಗೆ ಉಚಿತವಾಗಿ ಕೃತಕ ಕೈ-ಕಾಲುಗಳನ್ನು ಜೋಡಿಸುತ್ತಿರುವ ರೋಟರಿ ಮತ್ತು ಎಂಎಸ್‌ಐಎಲ್ ಸಂಸ್ಥೆಗಳ ಸೇವಾ ಕಾರ್ಯ ನಿಜಕ್ಕೂ ಅವಿಸ್ಮರಣೀಯವಾದದ್ದು. ಈ ಕೃತಕ ಅಂಗಾಂಗ ಜೋಡಣೆಯಿಂದ ವಿಶೇಷಚೇತನರಲ್ಲಿ ಆತ್ಮವಿಶ್ವಾಸ ಹೆಚ್ಚಲಿದ್ದು, ಅವರು ತಮ್ಮ ಸ್ವಂತ ಕಾಲಿನ ಮೇಲೆ ನಿಂತು ಕೆಲಸ ಮಾಡುವ ಮೂಲಕ ಹೊಸ ಭವಿಷ್ಯ ಹಾಗೂ ಹೊಸ ಜೀವನ ಕಂಡುಕೊಳ್ಳಬಹುದು. ಇಂತಹ ಉದಾತ್ತ ಕಾರ್ಯಕ್ರಮಗಳಿಗೆ ಜಿಲ್ಲಾಡಳಿತದ ವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

### ನಿರೀಕ್ಷೆ ಮೀರಿದ ಫಲಾನುಭವಿಗಳ ಸಂಖ್ಯೆ ಹಾಗೂ ಶಾಸಕರ ಸಹಕಾರ

ರೋಟರಿ ಸಂಸ್ಥೆಯ ಮಾಜಿ ಜಿಲ್ಲಾ ಗೌರ್ನರ್ ಡಾ. ನಾಗಾರ್ಜುನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಈ ಉಚಿತ ಕೃತಕ ಕೈ-ಕಾಲು ಶಿಬಿರಕ್ಕೆ ಆರಂಭದಲ್ಲಿ ಕೇವಲ 30 ಮಂದಿ ಬರಬಹುದು ಎಂದು ಅಂದಾಜಿಸಲಾಗಿತ್ತು. ಆದರೆ, ನಮ್ಮ ನಿರೀಕ್ಷೆಯನ್ನು ಮೀರಿ ಒಟ್ಟು 115 ಜನ ಫಲಾನುಭವಿಗಳು ಶಿಬಿರದ ಸೌಲಭ್ಯ ಪಡೆದುಕೊಂಡಿದ್ದಾರೆ. ಈ ಕಾರ್ಯಕ್ರಮವನ್ನು ರೂಪಿಸುವಾಗ ಕೇವಲ 3 ಲಕ್ಷ ರೂಪಾಯಿ ವೆಚ್ಚವಾಗಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಫಲಾನುಭವಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾದ ಕಾರಣ ಒಟ್ಟು ವೆಚ್ಚ 13 ಲಕ್ಷ ರೂಪಾಯಿಗಳಿಗೆ ತಲುಪಿತು. ಈ ಸಂದರ್ಭದಲ್ಲಿ ನಮ್ಮ ಮನವಿಗೆ ತಕ್ಷಣ ಸ್ಪಂದಿಸಿದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಎಂಎಸ್‌ಐಎಲ್ ಸಂಸ್ಥೆಯ ವತಿಯಿಂದ 8 ಲಕ್ಷ ರೂ.ಗಳ ವಿಶೇಷ ಆರ್ಥಿಕ ನೆರವು ಕೊಡಿಸುವ ಮೂಲಕ ಶಿಬಿರವು ಯಶಸ್ವಿಯಾಗಿ ನಡೆಯಲು ಪ್ರಮುಖ ಕಾರಣರಾದರು ಎಂದು ಕೃತಜ್ಞತೆ ಸಲ್ಲಿಸಿದರು.

### ಭವಿಷ್ಯದ ಯೋಜನೆಗಳು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೋಟರಿ ಸಂಸ್ಥೆಯ ಜಿಲ್ಲಾ ಗೌರ್ನರ್ ಪಿ.ಕೆ. ರಾಮಕೃಷ್ಣ ಮತ್ತು ನಾಮಿನಿ ಜಿಲ್ಲಾ ಗೌರ್ನರ್ ಯಶಸ್ವಿ ಸೋಮಶೇಖರ್ ಮಾತನಾಡಿ, ರೋಟರಿ ಸಂಸ್ಥೆಯು ಕಳೆದ 120 ವರ್ಷಗಳಿಂದ ಜಾಗತಿಕವಾಗಿ ಅತ್ಯುತ್ತಮ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಗಡಿ ಜಿಲ್ಲೆಯಾದ ಚಾಮರಾಜನಗರದಲ್ಲಿ ಕೃತಕ ಕೈ-ಕಾಲು ಜೋಡಣೆ ಯೊಂದಿಗೆ ರಕ್ತದಾನ, ಉಚಿತ ಕಣ್ಣಿನ ತಪಾಸಣೆ ಹಾಗೂ ಕಡಿಮೆ ವೆಚ್ಚದಲ್ಲಿ ಡಯಾಲಿಸಸ್ ಸೇವೆಗಳನ್ನು ನೀಡಲಾಗುತ್ತಿದೆ ಎಂದರು. ಇದೇ ವೇಳೆ, ಚಾಮರಾಜನಗರ ಜಿಲ್ಲೆಯ ರೋಗಿಗಳು ಕಣ್ಣಿನ ಶಸ್ತ್ರಚಿಕಿತ್ಸೆಗಾಗಿ ದೂರದ ಕೊಯಮತ್ತೂರಿಗೆ ಹೋಗುವುದನ್ನು ತಪ್ಪಿಸಲು ಜಿಲ್ಲಾ ಕೇಂದ್ರದಲ್ಲಿಯೇ ಸುಸಜ್ಜಿತ ಕಣ್ಣಿನ ಆಸ್ಪತ್ರೆಯನ್ನು ತೆರೆಯಲು ರೋಟರಿ ಸಂಸ್ಥೆ ಚಿಂತನೆ ನಡೆಸಿದ್ದು, ಇದಕ್ಕಾಗಿ ಸೂಕ್ತ ಜಾಗವನ್ನು ಒದಗಿಸಿಕೊಡಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಲಾಯಿತು. ಅಲ್ಲದೆ, ಮುಂದಿನ ವರ್ಷ ಡಯಾಲಿಸಸ್ ಉಂಟಾಗುವ ಕಾರಣಗಳ ಬಗ್ಗೆ ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸಲು ಬೃಹತ್ ಕಾರ್ಯಕ್ರಮ ರೂಪಿಸಲಾಗುವುದು ಎಂದು ತಿಳಿಸಲಾಯಿತು. ಇದೇ ಸಂದರ್ಭದಲ್ಲಿ ರೋಟರಿ ಸದಸ್ಯ ರಾಮು ಅವರು ಸಂಸ್ಥೆಯ ಸೇವಾ ಕಾರ್ಯಗಳಿಗಾಗಿ 10ಖಿಚಿಡಿರಜಣ ಸಾಲಿನಲ್ಲಿ 1000 ಡಾಲರ್ ದೇಣಿಗೆಯನ್ನು ಕೊಡುಗೆಯಾಗಿ ನೀಡಿದರು.

## ಸಂಕ್ಷಿಪ್ತ ಸುದ್ದಿ

### ಜಿಲ್ಲಾ ಲೇಖಕಿಯರ ಸಮ್ಮೇಳನ




**ಮಂಡ್ಯ:** ಕರ್ನಾಟಕ ಲೇಖಕಿಯರ ಸಂಘದ ರಾಜ್ಯ ಹಾಗೂ ಮಂಡ್ಯ ಜಿಲ್ಲಾ ಘಟಕದ ಸಹಭಾಗಿತ್ವದಲ್ಲಿ ಜಿಲ್ಲಾ ಲೇಖಕಿಯರ ಸಮ್ಮೇಳನವನ್ನು ಜೂ.27, 28ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷೆ ಡಾ.ಆರ್.ಸುನಂದಮ್ಮ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದ ಅಧ್ಯಕ್ಷರಾಗಿ ಭಾರತೀಯ ಪ್ರಸಾರ ಕೇಂದ್ರಗಳಾದ ದೂರದರ್ಶನ, ಆಕಾಶವಾಣಿಯಲ್ಲಿ ಸಿದ್ದಿ ಸಂಪಾದಕಿ ಹಾಗೂ ಸುದ್ದಿ ಮುಖ್ಯಸ್ಥರಾಗಿ, ರಾಜ್ಯದ 3 ಮುಖ್ಯಮಂತ್ರಿಗಳಿಗೆ ವಿಶೇಷ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಡಾ.ಟಿ.ಸಿ.ಪೂರ್ಣಿಮಾ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಜೂ.27ರಂದು ನಗರದ ರೈತ ಸಭಾಂಗಣದಿಂದ ಅಂಬೇಡ್ಕರ್ ಭವನದವರೆಗೆ ವಿವಿಧ ಕಲಾತಂಡಗಳ ಜತೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಮಾಡಲಾಗುವುದು. ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಉದ್ಘಾಟಿಸುವರು, ಜಿ.ಪಂ ಸಿಇಓ ಕೆ.ಆರ್.ನಂದಿನಿ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು, ಸ್ಮರಣ ಸಂಚಿಕೆ ಕುರಿತು ಸಂಪಾದಕಿ ಡಾ.ಸಬಿಹಾ ಭೂಮಿಗೌಡ ಮಾತನಾಡುವರು, ಸಂಘದ ಜಿಲ್ಲಾಧ್ಯಕ್ಷೆ ಡಾ.ಮೀರಾಶಿವಲಿಂಗಯ್ಯ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

ಸಮಾಜದಲ್ಲಿ ಮಹಿಳೆಯರ ಪಾತ್ರ ಹಾಗೂ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಗೋಷ್ಠಿಗಳು ನಡೆಯಲಿದ್ದು, ಜೂ.27ರಂದು ಕಾವ್ಯ ಸಮಯ, ಮಹಿಳಾ ಆತ್ಮಕತೆಗಳು ಕುರಿತು ಹಾಗೂ ಜೂ.28ರಂದು ಸಮಕಾಲಿನ ತಲ್ಲಣಗಳು, 21ನೇ ಶತಮಾನದ ಮಹಿಳಾ ಸಾಹಿತ್ಯ ವಿಷಯದಡಿ ನಡೆಯುವ ಗೋಷ್ಠಿಗಳಲಿ ನಾಡಿನ ಹೆಸರಾಂತ ಲೇಖಕಿಯರು ವಿಷಯ ಮಂಡನೆ ಮಾಡುವರು. ಹಿರಿಯ ಸಾಹಿತಿ ಡಾ.ಲತಾ ರಾಜಶೇಖರ್ ಸಮಾರೋಪ ಭಾಷಣ ಮಾಡುವರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಸನ್ಮಾನಿಸಿ ಗೌರಿಸಲಾಗುವುದು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯೆ ಡಾ.ಅನುಸೂಯ ಹೊಂಬಾಳೆ, ಜಿಲ್ಲಾಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಖಜಾಂಚಿ ಡಾ.ಸುಮಾರಾಣಿ ಶಂಭು, ಕಾರ್ಯದರ್ಶಿ ಡಾ.ಎಂ.ಕೆಂಪಮ್ಮ, ನಿರ್ದೇಶಕಿ ಡಾ.ಎಸ್.ಸಿ.ಮಂಗಳಾ ಇದ್ದರು.

### 16ರಂದು ನೇರ ಸಂದರ್ಶನ

ರಾಮನಗರ, ಜೂ.10 (ಕರ್ನಾಟಕ ವಾರ್ತೆ): ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಇದೇ ಜೂ.16ರ ಮಂಗಳವಾರ ಹಮ್ಮಿಕೊಳ್ಳಲಾಗಿರುವ ಉಚಿತ ನೇರ ಸಂದರ್ಶನ ಕಾರ್ಯಕ್ರಮದಲ್ಲಿ ಆಶೀರ್ವಾದ್ ಮೈಕ್ರೋ ಫೈನಾನ್ಸ್ ಖಾಸಗಿ ಸಂಸ್ಥೆಯವರು ಭಾಗವಹಿಸುತ್ತಿದ್ದಾರೆ. ಅವರು ಉದ್ಯೋಗಾಂಕ್ಷಿಗಳನ್ನು ನೇಮಕ ಮಾಡಿಕೊಳ್ಳಲಿರುವುದರಿಂದ ಖಾಸಗಿ ವಲಯದಲ್ಲಿನ ಉದ್ಯೋಗಕ್ಕೆ ಆಸಕ್ತರಿರುವ ಎಸ್.ಎಸ್.ಎಲ್.ಸಿ, ಪಿಯುಸಿ ಹಾಗೂ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ/ರೆಸ್ಯೂಮ್ (ಬಯೋಡೇಟಾ) ಹಾಗೂ ಇತ್ಯಾದಿ ದಾಖಲೆಗಳೊಂದಿಗೆ ಜೂ.16ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಕೊಠಡಿ ಸಂಖ್ಯೆ: 208, ಮೊದಲನೇ ಮಹಡಿ, ಕಂದಾಯ ಭವನ, ಬಿ.ಎಂ. ರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ. ಇಲ್ಲಿ ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ 7624975604 ಅನ್ನು ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿ-ಗುರು ಬಾಂಧವ್ಯಕ್ಕೆ ಹೊಸ ಮೆರುಗು

## ಗುರು ವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಯಶಸ್ವಿ

**ಕೆ .ಆರ್ .ನಗರ :** ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ನಡುವೆ ಇರುವ ಪ್ರೀತಿ ವಿಶ್ವಾಸವನ್ನು ಉಸಿರಿರುವರೆಗೂ ಗಟ್ಟಿ ಸೇತುವೆಯಾಗಿ ಮಾಡುತ್ತದೆ ಗುರು ವಂದನ ಕಾರ್ಯಕ್ರಮ ಎಂದು ನಿವೃತ್ತ ಮುಖ್ಯ ಶಿಕ್ಷಕ ಮಾಯಿಗೇಗೌಡ ತಿಳಿಸಿದರು 1996 – 97ನೇ ಸಾಲಿನಲ್ಲಿ ಎಸ್ಎಸ್ಎಲ್ಸಿ ಓದುತ್ತಿದ್ದ ವಿದ್ಯಾರ್ಥಿಗಳು ಆಯೋಜಿಸಿದ ಗುರುವಂದನ ಮತ್ತು ಸ್ನೇಹ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಯಾವುದೇ ಒಬ್ಬ ವ್ಯಕ್ತಿ ಸಮಾನತೆಯಿಂದ ಬದುಕಬೇಕೆಂದರೆ ಅದಕ್ಕೆ ಬೇಕಾಗಿರುವುದು ಶಿಕ್ಷಣ ಇದನ್ನ ಕೊಡುವ ಮೂಲಕ ಒಬ್ಬ ವ್ಯಕ್ತಿಯನ್ನು ದೇಶದ ಶಕ್ತಿಯಾಗಿ ಮಾಡುವ ಶಕ್ತಿ ಇರುವುದು ಒಬ್ಬ ಶಿಕ್ಷಕನಿಗೆ ಮಾತ್ರ ಹಾಗಾಗಿ ಒಬ್ಬ ವಿದ್ಯಾರ್ಥಿಗೆ ಮಾತಿನ ಮೂಲಕ ಅಥವಾ ಪ್ರೀತಿಯ ಮೂಲಕ ಗದ್ದರಿಸುವ ಮೂಲಕ ಅಥವಾ ಪ್ರೀತಿಯಿಂದ ಒಂದೇರಡು ಏಟು ಹೊಡೆಯುವ ಮೂಲಕ ಆ ವಿದ್ಯಾರ್ಥಿಯ ಜೀವನವನ್ನು ಕಟ್ಟುವವರು ಶಿಕ್ಷಕರು. ಅದನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳದೆ ಪ್ರೋತ್ಸಾಹ ನೀಡುವ ಕೆಲಸವನ್ನು ಪೋಷಕರು ಮಾಡಿದರೆ ಆ ವಿದ್ಯಾರ್ಥಿ ಮುಂದಿನ ಜೀವನದಲ್ಲಿ ದೊಡ್ಡ ಸಾಧನೆ ಮಾಡುತ್ತಾನೆ ಅದಕ್ಕೆ ನೀವುಗಳೇ ಉದಾಹರಣೆಯಾಗಿದ್ದೀರಿ ಎಂದರು.

ನಮ್ಮ ಅವಧಿಯಲ್ಲಿ ನಾವು ಬೋಧನೆ ಮಾಡಿದ ಅಷ್ಟು ವಿದ್ಯಾರ್ಥಿಗಳಲ್ಲಿ ಎಷ್ಟೋ ವಿದ್ಯಾರ್ಥಿಗಳು ಸರ್ಕಾರಿ ನೌಕರಿ ಪಡೆದರೆ ಎಷ್ಟೋ ವಿದ್ಯಾರ್ಥಿಗಳು ಉದ್ಯಮಿಗಳಾಗಿದ್ದಾರೆ. ಇನ್ನಷ್ಟು ವಿದ್ಯಾರ್ಥಿಗಳು ವಿವಿಧ ರೀತಿಯಲ್ಲಿ ಅಚ್ಚುಕಟ್ಟಾದ ತಮ್ಮ ಬದುಕನ್ನ ಕಟ್ಟಿಕೊಂಡಿದ್ದೀರೀ ಅವರುಗಳೆಲ್ಲರೂ ಸೇರಿ ನಮ್ಮ ಗುರುಗಳ ಋಣ ತೀರಿಸಬೇಕು ಎಂದು ಈ ಒಂದು ಗುರುವಂದನ ಕಾರ್ಯಕ್ರಮವನ್ನು ಮಾಡುತ್ತಿರುವುದು ನಮ್ಮ ಜೀವನದಲ್ಲಿ ಮರೆಯಲಾಗದ ಸಂದರ್ಭ ಇದಾಗಿದೆ. ಆದರೆ ಇದಕ್ಕಿಂತ ಬಹು ಮುಖ್ಯವಾಗಿ ಕಷ್ಟದಿಂದ ಬಡತನದಿಂದ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀವುಗಳು ಸ್ಪೂರ್ತಿಯಾಗಿ ಅವರ ಬೆಂಬಲಕ್ಕೆ ನಿಂತು ಅವರನ್ನು ನಿಮ್ಮಂತೆ ಮಾಡಿದರೆ ನಮಗೆ ಸಾರ್ಥಕವಾದಂತಾಗುತ್ತದೆ ಎಂದರು.

ನಿವೃತ್ತ. ಡ್ರಾಯಿಂಗ್ ಶಿಕ್ಷಕ ಸಿ ಆರ್ ಪೂಜಾರ್ ಮಾತನಾಡಿ ನಮ್ಮ ಜೀವನದಲ್ಲಿ ಬದುಕು ಕಟ್ಟಿಕೊಳ್ಳಲು ಶಿಕ್ಷಣ ಬಹು ಮುಖ್ಯವಾದ ಪಾತ್ರ ಅದನ್ನ ಪ್ರತಿಯೊಬ್ಬರೂ ಪಡೆದುಕೊಳ್ಳಲೇಬೇಕು. ಅದೇ ರೀತಿ ಶಿಕ್ಷಣ ಕೊಟ್ಟಂತಹ ಗುರುಗಳು ಮತ್ತು ಆಶ್ರಯ ನೀಡಿದಂತಹ ಶಾಲೆ ಕಷ್ಟಪಟ್ಟು ಬೆಂಬಲಕ್ಕೆ ನಿಂತ ತಂದೆ ತಾಯಿಗಳನ್ನು ಮರೆಯಬಾರದು ಎಂದು ಒಂದಷ್ಟು ಋಣ ತೀರಿಸುವ ಕೆಲಸ ಮಾಡಲೇಬೇಕು ಎಂದು ಈ ಕಾರ್ಯಕ್ರಮ ಆಯೋಜನೆ ಮಾಡಿರುವುದು ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿದೆ ಎಂದರು.

ಭೇರ್ಯ ಗ್ರಾಮದಲ್ಲಿ ಇರುವ ಸರ್ಕಾರಿ ಪ್ರೌಢಶಾಲೆಯಲ್ಲಿ ನಾನು ವಿದ್ಯಾಭ್ಯಾಸ ಕೊಟ್ಟಿರುವ ನನ್ನ ಎಲ್ಲಾ ಮೆಚ್ಚಿನ ವಿದ್ಯಾರ್ಥಿಗಳು 29 ವರ್ಷದ ಬಳಿಕ ನಮ್ಮೆಲ್ಲರನ್ನು ಮತ್ತೊಮ್ಮೆ ಹತ್ತಿರದಿಂದ ನೋಡಬೇಕು ಎಂದು ಪ್ರೀತಿಯನ್ನು ಹಂಬಲಿಸಿರುವ ನಿಮ್ಮ ಒಳ್ಳೆಯ ಮನಸ್ಸಿಗೆ ನಾವು ಯಾವತ್ತೂ ಕೂಡ ಚಿರಋಣಿಯಾಗಿರುತ್ತೇವೆ ನಿಮ್ಮ ಉತ್ತಮ ಬದುಕಿನಲ್ಲಿ ನಾವು ಸಂತೋಷ ಕಾಣುತ್ತೇವೆ ಈ ಕಾರ್ಯಕ್ರಮ ನನ್ನ ಜೀವನದಲ್ಲೇ ತುಂಬಾ ಖುಷಿ ತಂದು ಕೊಟ್ಟಂತಹ ಕಾರ್ಯಕ್ರಮವಾಗಿದೆ. ಅಷ್ಟು ವರ್ಷಗಳು ಕಳೆದರೂ ನಮ್ಮ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸ ಚಿಂತಿಷ್ಟು ಕಮ್ಮಿಯಾಗದೆ ನಿಮ್ಮೆಲ್ಲರ ಪ್ರೀತಿಯನ್ನು ನಾವು ಹೇಗೆ ಮರೆಯಲಿ ಎಂದು ಬಹುಕಾರಾದರು.

ನಿವೃತ್ತ ಶಿಕ್ಷಕಿ ಮಧುರ ಮಾತನಾಡಿ ನಾವು ಶಿಕ್ಷಕರಾದ ಮೇಲೆ ಕೊಟ್ಟಿರುವ ವಿದ್ಯಾಭ್ಯಾಸವನ್ನು ಪ್ರೀತಿಯಿಂದ ಸ್ವೀಕರಿಸಿ ಜೀವನದಲ್ಲೇ ದೊಡ್ಡ ಸಾಧನೆ ಮಾಡಿರುವ ನಿಮ್ಮಗಳ ಸಾಧನೆ ನಮಗೆ ಹೇಳಲಾಗದಷ್ಟು ಸಂತೋಷವಾಗಿದೆ. ನಿವೃತ್ತರಾದ ಮೇಲೆ ದಿನನಿತ್ಯ ನಾವು ಮಾಡಿದ ಪಾಠ ಮತ್ತು ಕಲಿತ ವಿದ್ಯಾರ್ಥಿಗಳು ಮತ್ತು ಅವರ ಜೀವನ ಸಾಧನೆ ಬಗ್ಗೆ ಕುಳಿತು ಮೇಲಕು ಹಾಕುತ್ತಿರುತ್ತೇವೆ. ಎಷ್ಟೋ ಜನ ವಿದ್ಯಾರ್ಥಿಗಳು. ನಮ್ಮಗಳನ್ನು ಮರೆಯದೆ ಪ್ರೀತಿಸುತ್ತಿರುತ್ತಾರೆ. ಆದರೆ ಅವರೆಲ್ಲರನ್ನು ಮತ್ತೊಮ್ಮೆ ಭೇಟಿ ಮಾಡಿ ಸಂತೋಷ ಹಂಚಿಕೊಳ್ಳುವ ವೇದಿಕೆಯನ್ನು ಗುರು ವಂದನ ಕಾರ್ಯಕ್ರಮದ ಮೂಲಕ ನೀವುಗಳು ಮಾಡಿರುವುದು ನಮ್ಮ ಉಸಿರಿರೋವರೆಗೂ ಹೃದಯದಲ್ಲಿ ಉಳಿಯುವಂತೆ ಮಾಡಿದ್ದೀರಿ. ಇದೇ ಪ್ರೀತಿ ವಿಶ್ವಾಸವನ್ನು ಎಲ್ಲಾ ಸ್ನೇಹಿತರಲ್ಲೂ ಗಟ್ಟಿಗಳಿಸಿಕೊಂಡು ಶಾಶ್ವತವಾಗಿ ಉಳಿಸಿಕೊಳ್ಳಿ ಎಂದು ಸಲಹೆ ನೀಡಿದರು.

ನಿವೃತ್ತ ಶಿಕ್ಷಕ ಶೇಷಾದ್ರಿ ಮಾತನಾಡಿ ನೀವು ಎಸ್ ಎಸ್ ಎಲ್ ಸಿ ಯಲ್ಲಿ ಎ ಮತ್ತು ಬಿ ಎರಡು ಸೆಕ್ಷನ್ಗಳು ಇದ್ದವು 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರೌಢಶಾಲೆಯಲ್ಲಿ ಇದ್ದ ಸಂದರ್ಭ ಅದು ಆದರೆ ಈಗ ಕೇವಲ 60 ವಿದ್ಯಾರ್ಥಿಗಳು ಇರುವ ಸ್ಥಿತಿಗೆ ಈ ಶಾಲೆ ತಲುಪಿದೆ ಈ ಶಾಲೆಯನ್ನು ಮತ್ತೆ ದಾಖಲಾತಿ ಸಂಖ್ಯೆ ಹೆಚ್ಚಿಸುವ ಮೂಲಕ ಶಾಲೆಯ ಅಭಿವೃದ್ಧಿಗೆ ಹಳೆ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯವಾಗಿದ್ದು ನೀವೆಲ್ಲರೂ ಹೆಚ್ಚಿನ ರೀತಿಯಲ್ಲಿ ಶಾಲಾ ಅಭಿವೃದ್ಧಿಗೆ ಸಹಕರಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಪ್ರಸಾದ್, ನಿವೃತ್ತ ಶಿಕ್ಷಕ ಮಾಯಿಗೆಗೌಡ ಹುಚ್ಚೇಗೌಡ ಸುರೇಶ್, ಶೇಷಾದ್ರಿಗೌಡ, ಮಧುರ, ಸುಮಾರಾಣಿ, ಡಿ ದರ್ಜೆ ಸಹಾಯಕ ಪದ್ಮನಾಭನ್ ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷ ಮಹದೇವ್ ಸಿ ಸಿ, ಸೇರಿದಂತೆ ಎಲ್ಲಾ ಹಳೆ ವಿದ್ಯಾರ್ಥಿಗಳು ಇದ್ದರು.



### ಡಿಸ್ಟ್ರಿಕ್ಷನ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

2026 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆದ ಈ ಶಾಲೆಯ ರಾಧಾ,91.20% ಲಾವಣ್ಯ, 91.04%, ನಿಖಿತ,88%, ಧೃತಿಕಾ,86% ಅನುಶ್ರೀ ಐದು ವಿದ್ಯಾರ್ಥಿಗಳು ಡಿಸ್ಟ್ರಿಕ್ಷನ್ ಅಂಕ ಪಡೆದು ತೇರ್ಗಡೆಯಾಗಿದ್ದಾರೆ. ಇದು ತಾಲೂಕಿನಲ್ಲಿ ಎರಡನೇ ಸ್ಥಾನದ ಶಾಲೆಯಾಗಿದೆ. 1996 97ನೇ ಸಾಲಿನ ಹಳೆ ವಿದ್ಯಾರ್ಥಿಗಳು ಈ ಮಕ್ಕಳನ್ನು ಗುರುತಿಸಿ ಅಭಿನಂದಿಸಿದರು. ನಿಮ್ಮ ಮುಂದಿನ ಉನ್ನತ ಶಿಕ್ಷಣಕ್ಕೆ ನಮ್ಮ ಕೈಯಲ್ಲಾದ ಸಹಾಯವನ್ನು ಮಾಡಬಹುದಾಗಿ ಬೆಂಬಲ ವ್ಯಕ್ತಪಡಿಸಿದರು. ರಾಜಸ್ಥಾನದಿಂದ ಬಂದು ವಾಸವಿರುವ ಸೇಟು ಮಕ್ಕಳು ಕನ್ನಡದಲ್ಲಿ ನೂರಕ್ಕೆ ನೂರರಷ್ಟು ಅಂಕ ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಇದಕ್ಕೂ ಮುನ್ನ ನಿವೃತ್ತ ಶಿಕ್ಷಕರನ್ನು ಶಾಲೆಯ ಮುಖ್ಯ ದ್ವಾರಕ ದಿಂದ ವೇದಿಕೆ ತನಕ ಬ್ಯಾಂಡ್ಸೆಟ್ ಮತ್ತು ಹೂವಿನ ಪುಷ್ಪಾರ್ಚನೆ ಮಾಡುವ ಮೂಲಕ ವೇದಿಕೆಗೆ ಕರೆತಂದರು. ನಂತರ ನಿವೃತ್ತ ಎಲ್ಲಾ ಶಿಕ್ಷಕರಿಗೆ ಸನ್ಮಾನಿಸಿ ಗೌರವಿಸಿದರು.

ಇವರಿಂದ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ನಂತರ ಅನೇಕ ವಿದ್ಯಾರ್ಥಿಗಳು ಸರ್ಕಾರಿ ನೌಕರಿ ಪಡೆದಿರುವವರು ಮತ್ತು ಉದ್ಯಮಿ ಆಗಿರುವವರು ಜೊತೆಗೆ ಉತ್ತಮ ರೈತರಾಗಿರುವವರು ತಮ್ಮ ಸಾಧನೆಯ ಅಭಿಪ್ರಾಯಗಳನ್ನು ಎಲ್ಲರಲ್ಲೂ ತಿಳಿಸಿದರು.

# ಜೂನ್ ಅಂತ್ಯಕ್ಕೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳು ಕಾರ್ಯಾರಂಭಕ್ಕೆ ಸೂಚನೆ

**ಮಂಡ್ಯ:** ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯ ಹಂತ 2 ರ ಮಾರ್ಗಸೂಚಿಗಳ ಅನ್ವಯ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ವ್ಯವಸ್ಥೆ ಕಲ್ಪಿಸುವುದಕ್ಕೆ ಆದ್ಯತೆಯನ್ನು ನೀಡಲಾಗಿದ್ದು, ಪಾಂಡವಪುರ ತಾಲ್ಲೂಕಿನ ಚಿನಕುರಳಿ ಗ್ರಾಮ ಪಂಚಾಯಿತಿ, ನಾಗಮಂಗಲ ತಾಲ್ಲೂಕಿನ ಹುಲಿಕೆರೆ ಗ್ರಾ.ಪಂ., ಕೆ.ಆರ್.ಪೇಟೆ ತಾಲ್ಲೂಕಿನ ಚೌಡೇನಹಳ್ಳಿ ಗ್ರಾ.ಪಂ. ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ತಲಾ 16.00 ಲಕ್ಷಗಳ ವೆಚ್ಚದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛ ಸಂಕೀರ್ಣ ಘಟಕಗಳಲ್ಲಿ ಸಂಗ್ರಹಣೆ ಮಾಡಲಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಆಯಾ ತಾಲ್ಲೂಕಿನ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳಿಗೆ ಸಾಗಾಣಿಕೆ ಮಾಡಲಾಗುವುದು ಎಂದು ತಿಳಿಸಿದರು.

ತ್ಯಾಜ್ಯದಿಂದ ಸಂಪತ್ತು ಎಂಬ ಪರಿಕಲ್ಪನೆಯೊಂದಿಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಸ್ವಸಹಾಯ ಸಂಘದ ಮಹಿಳೆಯರು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ವಿವಿಧ ಮಾದರಿಯಾಗಿ ವಿಂಗಡಣೆ ಹಾಗೂ ಬೇಲಿಂಗ್ ಮಾಡಿ, ಸಿಮೆಂಟ್ ಉತ್ಪಾದನಾ ಕಾರ್ಖಾನೆಗಳಿಗೆ ಮಾರಾಟ ಮಾಡಲು ಅನುವಾಗುವಂತೆ ಅಗತ್ಯ ಯಂತ್ರೋಪಕರಣಗಳನ್ನು ಸರಬರಾಜು ಮಾಡಲಾಗುವುದು ಎಂದು ತಿಳಿಸಿದರು.

ಈ ಘಟಕಗಳಿಗೆ ತುರ್ತಾಗಿ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಚೆಸ್ಕಾಂ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳ



ಸಭೆಯಲ್ಲಿ ಸಿ.ಇ.ಓ. ಸೂಚನೆ ನೀಡಿದರು.

**ಜಿಲ್ಲೆಗೆ ಅನುಮೋದನೆಗೊಂಡಿರುವ ನಾಲ್ಕು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕ**ಗಳು ಜೂನ್ ಅಂತ್ಯದೊಳಗೆ ಕಾರ್ಯಾರಂಭಕ್ಕೆ ಕ್ರಮವಹಿಸಲು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು

ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಮದ್ದೂರು ತಾಲ್ಲೂಕಿನ ಕದಲೂರು ಗ್ರಾಮ ಪಂಚಾಯಿತಿಯ ಹೊಸಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಿರುವ ವಸ್ತು ಪುನಸಂಪಾದನಾ ಕೇಂದ್ರದಲ್ಲಿ (ಎಂ.ಆರ್.ಎಫ್.) ನಿರ್ವಹಣೆ ಮಾಡಲಾಗುವುದು ಎಂದು ತಿಳಿಸಿದರು.

ಘನ ತ್ಯಾಜ್ಯ ನಿರ್ವಹಣಾ ನಿಯಮಗಳು –2026 ರಲ್ಲಿ ಉಲ್ಲೇಖಿಸಲಾಗಿರುವ ನಿಯಮಗಳನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಳವಡಿಸಲು ಕ್ರಮವಹಿಸಲಾಗುತ್ತಿದೆ. ಈ ನಿಯಮದಂತೆ ಮನೆಯ ಹಂತದಲ್ಲಿಯೇ ತ್ಯಾಜ್ಯವನ್ನು ನಾಲ್ಕು ವಿಧಗಳಾದ ಹಸಿ ಕಸ, ಒಣ ಕಸ, ಸ್ಯಾನಿಟರಿ ತ್ಯಾಜ್ಯ ಹಾಗೂ ವಿಶೇಷ ಕಾಳಜಿಯ ತ್ಯಾಜ್ಯಗಳಾಗಿ (ಬ್ಯಾಟರಿ, ಬ್ಲೇಡ್, ಬಲ್ಬ್, ಔಷಧಿ. ಇತರೆ) ವಿಂಗಡಿಸುವುದು. ಹಸಿ ತ್ಯಾಜ್ಯವನ್ನು ಮನೆಯ ಹಂತದಲ್ಲಿಯೇ ನಿರ್ವಹಣೆ ಮಾಡಲು ಕಾಂಪೋಸ್ಟಿಂಗ್ ವಿಧಾನ ಅನುಸರಿಸಲು ತಿಳುವಳಿಕೆ ಮೂಡಿಸಲು ಸೂಚಿಸಲಾಗಿದೆ. ಜಿಲ್ಲೆಯಲ್ಲಿ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026?ನ್ನು ಪರಿಣಾಮಕಾರಿಯಾಗಿ ಅಳವಡಿಸುವ ಕುರಿತು ಎಲ್ಲಾ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳಿಗೆ ದಿನಾಂಕ: 12.06.2026ರಂದು ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕಾರ್ಯಾಗಾರ ಆಯೋಜಿಸಲು ನಿರ್ಣಯಿಸಲಾಗಿದೆ.

ಸಭೆಯಲ್ಲಿ ಭಾಗವಹಿಸಿದ್ದವರು

ಶ್ರೀ ಸುಂದರ್ ರಾಜ್, ಯೋಜನಾ ನಿರ್ದೇಶಕರು, ಜಿ.ಪಂ., ಮಂಡ್ಯ, ಶ್ರೀ ಜಿ.ಶ್ರೀಹರ್ಷ, ಸಹಾಯಕ ಯೋಜನಾಧಿಕಾರಿ, ಜಿ.ಪಂ., ಮಂಡ್ಯ

ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ಮತ್ತು ಶ್ರೀರಂಗಪಟ್ಟಣ ವ್ಯಾಪ್ತಿಯ ಚೆಸ್ಕಾಂ ಕಾರ್ಯಪಾಲಕ ಅಭಿಯಂತರರು ಹಾಗೂ ಪಾಂಡವಪುರ ಸಹಾಯಕ ಕಾರ್ಯಪಾಲಕ ಅಭಿಯಂತರರು,

ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಜಿಲ್ಲಾ SBM(G) ಸಮಾಲೋಚಕರು ಉಪಸ್ಥಿತರಿದ್ದರು.

## ಮಂಡ್ಯದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜೂನ್ 28ರಂದು



**ಮಂಡ್ಯ:** ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಮಂಡ್ಯ ಮತ್ತು ರಾಮನಗರ ಜಿಲ್ಲಾ ಘಟಕದಿಂದ ವಿಶ್ವಕರ್ಮ ಸಮಾಜದ ಎಸ್ಎಸ್ಎಲ್ಸಿ ಮತ್ತು ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಜೂ.28ರಂದು ಬೆಳಗ್ಗೆ 10 ಗಂಟೆಗೆ ರಾಮನಗರದ ಕೃಷ್ಣಸ್ಪೂರ್ತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಮಹಾಸಭಾದ ರಾಮನಗರ ಜಿಲ್ಲಾಧ್ಯಕ್ಷ ಜನಾರ್ಧನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಪ್ರಥಮ ಬಾರಿಗೆ ಮಂಡ್ಯ ಮತ್ತು ರಾಮನಗರ ಜಿಲ್ಲೆಯ ಎಸ್ಎಸ್ಎಲ್ಸಿ ಮತ್ತು ಪಿಯುಸಿಯಲ್ಲಿ ಶೇ.60ಕ್ಕೂ ಹೆಚ್ಚು ಅಂಕಗಳಿಸಿದ 250 ಮಂದಿ ವಿಶ್ವಕರ್ಮ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ ಎಂದರು.

ಸಮಾಜದ ಬಂಧುಗಳಿಗೆ ವಾಟ್ಸಪ್ ಮೂಲಕ ಅರ್ಜಿಗಳನ್ನು ಕಳುಹಿಸಲಾಗಿದ್ದು, ಇದರ ಜತೆಗೆ ಮಕ್ಕಳ 2 ಫೋಟೋ, ಫಲಿತಾಂಶದ ಪ್ರಮಾಣ ಪತ್ರ, ಜಾತಿ ಪ್ರಮಾಣಪತ್ರ, ಆಧಾರ್ ಕಾರ್ಡ್‌ಗಳನ್ನು ಕೆ.ಸುಂದರ್ (9886423935), ಸಂತೋಷ್ (9945008888) ಅವರ ವಾಟ್ಸಪ್‌ಗೆ ಕಳುಹಿಸಿ ಜೂ.20ರೊಳಗೆ ನೊಂದಾಯಿಸಿಕೊಳ್ಳುವಂಎ ತಿಳಿಸಿದರು. ಆಯ್ಕೆಯಾದ ಎಲ್ಲ ಮಕ್ಕಳಿಗೆ ತಲಾ 1000 ರೂ.ನಗದು, ಬ್ಯಾಗ್ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು ಎಂದು ತಿಳಿಸಿದರು. ಗೋಷ್ಠಿಯಲ್ಲಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಬಸವರಾಜು, ಮದ್ದೂರು ತಾಲೂಕು ಅಧ್ಯಕ್ಷ ಎಂ.ಪಿ.ಮಹೇಶ್ ವಿಶ್ವಕರ್ಮ, ಮಂಡ್ಯ ತಾಲೂಕು ಅಧ್ಯಕ್ಷ ಈಶ್ವರಾಚಾರ್, ಮುಖಂಡ ಲೋಕೇಶ್ ಇದ್ದರು.

# ತಾಯಿ ಮತ್ತು ಶಿಶುವಿನ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಿ

## ಅಧಿಕಾರಿಗಳಿಗೆ ಜಿ.ಪಂ. ಸಿಇಒ ಕೆ.ಆರ್. ನಂದಿನಿ ಸೂಚನೆ

**ಮಂಡ್ಯ:** ಜಿಲ್ಲೆಯಲ್ಲಿನ ಶಿಶು ಮರಣ ಪ್ರಮಾಣವನ್ನು ಕಡಿಮೆಗೊಳಿಸಲು ಅಗತ್ಯ ಮುನ್ನೆಚ್ಚರಿಕೆ ಹಾಗೂ ತಡೆಗಟ್ಟುವ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ ಅವರು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿಯ ಮಿನಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಆರೋಗ್ಯ ಸಂಘ ಹಾಗೂ ಜಿಲ್ಲಾ ಶಿಶು ಮರಣ ಕಾರಣ ಪರಿಶೋಧನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಸಂಭವಿಸುತ್ತಿರುವ ಶಿಶು ಮರಣಗಳ ಪ್ರಮುಖ ಕಾರಣಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಶಿಶು ಮರಣ ತಡೆಗೆ ಸಮಗ್ರ ಕಾರ್ಯಯೋಜನೆ ರೂಪಿಸುವಂತೆ ತಿಳಿಸಿದರು.



ಥಯಾಮಿನ್ (ವಿಟಮಿನ್ ಬಿ–1) ಕೊರತೆಯು ಮಕ್ಕಳ ಹೃದಯ, ನರಮಂಡಲ ಹಾಗೂ ದೈಹಿಕ ಬೆಳವಣಿಗೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ, ಈ ಕುರಿತು ವಿಶೇಷ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು. ಥಯಾಮಿನ್ ಕೊರತೆಯಿಂದ ಶಿಶುಗಳಲ್ಲಿ ವಾಂತಿ, ಹಾಲು ಕುಡಿಯುವ ಪ್ರಮಾಣ ಕಡಿಮೆಯಾಗುವುದು, ಧ್ವನಿ ಕ್ಷೀಣಿಸುವುದು, ಕೆಮ್ಮು ಸೇರಿದಂತೆ ವಿವಿಧ ಲಕ್ಷಣಗಳು ಕಂಡುಬಂದಲ್ಲಿ ಆಶಾ ಕಾರ್ಯಕರ್ತೆಯರು ತಕ್ಷಣವೇ ಪೋಷಕರಿಗೆ ಮಾಹಿತಿ ನೀಡಿ ಆಸ್ಪತ್ರೆಗೆ ದಾಖಲಿಸುವಂತೆ ಕ್ರಮವಹಿಸಬೇಕು ಎಂದು ತಿಳಿಸಿದರು.

ಸಮುದಾಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಜ್ಞಾನ ಮತ್ತು ಕೌಶಲ್ಯವನ್ನು ನಿರಂತರವಾಗಿ ನವೀಕರಿಸಬೇಕು. ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಆರೋಗ್ಯ ಶಿಕ್ಷಣ ಮತ್ತು ಪೌಷ್ಟಿಕ ಆಹಾರದ ಕುರಿತು ಅರಿವು ಮೂಡಿಸುವ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.

**ವಿಶೇಷ ಚಟುವಟಿಕೆಗಳಿಗೆ ಸೂಚನೆ**

ಶಿಶು ಮರಣ ತಡೆಗಟ್ಟುವ ಕುರಿತು ಆರೋಗ್ಯ ಇಲಾಖೆ ವತಿಯಿಂದ ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಚಟುವಟಿಕೆಗಳನ್ನು ವ್ಯಾಪಕವಾಗಿ ಹಮ್ಮಿಕೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಜಿಲ್ಲಾ ಮಟ್ಟದ ಮಕ್ಕಳ ತಜ್ಞರ ಸಹಕಾರದೊಂದಿಗೆ ಆಶಾ ಕಾರ್ಯಕರ್ತೆಯರು ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಿಗೆ ತಾಲ್ಲೂಕು ಮಟ್ಟದಲ್ಲಿ 15 ದಿನಗಳೊಳಗೆ ವಿಶೇಷ ತರಬೇತಿ ಆಯೋಜಿಸುವಂತೆ ಸೂಚಿಸಿದರು.

ಥಯಾಮಿನ್ ಕೊರತೆಯಿಂದ ಉಂಟಾಗುತ್ತಿರುವ ಶಿಶು ಮರಣಗಳನ್ನು ತಡೆಗಟ್ಟಲು ಜೂನ್ 18ರೊಳಗೆ ಸಮಗ್ರ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಗರ್ಭಿಣಿಯರ ದಿನನಿತ್ಯದ ಆಹಾರದಲ್ಲಿ ಅತಿಯಾಗಿ ಪಾಲಿಶ್ ಮಾಡಿದ ಅಕ್ಕಿಯ ಬಳಕೆಯಿಂದ ಹೆರಿಗೆಯ ನಂತರ ತಾಯಿ ಮತ್ತು ಮಗುವಿನಲ್ಲಿ ಥಯಾಮಿನ್ ಕೊರತೆಯ ಸಮಸ್ಯೆ ಉಂಟಾಗುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಆಶಾ ಕಾರ್ಯಕರ್ತೆಯರು ಮನೆ ಭೇಟಿಯ ಸಂದರ್ಭದಲ್ಲಿ ಗರ್ಭಿಣಿಯರು, ಬಾಣಂತಿಯರು ಹಾಗೂ ಕುಟುಂಬದ ಸದಸ್ಯರಿಗೆ ಪೌಷ್ಟಿಕ ಆಹಾರದ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮೋಹನ್ ಕುಮಾರ್, ಮಿಮ್ಸ್ ಅಧೀಕ್ಷಕ ಡಾ. ಶಿವಕುಮಾರ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು



# ಮಂಡ್ಯ ವಿಷನ್–2035 ಅಡಿಯಲ್ಲಿ ಎರಡು ದಿನಗಳ ಕೃಷಿ ಉದ್ಯಮಶೀಲ ಅಧಿವೇಶನ



**ಮಂಡ್ಯ:** ಫಸ್ಟ್ ಸರ್ಕಲ್(ಎಫ್‌ಸಿ) ಸಹಯೋಗದೊಂದಿಗೆ ಕೃಷಿ ಇಲಾಖೆ, ಬೆಲ್ಲದನಾಡು ರೈತ ಉತ್ಪಾದಕ ಕಂಪನಿಗಳ ಒಕ್ಕೂಟದ ವತಿಯಿಂದ ಮುನ್ನಡೆ ಮಂಡ್ಯ ವಿಷನ್–2035 ಶೀರ್ಷಿಕೆಯಡಿ 2ದಿನಗಳ ಕೃಷಿ ಉದ್ಯಮಶೀಲ ಅಧಿವೇಶನ, ಖರೀದಿದಾರ–ಮಾರಾಟಗಾರರ ಸಮೇಶ್ ಹಾಗೂ, ರೈತ ಬಜಾರ್ (ಆರ್–ಮಾರ್ಟ್) ಉದ್ಘಾಟನಾ ಸಮಾರಂಭವು ಜೂ.13 ಮತ್ತು 14ರಂದು ನಗರದ ಜಿ.ಪಂ ಆವರಣದಲ್ಲಿ ನಡೆಯಲಿದೆ ಎಂದು ಎಫ್‌ಸಿ ಅಧ್ಯಕ್ಷ ಡಾ.ಬಿ.ಶಿವಲಿಂಗಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಜಿಲ್ಲೆಯಲ್ಲಿ ಬೆಳೆಯುವ ಬೆಲ್ಲ, ಭತ್ತ, ರೇಷ್ಮೆ, ಹಾಲು, ಎಳನೀರಿನ ಸಂಸ್ಕರಣೆ, ಬ್ರಾಂಡ್ ಮಡಿ ಮಾರುಕಟ್ಟೆ ಕಲ್ಪಿಸುವುದು ಇದರ ಉದ್ದೇಶವಾಗಿದೆ ಎಂದರು.

ಉದ್ಘಾಟನಾ ಸಮಾರಂಭವು ಜು.13ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕೆಗಳ ಸಚಿವ ಎಚ್.ಡಿ.ಕುಮಾರಸ್ವಾಮಿ ಘನ ಉಪಸ್ಥಿತರಿರುವರು. ಮಾಜಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ರೈತ ಬಜಾರ್ ಉದ್ಘಾಟಿಸುವರು. ಸೆಸ್ಕ್ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಮಳಿಗೆಗಳ ಉದ್ಘಾಟನೆ ಮಾಡುವರು, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅಧಿವೇಶನಕ್ಕೆ ಚಾಲನೆ ನೀಡುವರು. ಶಾಸಕ ಪಿ.ರವಿಕುಮಾರ್ ಗೌಡ ಅಧ್ಯಕ್ಷತೆ ವಹಿಸಲಿದ್ದು, ಫಸ್‌ಸರ್ಕಲ್‌ನ ಮಾರ್ಗದರ್ಶಕ ಜಯರಾಮ್ ರಾಯಪುರ ಪ್ರಾಸ್ತಾವಿಕವಾಗಿ ಮಾತನಾಡುವರು. ಜಿಲ್ಲೆ ಎಲ್ಲ ಶಾಸಕರು, ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು ಹಾಗೂ ಉದ್ಯಮಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ವಿವರಿಸಿದರು.

ಸಮಾರೋಪ ಸಮಾರಂಭವು ಜೂ.14ರಂದು ಸಂಜೆ 4 ಗಂಟೆಗೆ ನಡೆಯಲಿದ್ದು, ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕೆಗಳ ಸಚಿವ ಎಚ್.ಡಿ.ಕುಮಾರಸ್ವಾಮಿ ಸಮಾರೋಪ ನುಡಿಗಳನ್ನಾಡುವರು. ಮಿಷನ್ 2035 ಪ್ರಸ್ತುತಿಯನ್ನು ಫಸ್‌ಸರ್ಕಲ್‌ನ ಮಾರ್ಗದರ್ಶಕ ಜಯರಾಮ್ ರಾಯಪುರ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಮಂಡ್ಯ ಕೃಷಿವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಸಿ.ನಾರಾಯಣ ಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿ.ಪಂ ಸಿಇಓ ಕೆ.ಆರ್.ನಂದಿನಿ, ಎಸ್ಪಿ ಡಾ.ವಿ.ಜೆ.ಶೋಭಾರಾಣಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಗಣ್ಯರು ಉಪಸ್ಥಿತರಿರುವರು ಎಂದು ಮಾಹಿತಿ ಹಂಚಿಕೊಂಡರು.

ಗೋಷ್ಠಿಯಲ್ಲಿ ಎಫ್‌ಸಿ ಕಾರ್ಯಾಧ್ಯಕ್ಷ ಚಂದ್ರಶೇಖರ್, ಮಹಿಳಾ ಅಧ್ಯಕ್ಷೆ ನಾಗರೇವಕ್ಕ, ಉಪಾಧ್ಯಕ್ಷ ಕಾಳೇಗೌಡ, ಕೃಷಿ ಜಂಟಿ ನಿರ್ದೇಶಕ ವಿ.ಎಸ್.ಅಶೋಕ್, ಬೆಲ್ಲದನಾಡು ರೈತ ಉತ್ಪಾದಕ ಕಂಪನಿಗಳ ಒಕ್ಕೂಟದ ಅಧ್ಯಕ್ಷ ಕಾರಸವಾಡಿ ಮಹದೇವು, ಮುನ್ನಡೆ ಮಂಡ್ಯದ ಮಾರ್ಗದರ್ಶಕ ಡಾ.ಹರಿಣಿಕುಮಾರ್, ಗೌರವ ಸಲಹೆಗಾರ ಪ್ರೊ.ಬಿ.ಜಯಪ್ರಕಾಶಗೌಡ ಇದ್ದರು.

# ನಮಗೆಲ್ಲ ಚಿಂತೆ ಎತಕೆ?



| ಚೇಂಪಿ ದಿನೇಶ್

ಆಧುನಿಕ ಜೀವನದ ಆತಂಕದ ಹಿಂದಿನ ಕಥೆ ಮತ್ತು ಅದರಿಂದ ಹೊರಬರುವ ದಾರಿ ಹುಡುಕುವ ಅಗತ್ಯ ನಮಗೂ, ನಿಮಗೂ ಇದೆ ಎನ್ನುವ ಸತ್ಯ ಅರಿತುಕೊಳ್ಳಬೇಕಿದೆ ಕಾಣ್ರೀ.

ಎಲ್ಲರ ತಲೆಯೊಳಗಿನ ಸುನಾಮಿ ಏನೆಂದರೆ

ಬೆಳಗ್ಗೆ ಎದ್ದ ಕೂಡಲೇ ಎದೆ ಧಸಕ್ ಅನ್ನುತ್ತದೆ. "ಇವತ್ತು ಆಫೀಸ್‌ನಲ್ಲಿ ಬಾಸ್ ಏನು ಹೇಳ್ತಾನೋ", "ಇಎಂಐ ಕಟ್ಟೋದು ಹೇಗೆ" ಬ್ಯಾಂಕಿನವರು ಎಷ್ಟೊತ್ತಿಗೆ ಕಾಲ್ ಮಾಡ್ತಾರೋ?,ಮಗುವಿಗೆ ಜ್ವರ ಕಡಿಮೆ ಆಗಿಲ್ವಲ್ಲ? ಯಾವ ಸ್ಪೆಶಲಿಸ್ಟ್ ಹತ್ರ ಹೋಗೋದೋ?"ನಾಳೆ ಇಂಟರ್‌ವ್ಯೂ ಚೆನ್ನಾಗಿ ಆಗುತ್ತೋ ಇಲ್ವೋ?, ಮಗಳ ರಿಸಲ್ಟ್ ಏನಾಗತ್ತೋ? ಶಾಲೆ ಫೀಸ್ ಕಟ್ಟೋಕೆ ನಾಳೇನೇ ಲಾಸ್ಟ್ ಡೇಟ್.? ಒಂದಲ್ಲ ಹೀಗೆ ನೂರಾರು ಚಿಂತೆಗಳ ಸರಮಾಲೆ ಬೆಳಗ್ಗೆ ಎದ್ದ ಕೂಡಲೇ ಮನಸಿನ ಅಳದಿಂದ ಜ್ವಾಲ ಮುಖಿಯ ಹಾಗೇ ಸ್ಫೋಟಗೊಳ್ಳುತ್ತವೆ.

ನಗುತ್ತಾ ಸೆಲ್ಫಿ ಹಾಕುವ ನಮ್ಮೆಲ್ಲರ ಒಳಗೆ ಒಂದು ಚಂಡಮಾರುತವೇ ಇದೆ ಎನ್ನುವ ಸತ್ಯ ಎಲ್ಲರಿಗೂ ಗೊತ್ತು ಕಾಣ್ರೀ.

ಹಿಂದೆ ನಮ್ಮ ಹಿರಿಯರಿಗೆ ಚಿಂತೆ ಇರಲಿಲ್ಲವಾ ಎನ್ನುವ ಪ್ರಶ್ನೆ ಮೂಡುತ್ತದೆ. ಆದರೆ ಅವರಿಗೂ ಚಿಂತೆ ಇತ್ತು.

ಮಳೆಯ ಚಿಂತೆ, ಬೆಳೆಯ ಚಿಂತೆ, ಮಕ್ಕಳ ಮದುವೆಯ ಚಿಂತೆ. ಅದು ಒಂದು ಋತುವಿಗೆ ಮಾತ್ರ ಸೀಮಿತವಾಗಿತ್ತು. ಈಗ ನಮ್ಮ ಚಿಂತೆಗೆ ಋತುಮಾನವೇ ಇಲ್ಲ.ಟಿವಿ ನ್ಯೂಸ್ ನ ಹಾಗೇ ನಮ್ಮಲ್ಲಿಯೇ ಪ್ರಥಮ ಮತ್ತು 24x7 ಚಿಂತೆ ತಿರುಗುತ್ತದೆ.

## ನಮ್ಮನ್ನು ಕಾಡುವ ಚಿಂತೆ ಎನ್ನುವ 5 ದೆವ್ವಗಳು

1. ನಾಳೆ ಏನಾಗುತ್ತೋ ಗೊತ್ತಿಲ್ಲ.ಕೆಲಸ ಹೋಗುತ್ತಾ? ಆರೋಗ್ಯ ಹಾಳಾಗುತ್ತಾ? ನಮ್ಮ ತಲೆಗೆ ಗೊತ್ತಿಲ್ಲದ್ದೆಲ್ಲವೂ ಶತ್ರುಗಳಾಗಿ ಬಿಡುತ್ತವೆ . ಈ ಅನಿಶ್ಚಿತತೆಯೇ ಚಿಂತೆಯ ಮೊದಲ ಬೀಜ. ಇವುಗಳ ವಿರುದ್ಧ ಗಟ್ಟಿಗೊಳ್ಳಬೇಕಾಗಿದೆ ನಮ್ಮ ನಿರ್ಧಾರ.
2. ಹೋಲಿಕೆಯ ರೋಗವೊಂದಿದೆ ಪ್ರತಿಯೊಬ್ಬರಲ್ಲೂ. ಇನ್ನೊಬ್ಬರ ದುಬೈ ಟ್ರಿಪ್, ಹೊಸ ಮನೆ ಗೃಹಪ್ರವೇಶ, ಯಾರಿಗೋ ಪ್ರಮೋಶನ್. ನಮ್ಮ ಜೀವನ ಮಾತ್ರ ಅದೇ ಬಸ್ ಸ್ಟಾಪ್ ತರಹ ಅಲ್ಲೇ ಇರುತ್ತೆ ಕಾಣ್ರೀ. ನಾವು ನಮ್ಮ ಜೀವನ ವನ್ನು ಬೇರೆಯವರಿಗೆ ಹೋಲಿಸಿ ಕೊರಗುತ್ತೇವೆ. ಅದುವೇ ನೆಮ್ಮದಿಯನ್ನು ಹರಿದು ಮುಕ್ಕಿ ತಿನ್ನುತ್ತದೆ.
3. ಎಲ್ಲವೂ ಪರ್ಫೆಕ್ಟ್ ಆಗಿರಬೇಕು. ಮಾರ್ಕ್ಸ್ 100ಕ್ಕೆ 100. ಮನೆ ಅರಮನೆ ತರಹ ಇರಬೇಕು. ಮಕ್ಕಳು ಎಲ್ಲದರಲ್ಲೂ ಮೊದಲಿಗರಾಬೇಕು. ಸಣ್ಣ ತಪ್ಪಾದರೂ ನಮಗೆ ತಡೆದುಕೊಳ್ಳುವ ಶಕ್ತಿ ಇಲ್ಲಾ ಎಂದು ಭಾವಿಸಿ ಬಿಡುತ್ತೇವೆ ಕಾಣ್ರೀ.
4. ನಮಗೆ ಎಲ್ಲವೂ ನಮ್ಮ ಕಂಟ್ರೋಲ್ ನಲ್ಲಿ ಇರಬೇಕು. ಯಾವುದೂ ನಮ್ಮ ಕೈಯಲ್ಲಿ ಇಲ್ಲ ಅಂದಾಗ ತಲೆ ಕೆಟ್ಟು ಹೋಗುತ್ತವೆ.ಸಣ್ಣ ವಿಷಯಕ್ಕೂ ಚಿಂತೆ ಮಾಡೋಕೆ ಶುರು ಮಾಡಿಬಿಡುತ್ತೇವೆ . ನಮ್ಮ ಕೈಯಲ್ಲಿ ಇಲ್ಲದ ವಿಷಯಕ್ಕೆಲ್ಲ ತಲೆಕೆಡಿಸಿಕೊಳ್ಳುವುದೇ ನಮ್ಮ ದೊಡ್ಡ ದೌರ್ಬಲ್ಯ ಅಲ್ವೇನ್ರಿ?
5. ಹಿಂದೆ ಆದ ಒಂದು ಸೋಲು, ಒಂದು ಅವಮಾನ ತಲೆಯಿಂದ ಹೋಗಲ್ಲ. ನಮ್ಮ ಯೋಚನೆ, ಯೋಜನೆ ಮಾತ್ರ ಹಿಂದಿನ ಗತಕಾಲದಲ್ಲಿ ಓಡಾಡುತ್ತಿರುತ್ತವೆ. ?ಈ ಕ್ಷಣ?ದಲ್ಲಿ ಬದುಕೋದನ್ನೇ ಮರೆತುಬಿಡುತ್ತೇವೆ.

ಪ್ರತಿ ನಮ್ಮ ಕ್ಷಣ, ನಮಗಾಗಿ ಇದೆ. ಸುಖ ದುಃಖ ಎರಡು ಸಮಾನವಾಗಿ ಸ್ವೀಕರಿಸವ ಗಟ್ಟಿತನದ ನಿರ್ಧಾರ ನಮ್ಮದಾಗಿರಲಿ.

ಚಿಂತೆ ಸುಮ್ಮನೆ ತಲೆಯಲ್ಲಿ ಹುಟ್ಟುವ ಯೋಚನೆ ಅಲ್ಲ. ಅದು ನಮ್ಮ ದೇಹವನ್ನೇ ಸುಡುವ ಬೆಂಕಿ. ವೈದ್ಯರು ಹೇಳುವ ಪ್ರಕಾರ ದೀರ್ಘಕಾಲದ ಚಿಂತೆಯಿಂದ ದೇಹದ ಮೇಲೆ ಪರಿಣಾಮ ಬೀರುತ್ತವೆ.

ನಿದ್ದೆ ಇಲ್ಲ. ಅರ್ಧರಾತ್ರಿ 2 ಗಂಟೆಗೂ ತಲೆ ಕೆಲಸ ಮಾಡುತ್ತಿರುತ್ತೆ.

ನಮ್ಮ ದೇಹದ ಇಮ್ಯುನಿಟಿ ಕಡಿಮೆ ಆಗಿ, ಸಣ್ಣ ಜ್ವರಕ್ಕೂ 10 ದಿನ ಮಲಗಬೇಕಾಗುವ ಪರಿಸ್ಥಿತಿ ತಂದುಕೊಳ್ಳುತ್ತೇವೆ.

ಸಣ್ಣ ವಿಷಯಕ್ಕೂ ಸಿಟ್ಟು. ಯಾರ ಜೊತೆಗೂ ನಗಲು ಆಗಲ್ಲ. ಆತ್ಮವಿಶ್ವಾಸ ಕಡಿಮೆ ಆಗುತ್ತೆ. ?ನನ್ನಿಂದ ಏನೂ ಆಗಲ್ಲ? ಅನ್ನೋ ಸೋಲಿನ ಮನೋಭಾವ ಬಿಡೋಣ.



ಸಂಬಂಧಗಳ ಮೇಲೆ ಸಹ ಪರಿಣಾಮ ಬಿರುತ್ತದೆ.

ಗಂಡ ಹೆಂಡತಿ ಜಗಳ. ಅಪ್ಪ ಮಕ್ಕಳ ನಡುವೆ ಅಂತರ. ?ನಿನಗೆ ನನ್ನ ಕಷ್ಟ ಅರ್ಥ ಆಗಲ್ಲ? ಅನ್ನೋ ಕೊರಗು. ನಾವು ಚಿಂತೆಯಲ್ಲಿದ್ದಾಗ, ಪ್ರೀತಿಯಿಂದ ಮಾತಾಡಲು ಆಗಲ್ಲ. ಹೀಗೆ ಚಿಂತೆ ನಮ್ಮ ಸುತ್ತಲಿರುವವರನ್ನೂ ನಮ್ಮಿಂದ ದೂರ ಮಾಡುತ್ತದೆ.

ಹಾಗಾದರೆ ಪರಿಹಾರದ ಹಾದಿ ಹುಡುಕೋಣ



ಚಿಂತೆಯಿಂದ ಚಿಂತನೆ ಕಡೆಗೆ ನಮ್ಮ ಮನಸ್ಸನ್ನು ಹರಿಯ ಬಿಡೋಣ.

ಚಿಂತೆ ಮಾಡಬೇಡ ಅಂದ ಕೂಡಲೇ ನಿಲ್ಲಿಸಲು ಅದು ಸ್ವಿಚ್ ಅಲ್ಲ. ಆದರೆ ಅದನ್ನು ನಿಭಾಯಿಸುವ ಕಲೆ ಕಲಿಯಬಹುದು. ಬುದ್ಧ ಹೇಳಿದ ಹಾಗೆ, ?ನೀನು ಏನನ್ನು ಯೋಚಿಸುತ್ತೀಯೋ, ಅದೇ ಆಗುತ್ತೀಯಾ?.

ಚಿಂತೆಯ ಸಮಯ ನಿಗದಿ ಮಾಡೋಣ

ದಿನಾ ಸಂಜೆ 6 ರಿಂದ 6:30 ತನಕ ಮಾತ್ರ ಚಿಂತೆ ಮಾಡುತ್ತೇನೆ ಅಂತ ಡಿಸೈಡ್ ಮಾಡುವ . ಉಳಿದ 23 ಗಂಟೆ ಚಿಂತೆ ಬಂದರೆ, ?ಸಂಜೆ ಮಾತಾಡೋಣ? ಅಂತಾ ಅದಕ್ಕೆ bye ಹೇಳಿ ಕಳುಹಿಸಿ ಕೊಡೋಣ

ದೇಹವನ್ನು ಹತೋಟಿಯಲ್ಲಿಡಲು ದಿನಕ್ಕೆ 30 ನಿಮಿಷ ವಾಕಿಂಗ್, ಯೋಗ, ಆಟೋಟ, ಜಿಮ್ ಯಾವುದಾದ್ರೂ ಒಂದು. ಹೊಟ್ಟೆ ತುಂಬಾ ನಗುವಂತಹ ಸಿನಿಮಾ ನೋಡೋಣ, ಕಾಮಿಡಿ ಸೀರಿಯಲ್ ನೋಡೋಣ,ಸ್ನೇಹಿತರ ಜೊತೆ ಹರಟೆ ಹೊಡೆಯೋಣ,

ಮಾತನ್ನು ಹಂಚಿಕೊಳ್ಳುವ ಒಬ್ಬ ಒಳ್ಳೆಯ ಸ್ನೇಹಿತ ಅಥವಾ ಸ್ನೇಹಿತೆ ಬೇಕು.

ಚಿಂತೆಯನ್ನು ಮನಸ್ಸಿನೊಳಗೆ ಕುದಿಸಿದರೆ ಅದು ವಿಷ ಆಗುತ್ತದೆ .

ಹಿರಿಯರು ಹೇಳ್ತಿದ್ರು, ?ಚಿಂತೆ ಮಾಡಿದ್ರೆ ಸತ್ತ ಮೇಕೆ ಬದುಕುತ್ತಾ? ಅಂತಾ.ನಾವು ಚಿಂತೆ ಮಾಡಿ ಯಾವ ಸಮಸ್ಯೆಯನ್ನೂ ಬಗೆಹರಿಸಲು ಸಾಧ್ಯವಿಲ್ಲ. ಆದರೆ ಚಿಂತನೆ ಮಾಡೋಣ,ಯೋಜನೆ ರೂಪಿಸೋಣ,

ನಾಳೆಯ ಬಗ್ಗೆ ಯೋಚನೆ ಮಾಡೋಣ . ಆದರೆ ನಾಳೆಯ ಬಗ್ಗೆ ಚಿಂತೆ ಮಾಡಿ ಇವತ್ತಿನ ಸಂತೋಷವನ್ನು ಹಾಳು ಮಾಡಿಕೊಳ್ಳುವುದರಲ್ಲಿ ಅರ್ಥವೇ ಇಲ್ಲಾ ಕಾಣ್ರೀ.

**ಡಿ.ವಿ.ಜಿ.ಯವರ ಕಗ್ಗ ದಂತೆ**

।ನಗೆಯೆ ನಿನ್ನಾಸ್ತಿ, ಅದನೆಂದೂ ಕಳೆದುಕೊಳ್ಳದಿರು ।
ಹಗೆಯೆ ನಿನ್ನ ವೈರಿ, ಅದನೊಮ್ಮೆ ನಂಬದಿರು ।

ನಮಗೆಲ್ಲ ಚಿಂತೆ ಏತಕೆ? ಅಂತ ನಾವೇ ನಮ್ಮನ್ನು ಪ್ರಶ್ನೆ ಮಾಡಿಕೊಂಡಾಗ, ಉತ್ತರ ನಮ್ಮೊಳಗಿಂದಲೇ ಪಿಸುಗುಟ್ಟುತ್ತದೆ ?ಚಿಂತೆ ಮಾಡಿ ಸಿಗೋದೇನಿಲ್ಲ, ಖುಷಿಯಾಗಿರೊದರಲ್ಲೇ ಎಲ್ಲಾ ?.... ಏನಂತೀರಿ.........

# ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಜಿಲ್ಲಾ ಘಟಕ ಪುನರ್ ರಚನೆ




**ಮಂಡ್ಯ:** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಜಿಲ್ಲಾ ಘಟಕದ ನೂತನ ಸಮಿತಿಯನ್ನು ರಚಿಸಲಾಗಿದೆ ಎಂದು ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ರಮೇಶ್‌ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದ ಎಲ್ಲ ಜಿಲ್ಲಾ ಸಮಿತಿಗಳನ್ನು ನೂತನವಾಗಿ ರಚಿಸಲಾಗಿದೆ. ಅಂತೆಯೇ ಮಂಡ್ಯದಲ್ಲಿಯೂ ನೂತನ ಸಮಿತಿ ಅಸ್ಥಿತ್ವಕ್ಕೆ ಬಂದಿದೆ ಎಂದರು.

ಜಿಲ್ಲಾಧ್ಯಕ್ಷರಾಗಿ ಮಲ್ಲೇಶ್ ಹೆಬ್ಬಕವಾಡಿ, ಪ್ರಧಾನ ಕಾರ್ಯದರ್ಶಿಯಾಗಿ ಶಿವಪುರ ನಾಗರಾಜ್, ಕಾರ್ಯದರ್ಶಿಗಳಾಗಿ ಚಂದ್ರು ಕೀಲಾರ, ವೈ.ಕೆ.ಶಶಿಧರ್, ಮಾದೇಗೌಡ, ಸಂಘಟನಾ ಕಾರ್ಯದರ್ಶಿಯಾಗಿ ಕೆ.ಆರ್.ಮಂಜುನಾಥ್ ಅವರನ್ನು ಆಯ್ಕೆ ಮಾಡಿ ಆದೇಶಿಸಲಾಗಿದೆ ಎಂದು ಹೇಳಿದರು.

ಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಅರುಣ್‌ಕುಮಾರ್, ಜಿಲ್ಲಾಧ್ಯಕ್ಷ ಮಲ್ಲೇಶ್ ಹೆಬ್ಬಕವಾಡಿ, ಪ್ರಧಾನ ಕಾರ್ಯದರ್ಶಿ ಶಿವಪುರ ನಾಗರಾಜ್, ಕಾರ್ಯದರ್ಶಿಗಳಾದ ಚಂದ್ರು ಕೀಲಾರ, ವೈ.ಕೆ.ಶಶಿಧರ್, ಮಾದೇಗೌಡ, ಸಂಘಟನಾ ಕಾರ್ಯದರ್ಶಿ ಕೆ.ಆರ್.ಮಂಜುನಾಥ್ ಇದ್ದರು.



# ಭಾರತೀಯರಲ್ಲಿ ತಾಂಬೂಲದ ಮಹತ್ವ





| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ನಮ್ಮ ದೇಶದ ಸಂಪ್ರದಾಯದಲ್ಲಿ ತಾಂಬೂಲಕ್ಕೆ ಅದರಲ್ಲೂ ನಿಶ್ಚಿ ತಾರ್ಥ, ಮದುವೆ, ಪೂಜೆ, ವ್ರತ, ಗೃಹಪ್ರವೇಶ ಅನೇಕ ಸಮಾರಂಭಗಳಲ್ಲಿ ತಾಂಬೂಲಕ್ಕೆ ಮಹತ್ವದ ಸ್ಥಾನವಿದೆ.ಹಿಂದೆ ಯುದ್ಧದ ಸಂಧರ್ಭದಲ್ಲಿ ರಣವೀಳ್ಯ ನೀಡುವಲ್ಲಿ ವಿಳ್ಯೇದೆಲೆ ಬಳಕೆಯಾಗುತ್ತಿತ್ತು ಎಂಬ ಉಲ್ಲೇಖವಿದೆ. ಮನೆಗೆ ಬಂದ ಅತಿಥಿಗಳಿಗೆ ಮೊದಲು ಕುಡಿಯಲು ನೀರುಕೊಟ್ಟು ಊಟಬಡಿಸಿ ನಂತರ ತಾಂಬೂಲ ನೀಡುವ ಪದ್ಧತಿ ಇಂದಿಗೂ ಆಚರಣೆಯಲ್ಲಿದೆ.ನಮ್ಮ ಪೂರ್ವಜರು ಯಾವದೇ ಕಾರ್ಯಕ್ರಮಗಳಿಗೆ ಆಮಂತ್ರಣ ಪತ್ರಿಕೆ ಮುದ್ರಿಸುತ್ತಿರಲಿಲ್ಲ.ತಾಂಬೂಲ ನೀಡಿ ಕಾರ್ಯಕ್ರಮಕ್ಕೆ ಆಮಂತ್ರಣ ನೀಡುತ್ತಿದ್ದರು. ಎಲೆ ಅಡಿಕೆಗೆ ತಾಂಬೂಲವೆಂದು ಹೆಸರು. ಅದರ ಜೊತೆ ಸುಣ್ಣವೂ ಬೇಕಾಗುತ್ತದೆ.ಇದರಲ್ಲಿ ಜೀರ್ಣಶಕ್ತಿ ಹೆಚ್ಚಿಸುವ ಆಮ್ಲತೆ ಕಡಿಮೆ ಮಾಡುವ ಕಟುಮಧುರ ಪೌಷ್ಟಿಕವಾದ ವಸ್ತುವಿದೆ.ಬಾಯಿಗೆ ಕೆಂಪೇರುವದಲ್ಲದೇ ಸುವಾಸಿತವಾಗಿರುತ್ತದೆ. ಮನಸ್ಸಿಗೆ ಉತ್ಸಾಹ ನೀಡುತ್ತದೆ.ಶರೀರದ ಶಾಖ ಹೆಚ್ಚಿಸುತ್ತದೆ.ತಾಂಬೂಲದ ಪ್ರಧಾನ ಅಂಗಗಳೆಂದರೆ ವಿಳ್ಯೇದೆಲೆ,ಅಡಿಕೆ,ಸುಣ್ಣ. ಇವು ಮೂರರಿಂದ ಭಿನ್ನ ಪ್ರಯೋಜನಗಳಿವೆ. ಎಲೆಯಿಂದ ಶಾಖ ಹೆಚ್ಚಾದರೆ ಸುಣ್ಣ ತೇವವನ್ನು ಆರಿಸುತ್ತದೆ.

ಅಡಿಕೆಯಿಂದ ಹಲ್ಲು,ವಸಡು,ಜಠರಗಳು ಗಟ್ಟಿಯಾಗುತ್ತವೆ.ತಾಂಬೂಲಕ್ಕೆ ಪಚ್ಚಕರ್ಪೂರ, ಏಲಕ್ಕಿ,ಲವಂಗ,ಜಾಕಾಯಿ,ಜಾಪತ್ರೆ,ಕಾಚು,ಚವನ್ ಮುಂತಾದ ಮಸಾಲೆ ದ್ರವ್ಯ ಬಳಸುತ್ತಾರೆ. ಊಟದ ನಂತರ ಮಿತವಾದ ತಾಂಬೂಲ ಸೇವನೆ ಆರೋಗ್ಯಕ್ಕೆ ಒಳ್ಳೆಯದು.ಇದು ಪ್ರಾಚೀನ ಭಾರತದ ಉತ್ತಮ ಪ್ರಸಾದನ ಸಾಮಗ್ರಿಗಳಲ್ಲಿ ಒಂದಾಗಿದೆ. ಪೂಜಾ, ಶೃಂಗಾರ ಸಾಧನವನ್ನಾಗಿ ಉಪಯೋಗಿಸುವ ರೂಢಿ ಇಂದಿಗೂ ಇದೆ.

ಆರ್ಯರು ಭಾರತಕ್ಕೆ ಬಂದ ಮೇಲೆ ನಾಗ ಜಾತಿಯಿಂದ ಇದರ ಪ್ರಯೋಗ ತಿಳಿದರು. ಇದರಲ್ಲಿ ಬಳಸುವ ಎಲೆಬಳ್ಳಿಗೆ ನಾಗವಲ್ಲಿಯೆಂದೇ ಹೆಸರು.ನಾಗವಲ್ಲಿ ಉದಯನಿಗೆ ವಾಸುಕಿ ನಾಗನಿಂದ ಬಳುವಳಿಯಾಗಿ ಬಂದಿತೆಂಬ ಐತಿಹ್ಯವಿದೆ.ಪಾಂಡವರು ಅಶ್ವಮೇಧಯಾಗಕ್ಕಾಗಿ ನಾಗಜಾತಿಯವರಿಂದ ತರಿಸಲಾಯಿತೆಂದು ಪ್ರತೀತಿಯಿದೆ. ಕ್ರಿ.ಶಪೂರ್ವ 600 ರ ಸಮಯದಲ್ಲಿ ಕಾಶಿಯಲ್ಲಿ ರಚಿತವಾದ 'ಸುಕೃತ ಸಂಹಿತೆ' ಎಂಬ ಆಯುರ್ವೇದ ಗ್ರಂಥದಲ್ಲಿ ಇದರ ವಿಚಾರ ಮೊದಲಿಗೆ ಪ್ರಸ್ತಾವಿತವಾಗೆದೆಯಂದು ತಿಳಿದು ಬರುತ್ತದೆ.ಚರಕ,ಸುಶ್ರೂತರ ಗ್ರಂಥಗಳಿಂದ ಕ್ರಿ.ಶ.ಪೂರ್ವದಲ್ಲೇ ತಾಂಬೂಲದ ಪ್ರಯೋಗವಿತ್ತೆಂದು ತಿಳಿಯುತ್ತದೆ.ವರಾಹಮಿಹಿರ ಕೂಡ ತಾಂಬೂಲದ ಗುಣವನ್ನು ಬಹಳವಾಗಿ ಹೊಗಳಿದ್ದಾನೆ.ಇದರ ಸೇವನೆಯಿಂದ ಮುಖಕ್ಕೆ ಕಾಂತಿ, ಸುಗಂಧ,ವಾಣಿಗೆ ಮಾಧುರ್ಯ,ಉಂಟಾಗುತ್ತದೆಯೆಂದು ಹೇಳಿರುವದು ತಾಂಬೂಲದ ಮಹತ್ವವನ್ನು ತಿಳಿಸುತ್ತದೆ.ಮಧುರವೂ ಕ್ಷಾರಪೂರ್ಣವೂ ,ಕಷಾಯುತ ಗುಣವೂ, ವಾತ ಪರಿಹಾರಿಯೂ, ಕ್ರಿಮಿನಾಶಕವೂ,ಕಫಹರವೂ,ದುರ್ಗಂಧನಾಶಿಕವೂ ಆಗಿರುವದರಿಂದ ಆರೋಗ್ಯಕ್ಕೆ ಒಳ್ಳೆಯದಾಗಿದೆ.

**ದೇವತೆಗಳ ಆವಾಸ ಸ್ಥಾನ:** ವಿಳ್ಯೇದೆಲೆ ತುದಿಯಲ್ಲಿ ಲಕ್ಷ್ಮಿ ವಾಸಿಸುತ್ತಾಳೆ.ಬಲಭಾಗದಲ್ಲಿ ಬ್ರಹ್ಮದೇವರ ವಾಸ,ಮಧ್ಯದಲ್ಲಿ ಸರಸ್ವತಿದೇವಿ,ಎಡಭಾಗದಲ್ಲಿ ಪಾರ್ವತಿದೇವಿ,ವಿಳ್ಯೇದೆಲೆಯ ಸಣ್ಣದಂಟಿನಲ್ಲಿ ಮಹಾವಿಷ್ಣುವಿನ ವಾಸ,ಹಿಂಭಾಗದಲ್ಲಿ ಚಂದ್ರವಾಸ,ವಿಳ್ಯೇದೆಲೆಯ ಎಲ್ಲ ಮೂಲೆಗಳಲ್ಲಿ ಪರಮೇಶ್ವರನ ವಾಸ ,ವಿಳ್ಯೇದೆಲೆಯ ಬುಡದಲ್ಲಿ ಮೃತ್ಯುದೇವತೆಯ ವಾಸವಿರುತ್ತದೆ.ಈ ಕಾರಣಕ್ಕೆ ತಾಂಬೂಲ ಹಾಕಿಕೊಳ್ಳುವಾಗ ತುದಿಭಾಗ ತೆಗೆದು ಹಾಕಿಕೊಳ್ಳಲಾಗುತ್ತದೆ.ವಿಳ್ಯೇದೆಲೆ ತೊಟ್ಟಿನಲ್ಲಿ ಅಹಂಕಾರ ದೇವತೆ,ಹಾಗೂ ದಾರಿದ್ರ್ಯ ಲಕ್ಷ್ಮಿ ಇರುತ್ತಾಳೆ.ಎಲೆ ಹಾಕಿಕೊಳ್ಳುವರಿಗೆ ತೊಟ್ಟನ್ನು ಮುರಿದು ಹಾಕಿಕೊಳ್ಳುವ ಪದ್ಧತಿಯಿದೆ..

# ಜೀವನದ ಒಂದೊಂದು ಖುಷಿಗೂ.... ದುಃಖಕ್ಕೂ ಕಾರಣ ನಮ್ಮ ಮನಸ್ಸು



| ಪುಷ್ಪ ಪ್ರಸಾದ್



ಸಂಜೆ ಸಮಯದಲ್ಲಿ ಹಾಗೇ ಸುಮ್ಮನೇ ಮನೆಯ ಮುಂದಿನ ರಸ್ತೆಯ ಬದಿಯಲ್ಲಿ ವಾಕ್ ಮಾಡ್ತಾ ಇದ್ದೆ. ರಸ್ತೆ ಬದಿಯಲ್ಲಿ ಹರಿದ ಅಂಗಿಯಲ್ಲಿದ್ದ ಹೆಂಗಸೊಬ್ಬಳು ಅಲ್ಲೇ ಒಂದು ಕಲ್ಲಿನ ಮೇಲೆ ಮಸಾಲೆ ರುಬ್ಬುತ್ತಿದ್ದಳು. ಪಕ್ಕದಲ್ಲಿಯೇ ಅವಳ ಇಬ್ಬರು ಮಕ್ಕಳು ಆಟವಾಡುತ್ತಿದ್ದರು. ಆ ನಗುವು ಬಡತನವನ್ನೆಲ್ಲಾ ಮರೆಮಾಚಿತ್ತು. ಖುಷಿಯಿಂದಿರಲು ದುಡ್ಡು ಬೇಕೆಂಬುದಿಲ್ಲ ಎಂಬುದನ್ನು ಮತ್ತೆ ಮತ್ತೆ ಹೇಳುವಂತಿತ್ತು. ಹೌದು ಸ್ವಲ್ಪ ಹೊತ್ತು ಅವರನ್ನೇ ದಿಟ್ಟಿಸಿ ನೋಡುತ್ತಿದ್ದವಳಿಗೆ ಎಲ್ಲಾ ಇದ್ದೂ ಖುಷಿಯಿಂದಿರಲು ಸಾಧ್ಯವಿಲ್ಲ. ಏನೂ ಇಲ್ಲದೇ ಇರುವ ಇವರು ಅದೆಷ್ಟು ನೆಮ್ಮದಿಯಿಂದ ಇದ್ದಾರೆ ಎಂದೆನಿಸಿದ್ದು ಮಾತ್ರ ಸುಳ್ಳಲ್ಲ.

?ಜೀವನದ ಒಂದೊಂದು ಖುಷಿಗೂ ದುಃಖಕ್ಕೂ ಮನಸ್ಸೇ ಮುಖ್ಯವಾದ ಕಾರಣ. ಹೇಗಿದ್ದೀರಾ ಎಂಬ ಪ್ರಶ್ನೆಗೆ ಸೌಖ್ಯವಾಗಿವಿರುವೆನು ಎಂದು ಹೇಳುವುದು ಒಬ್ಬರ ಉತ್ತರವಾಗಿದ್ದರೆ, ಹೇಗೋ ದಿನ ದೂಡುತ್ತಿದ್ದೇವೆ ಎಂಬ ಉತ್ತರ ಮತ್ತೊಬ್ಬರ ಕಡೆಯಿಂದ ಬರುತ್ತದೆ. ಖುಷಿ ಎಂಬುದು ಒಂದು ಮನಸ್ಥಿತಿ ಎಂದರೆ ತಪ್ಪಾಗಲಿಕ್ಕಿಲ್ಲ. ಚಿಕ್ಕಪುಟ್ಟ ಸಂಗತಿಗಳಲ್ಲಿ ಮನಸ್ಪೂರ್ವಕವಾಗಿ ಸಂತೋಷ ಪಡುವ ಜನರಿದ್ದರೆ, ಕಣ್ಣಮುಂದೆ ಇರುವ ಸಾವಿರಾರು ಖುಷಿಯ ವಿಚಾರಗಳನ್ನೇ ಬಿಟ್ಟು, ಬದುಕು ಬೋರಿಂಗ್ ಎಂದು ಆಕಾಶವೇ ತಲೆಯ ಮೇಲೆ ಬಿದ್ದಂತೆ ಕುಳಿತುಕೊಳ್ಳುವ ಜನರಿಗೇನೂ ಕಡಿಮೆಯಿಲ್ಲ. ಬದುಕು ಸವಾಲೆಸೆಯವ ಹಲವಾರು ಪರೀಕ್ಷೆಗಳಲ್ಲಿ ಪಾಸ್ ಆಗುವುದು ಅಷ್ಟು ಸುಲಭದ ಮಾತಲ್ಲ. ಕಷ್ಟಪಟ್ಟರೆ ಯಾವುದೂ ಕಷ್ಟವಲ್ಲ ಅಂತ ತಿಳಿದರೂ ಸಹ, ಇಂತಿಷ್ಟೇ ಸಿಲೆಬಸ್ ಎಂಬ ಮಿತಿಯೂ ಈ ಬದುಕಿನ ಪರೀಕ್ಷೆಗಳಿಗಿಲ್ಲ. ಸಿಗುವ ಸಣ್ಣ ಪುಟ್ಟ ನಲಿವಿನಲ್ಲಿ, ಮನಸ್ಸನ್ನು ಎಷ್ಟು ಖುಷಿಯಾಗಿ ಇರಿಸುತ್ತೇವೆಂಬುದು ನಮ್ಮ ಮೇಲೆ ನಿರ್ಧಾರವಾಗಿರುತ್ತದೆ. ಖುಷಿ ಎಂಬುದು ಬಾಹ್ಯ ವಸ್ತುಗಳು ಅಥವಾ ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿರುವ ಸಂಗತಿಯಲ್ಲ. ಅದು ಸಂಪೂರ್ಣವಾಗಿ ನಮ್ಮ ಆಂತರಿಕ ಮನಸ್ಥಿತಿ ಮತ್ತು ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ. ಸಣ್ಣ ಪುಟ್ಟ ಬದಲಾವಣೆಗಳನ್ನು ಮತ್ತು ಕ್ಷಣಗಳನ್ನು ಆಸ್ವಾದಿಸುವುದರಿಂದ ಜೀವನದಲ್ಲಿ ಶಾಶ್ವತ ನೆಮ್ಮದಿಯನ್ನು ಕಂಡುಕೊಳ್ಳಬಹುದು.



?ಬೆಳ್ಳಂಬೆಳಗಿನ ಸೂರ್ಯೋದಯದಲ್ಲಿ ಮಸುಕಿನಂತಹ ಖುಷಿಗಳಿರುತ್ತವೆ. ಅರಳಿ ನಗುವ ಪುಷ್ಪವನದಂತೆ ಸಣ್ಣ ಪುಟ್ಟ ವಿಷ್ಪಯಗಳಲ್ಲಿಯೂ, ನಗುವಿನಂತೆ ಅರಳಿದ ಭಾವಗಳಲ್ಲಿಯೂ ಒಮ್ಮೊಮ್ಮೆ ಸಂತಸ ಸಿಗುತ್ತದೆ. ನಾವಂದುಕೊಂಡಂತೆಯೇ, ನಮ್ಮಿಷ್ಟದಂತೆಯೇ ಬದುಕು ಸಿಗುತ್ತದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ನಮ್ಮ ಪಾಲಿಗೆ ಬಂದಿದ್ದನ್ನು, ದಕ್ಕಿದ್ದನ್ನು ನಮ್ಮದೇ ಎಂದುಕೊಂಡು ಸಂತೊಷವಾಗಿರೋದು ಒಂದು ಮನಸ್ಥಿತಿ. ಬಯಸಿದ್ದು ದೊರೆಯದಿದ್ದಾಗ ಜೀವನ ಮುಗಿದೇ ಹೋಯಿತೆಂದು ತಿಳಿದುಕೊಳ್ಳುವುದು ಯಾವ ಲೆಕ್ಕದ ನ್ಯಾಯ? ಬದುಕು ಕೊಟ್ಟಿದ್ದೇ ಅಲ್ಪವಾದರೂ, ಅದರಲ್ಲಿಯೇ ಖುಷಿಯನ್ನು ಕಾಣಬೇಕಾಗಿರುವುದಂತೂ ಸತ್ಯ. ಬೇಸರಗಳು, ದುಃಖಗಳು, ದುಗುಡಗಳು, ದುಮ್ಮಾನಗಳು ನಮ್ಮೊಳಗಿನ ಮನಸ್ಸಿನ ಮೇಲೆ ಸವಾರಿ ನಡೆಸುತ್ತಿದ್ದರೂ, ಅದರೆಲ್ಲವನ್ನೂ ಹಿಡಿತದಲ್ಲಿರಿಸುವ ವಾರಸುದಾರರೂ ಕೂಡ ನಾವೇ ಆಗಿದ್ದೇವೆ. ಬಹುಪಾಲು ಜನರು ದೇವರಲ್ಲಿ ನನಗೆ ಕಷ್ಟವನ್ನೇ ಕೊಡಬೇಡ ಎಂದು ಬೇಡಿಕೊಂಡರೆ, ಅಸಾಮಾನ್ಯ ವ್ಯಕ್ತಿ ಮಾತ್ರ ದೇವರೇ ನನಗೆ ಕಷ್ಟವನ್ನು ಎದುರಿಸುವ ಶಕ್ತಿಯನ್ನು ಕೊಡು ಎಂದು ಮೊರೆಯಿಡುತ್ತಾನೆ. ರಸ್ತೆಯ ಬದಿಯಲ್ಲಿ ವಾಸಿಸುವ ರಸ್ತೆಗೆ ಟಾರ್ ಹಾಕುವವರ ಮಕ್ಕಳು ಖುಷಿಯಾಗಿ ಆಟವಾಡುವುದನ್ನು ನೋಡಿದರೆ, ಖುಷಿ ಎಂಬುದೊಂದು ಮನಸ್ಥಿತಿ ಎಂದೆನಿಸದೇ ಇರಲಾರದು. ನಾಳೆಯ ಚಿಂತೆಗಳ ಬಗ್ಗೆ ಇಂದೇ ಯೋಚಿಸಿ, ಇಂದಿನ ಸಂತೋಷ, ಇಂದಿನ ನೆಮ್ಮದಿಯನ್ನೂ ಕಳೆದುಕೊಳ್ಳುವ ಬದಲು, ಇಂದು ಖುಷಿಯಾಗಿರೋಣ, ನಾಳೆ ಕಂಡವರಾರು ಎಂದೆಣಿಸುವ ಮನಸ್ಸು, ಪರಿವರ್ತನೆ ನಮ್ಮಲ್ಲಾದರೆ, ಅದು ಹರುಷ ಪಡುವುದಕ್ಕೆ ನಾವು ಕಂಡುಕೊಳ್ಳುವ ದಾರಿ ಎಂದರೆ ತಪ್ಪಾಗಲಿಕ್ಕಿಲ್ಲ.

?ಬದುಕಿನ ಚಿಕ್ಕ-ಚಿಕ್ಕ ಖುಷಿಯ ಕ್ಷಣಗಳು ನಮ್ಮ ಜೀವನದಲ್ಲಿ ನಮಗೆ ಗೊತ್ತಿದ್ದೊ, ಗೊತ್ತಿಲ್ಲದೆಯೋ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಯಾಂತ್ರಿಕ ಜೀವನದ ಒತ್ತಡದಲ್ಲಿ ಇಂತಹ ಸಣ್ಣ ಪುಟ್ಟ ಕ್ಷಣಗಳನ್ನು ಮರೆತರೆ ಎಂತಹ ದೊಡ್ಡ ನಷ್ಟ ಎದುರಾಗಬಹುದು, ಆದರೆ ಜೀವನದಲ್ಲಾಗುವ ಸಣ್ಣ ಸಣ್ಣ ಘಟನೆಗಳಲ್ಲೂ ಸಂತೋಷವನ್ನು ಕಂಡುಕೊಳ್ಳುವುದರಿಂದ ದುಃಖಕ್ಕೆ ಅಲ್ಲಿ ಜಾಗವಿರುವುದಿಲ್ಲ. "ಇರುವ ಭಾಗ್ಯವ ನೆನೆದು ಬಾರನೆಂಬುದನ್ನು ಬಿಡು ಹರುಷಕ್ಕಿದೆ ದಾರಿಯು- ಮಂಕುತಿಮ್ಮ ಎನ್ನುತ್ತಾರೆ ಡಿವಿಜಿ?. ಸುಖ, ಸಂತೋಷ ನಾಳೆ ಬರುತ್ತದೆ ಎಂದುಕೊಂಡು ಕಾಯುವುದರಲ್ಲಿ ಅರ್ಥ ಇಲ್ಲ. ಈಗ ಸಂತೋಷಪಟ್ಟರೆ ನಾಳೆ ದುಃಖ ಬರುತ್ತದೆಯೋ ಏನೋ ಎಂಬ ದುಗುಡದಲ್ಲೇ ದಿನ ದೂಡುತ್ತೇವೆ. ಬದುಕುವುದು ಹಾಗಲ್ಲ, ನಾಳಿನ ದುಃಖದ ಬಗ್ಗೆ ಹೆಚ್ಚು ಚಿಂತಿಸದೆ ಈ ಕ್ಷಣದ ಸುಖವನ್ನು ಅನುಭವಿಸುವ ಮೂಲಕ ಬದುಕನ್ನು ನಡೆಸುವ ಕ್ರಮ ನಮಗೆ ತಿಳಿದಿರಬೇಕು.

# ಧೈರ್ಯದ ದೀಪ:ಲ್ಯಾನ್ಸ್ ನಾಯಕ್ ಸುಂದರಮ್



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 41



2024ರ ಡಿಸೆಂಬರ್ 19.ಕಾಶ್ಮೀರದ ಕುಲ್ಗಾಮ್‌ನಲ್ಲಿ ತುಂಬಾ ಚಳಿ. ಅಂದು ಉಗ್ರರ ವಿರುದ್ಧ ಕಾರ್ಯಾಚರಣೆ ನಡೆಯಿತು.34 ರಾಷ್ಟ್ರೀಯ ರೈಫಲ್ಸ್‌ನ ಫಿರಂಗಿ ವಿಭಾಗದ ಲ್ಯಾನ್ಸ್ ನಾಯಕ್ ಮಿನ್ನಾಚಿ ಸುಂದರಮ್ ಆ ತಂಡದಲ್ಲಿದ್ದರು.ಗುಂಡಿನ ದಾಳಿಯಲ್ಲಿ ಹಲವು ಗುಂಡುಗಳು ಅವರ ಭುಜಕ್ಕೆ ತಗುಲಿದವು. ಒಂದು ಗುಂಡು ನೇರವಾಗಿ ಮುಖಕ್ಕೆ ಬಿತ್ತು. ರಕ್ತ ಸುರಿಯುತ್ತಿದ್ದರೂ ಅವರು ಹಿಂದೆ ಸರಿಯಲಿಲ್ಲ.ನೋವನ್ನು ಲೆಕ್ಕಿಸದೆ ಶತ್ರುಗಳ ಎದುರು ನಿಂತರು.

ಗಾಯಗೊಂಡ ಸ್ಥಿತಿಯಲ್ಲೇ ಅವರು ಧೈರ್ಯದಿಂದ ಹೋರಾಡಿದರು. ನೇರವಾಗಿ ಎದುರಾದ ಒಬ್ಬ ಉಗ್ರನನ್ನು ಹೊಡೆದು ಹಾಕಿದರು. ಅವರ ಹೋರಾಟದಿಂದ ಇಡೀ ತಂಡಕ್ಕೆ ಬಲ ಬಂತು.ಉಗ್ರರನ್ನು ಸೋಲಿಸಲು ಸಾಧ್ಯವಾಯಿತು. ಶತ್ರುಗಳು ಬೀಳುವವರೆಗೂ ಅವರು ಜಾಗ ಬಿಡಲಿಲ್ಲ.ಈ ದೊಡ್ಡ ಸಾಧನೆಗಾಗಿ 2026ರ ಜೂನ್ 8ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸುಂದರಮ್ ಅವರಿಗೆ ಕೀರ್ತಿ ಚಕ್ರ ಪ್ರಶಸ್ತಿ ನೀಡಿದರು. ಇದು ಶಾಂತಿ ಸಮಯದಲ್ಲಿ ಶೌರ್ಯಕ್ಕೆ ನೀಡುವ ಎರಡನೇ ದೊಡ್ಡ ಗೌರವ.

ಸುಂದರಮ್ ಅವರ ಕಥೆ ನಮಗೆ ಒಂದು ಪಾಠ ಕಲಿಸುತ್ತದೆ. ಕಷ್ಟ ಬಂದಾಗ ಹೆದರದೆ ನಿಲ್ಲಬೇಕು. ನೋವಾದರೂ ಕರ್ತವ್ಯ ಮಾಡಬೇಕು.ನಿಜವಾದ ಧೈರ್ಯ ಎಂದರೆ ಭಯವಿದ್ದರೂ ಮುಂದೆ ಹೋಗುವುದು.ಅವರ ಬದುಕು ನಮ್ಮೆಲ್ಲರಿಗೂ ಸ್ಫೂರ್ತಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,